# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ತುಮಕೂರು

**(ಟಿ.ಜಿ.ಎಂ.ಸಿ. ಬ್ಯಾಂಕ್ ಲಿ.,)**

**ಇದರ ಉಪವಿಧಿಗಳು**

## ಅಧ್ಯಾಯ – 1

**ಪೀಠಿಕೆ**

### ಹೆಸರು, ವಿಳಾಸ ಮತ್ತು ಕಾರ್ಯಕ್ಷೇತ್ರದ ವ್ಯಾಪ್ತಿ

**1. ಬ್ಯಾಂಕಿನ ಹೆಸರು :**

ಈ ಬ್ಯಾಂಕಿನ ಹೆಸರು ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ತುಮಕೂರು, (ಟಿ.ಜಿ.ಎಂ.ಸಿ.ಬ್ಯಾಂಕ್ ಲಿ.,) ಎಂದು ಇರತಕ್ಕದ್ದು.

**2. ನೋಂದಾಯಿತ ಕಛೇರಿ:**

ಬ್ಯಾಂಕಿನ ನೋಂದಾಯಿತ ಕಛೇರಿಯ ವಿಳಾಸವು ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ತುಮಕೂರು, (ಟಿ.ಜಿ.ಎಂ.ಸಿ. ಬ್ಯಾಂಕ್ ಲಿ.,) ಬಿ.ಹೆಚ್. ರಸ್ತೆ, ತುಮಕೂರು–572 103 ಎಂದು ಇರತಕ್ಕದ್ದು.

ಈ ವಿಳಾಸದಲ್ಲಿ ಯಾವುದೇ ಬದಲಾವಣೆಯಾದರೂ ಬದಲಾವಣೆಯಾದ ಹದಿನಾಲ್ಕು ದಿವಸಗಳೊಳಗಾಗಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಮತ್ತು ಸಹಕಾರ ಸಂಘಗಳ ನಿಬಂಧಕರಿಗೆ ತಿಳಿಸುವುದಲ್ಲದೆ ಯಾವುದಾದರೂ ಒಂದು ಸ್ಥಳೀಯ ಪತ್ರಿಕೆಯಲ್ಲಿ ಕೂಡಲೇ ಬದಲಾವಣೆಯ ಬಗ್ಗೆ ಪ್ರಕಟಿಸತಕ್ಕದ್ದು ಮತ್ತು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು.

**3. ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :**

ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಇಡೀ ಕರ್ನಾಟಕ ರಾಜ್ಯದ ವ್ಯಾಪ್ತಿಗೆ ಸೀಮಿತವಾಗಿರತಕ್ಕದ್ದು.ಈ ಬಗ್ಗೆ ಯಾವುದೇ ಬದಲಾವಣೆಯಾಗಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕು (ಜಿಲ್ಲಾವ್ಯಾಪ್ತಿಯೊಳಗಿನ ಕಾರ್ಯಕ್ಷೇತ್ರ ವಿಸ್ತರಣೆ ಹೊರತುಪಡಿಸಿ) ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ರಿಸರ್ವ್ ಬ್ಯಾಂಕಿನ ಪೂರ್ವಭಾವಿ ಮಂಜೂರಾತಿಯು ಅವಶ್ಯಕ.

## ಅಧ್ಯಾಯ – 2

## ವಿವರಣೆಗಳು

**4. ಪದಗಳ ಅರ್ಥ ವಿವರಣೆ :**

ಪದಗಳು ಮತ್ತು ಪದವಿನ್ಯಾಸಗಳು ಸಂದರ್ಭಕ್ಕನುಸಾರವಾಗಿ ಬೇರೆ ಅರ್ಥ ನೀಡದಿದ್ದಲ್ಲಿ ಈ ಉಪವಿಧಿಗಳ ಶಬ್ದಾರ್ಥಗಳು ಕಾಯಿದೆ (ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, 1959) ಮತ್ತು ನಿಯಮ (ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960) ಗಳಲ್ಲಿನ ಶಬ್ದಾರ್ಥಗಳನ್ನು ಅಥವಾ ಆಗಿಂದಾಗ್ಗೆ ಕಾಯ್ದೆಯಲ್ಲಿ / ನಿಯಮಗಳಲ್ಲಿ ತರಲಾಗುವ ಮಾರ್ಪಾಟುಗಳಲ್ಲಿನ ಶಬ್ದಾರ್ಥಗಳನ್ನು ಒಳಗೊಂಡಿರತಕ್ಕದ್ದು.

4.1 **"ಕಾಯಿದೆ (ಆ್ಯಕ್ಟ್)** : ಎಂದರೆ ಕಾಲಕಾಲಕ್ಕೆ ತಿದ್ದುಪಡಿಯಾದ 1959 ನೆಯ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ.

4.2 **"ನಿಯಮಗಳು" (ರೂಲ್ಸ್)** : ಎಂದರೆ ಕಾಲಕಾಲಕ್ಕೆ ತಿದ್ದುಪಡಿಯಾದ 1960 ನೆಯ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ.

4.3 **"ಸರಕಾರ"** : ಎಂದರೆ ಕರ್ನಾಟಕ ರಾಜ್ಯ ಸರಕಾರ.

4.4 **"ರಿಜಿಸ್ಟ್ರಾರ್"** ಎಂದರೆ, ಕಾಯ್ದೆಯ ಮತ್ತು ನಿಯಮಗಳ ಅಡಿ ಸಹಕಾರ ಸಂಘಗಳ ರಿಜಿಸ್ಟ್ರಾರನ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಕಗೊಂಡ ಅಧಿಕಾರಿ.

4.5 **"ಕಾರ್ಯಕ್ಷೇತ್ರ''** ಎಂದರೆ ಬ್ಯಾಂಕಿನ ಅನುಮೋದಿಸಲ್ಪಟ್ಟ ಬ್ಯಾಂಕಿನ ಕಾರ್ಯವ್ಯಾಪ್ತಿಯ ಪ್ರದೇಶ ಮತ್ತು ಬ್ಯಾಂಕಿಗೆ ಸದಸ್ಯತ್ವವನ್ನು ಸದರಿ ಪ್ರದೇಶದಿಂದ ತೆಗೆದುಕೊಳ್ಳತಕ್ಕದ್ದು.

4.6 **"ಬ್ಯಾಂಕ್"** : ಎಂದರೆ ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.," ತುಮಕೂರು (ಟಿ.ಜಿ.ಎಂ.ಸಿ. ಬ್ಯಾಂಕ್ ಲಿ.,) ಮತ್ತು ಇದರ (ಅ) ಪ್ರಧಾನ ಕಛೇರಿ, (ಆ) ಆಡಳಿತ ಕಛೇರಿ, (ಇ) ಶಾಖೆ, (ಈ) ಉಪಶಾಖೆ, (ಉ) ಉಪಕಛೇರಿ, (ಊ) ವಿಸ್ತರಣಾ ಕೌಂಟರ್ ಮತ್ತು (ಋ) ಪಾವತಿ ಕಛೇರಿ (ಪೇ ಆಫೀಸ್) ಗಳು.

4.7 ಉಪನಿಬಂಧನೆಗಳು ಎಂಬ ಪದವು ಎಲ್ಲೆಲ್ಲಿ ಬರುತ್ತದೆಯೋ ಅಲ್ಲಿ ಉಪವಿಧಿಗಳು ಎಂದು ತಿದ್ದುಪಡಿ ಮಾಡಿಕೊಳ್ಳುವುದು.

4.8 **"ನಿರ್ದೇಶಕ ಮಂಡಳಿ / ಆಡಳಿತ ಮಂಡಳಿ / ಮಂಡಳಿ"** ಎಂದರೆ, ಬ್ಯಾಂಕಿನ ಕಾರ್ಯನಿರ್ವಹಣೆ, ಆಡಳಿತ ಮತ್ತು ವ್ಯವಹಾರಗಳ ವ್ಯವಸ್ಥಾಪನೆ, ನಿಯಂತ್ರಣ, ಮೇಲ್ವಿಚಾರಣೆ ಮುಂತಾದ ಅಧಿಕಾರಗಳನ್ನು ಪಡೆದ ಯಾವುದೇ ಹೆಸರಿನಿಂದ ಕರೆಯಲ್ಪಡುವ ಮಂಡಳಿ ಅಥವಾ ಆಡಳಿತ ನಿಕಾಯ.

4.9 **"ಅಧ್ಯಕ್ಷ''**: ಎಂದರೆ, ಕಾಯ್ದೆಯ, ನಿಯಮಗಳ ಮತ್ತು ಈ ಉಪವಿಧಿಗಳ ಪ್ರಕಾರ ಅಧ್ಯಕ್ಷನಾಗಿ ಚುನಾಯಿತನಾದ ನಿರ್ದೇಶಕ.

4.10 **"ಉಪಾಧ್ಯಕ್ಷ''** : ಎಂದರೆ, ಕಾಯ್ದೆಯ, ನಿಯಮಗಳ ಮತ್ತು ಈ ಉಪವಿಧಿಗಳ ಪ್ರಕಾರ ಉಪಾಧ್ಯಕ್ಷನಾಗಿ ಚುನಾಯಿತನಾದ ನಿರ್ದೇಶಕ.

4.11 **"ನಿರ್ದೇಶಕ''** : ಎಂದರೆ, ಅಧಿನಿಯಮದ, ನಿಯಮಗಳ ಮತ್ತು ಈ ಉಪವಿಧಿಗಳ ಪ್ರಕಾರ ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಅಥವಾ ಸಹಮತದಿಂದ ಸೇರಿಸಿಕೊಂಡ (ಕೋ–ಆಪ್ಟೆಡ್) ಮಂಡಳಿಯ ಸದಸ್ಯ.

4.12 **"ಸದಸ್ಯ''** ಎಂದರೆ, ಬ್ಯಾಂಕಿನ ನೋಂದಣಿಯ ಮೊದಲಿಗೆ ಷೇರು ಧನ ನೀಡಿದ ವ್ಯಕ್ತಿ ಅಥವಾ ಬ್ಯಾಂಕಿನ ನೋಂದಣಿಗಾಗಿಸಲ್ಲಿಸಿದ ಅರ್ಜಿಯಲ್ಲಿ ಸಹಿ ಮಾಡಿದ ವ್ಯಕ್ತಿ ಅಥವಾ ನೋಂದಣಿ ಆದನಂತರ ಕಾಯ್ದೆಯ, ನಿಯಮಗಳ ಮತ್ತು ಉಪವಿಧಿಗಳ ಪ್ರಕಾರ ಸದಸ್ಯತ್ವ ಪಡೆದ ವ್ಯಕ್ತಿ. ಸದಸ್ಯ ಎಂಬ ಪದ ಸಹಸದಸ್ಯ ಮತ್ತು ನಾಮಮಾತ್ರ ಸದಸ್ಯರನ್ನೂ ಒಳಗೊಂಡಿರುತ್ತದೆ

4.13 **"ಸಹಸದಸ್ಯ"** ಎಂದರೆ, ಈ ಉಪವಿಧಿಗಳ ಪ್ರಕಾರ ಸಹಸದಸ್ಯನೆಂದು ಸೇರಿಸಲ್ಪಟ್ಟ ವ್ಯಕ್ತಿ.

4.14 **"ನಾಮಮಾತ್ರ ಸದಸ್ಯ"(ನಾಮಿನಲ್ ಮೆಂಬರ್)** : ಎಂದರೆ ಈ ಉಪವಿಧಿಗಳ ಪ್ರಕಾರ ನಾಮಮಾತ್ರ ಸದಸ್ಯನೆಂದು ಸೇರಿಸಲ್ಪಟ್ಟ ವ್ಯಕ್ತಿ.

4.15 **"ಉಪ–ಸಮಿತಿ" (ಸಬ್ ಕಮಿಟಿ)** : ಎಂದರೆ ಉಪವಿಧಿಗಳ ಅನ್ವಯ ನಿರ್ದಿಷ್ಟವಾದ ಕಾರ್ಯನಿಮಿತ್ತ ಮತ್ತು ನಿರ್ದಿಷ್ಟಪಡಿಸಿದ ಅವಧಿಗೆ ನಿರ್ದೇಶಕ ಮಂಡಳಿಯಿಂದ ನೇಮಿಸಲ್ಪಟ್ಟ ಚುನಾಯಿಸಲ್ಪಟ್ಟ ಯಾವುದೇ ಹೆಸರಿನಿಂದ ಕರೆಯಲ್ಪಡುವ ಸಮಿತಿ.

4.16 **"ಮುಖ್ಯಕಾರ್ಯನಿರ್ವಾಹಕ"** ಎಂದರೆ, ವ್ಯವಸ್ಥಾಪಕ ನಿರ್ದೇಶಕ / ಕಾರ್ಯದರ್ಶಿ / ಪ್ರಧಾನ ವ್ಯವಸ್ಥಾಪಕ / ವ್ಯವಸ್ಥಾಪಕ ಎಂಬ ಯಾವುದೇ ಹೆಸರಿನಿಂದ ಕರೆಯಲ್ಪಡುವ ಮತ್ತು ಕಾಯ್ದೆಯ ಕಲಂ 29ಜಿ ಪ್ರಕಾರ ಮಂಡಳಿಯಿಂದ ನೇಮಕಗೊಂಡ ಮತ್ತು ಕಾಯ್ದೆಯ, ನಿಯಮಗಳ ಮತ್ತು ಉಪವಿಧಿಗಳ ಪ್ರಕಾರ ಮುಖ್ಯಕಾರ್ಯನಿರ್ವಾಹಕನ ಪ್ರಕಾರ್ಯಗಳನ್ನು ನಿರ್ವಹಿಸುವ ಬ್ಯಾಂಕಿನ ಅಧಿಕಾರಿ.

4.17 **"ಮುದ್ರೆ" (ಸೀಲ್)** : ಎಂದರೆ ಬ್ಯಾಂಕಿನ ಸಾಮಾನ್ಯ ಮುದ್ರೆ.

4.18 ''ಸಹಕಾರ ವರ್ಷ'' : ಎಂದರೆ, ಪ್ರತಿ ವರ್ಷ ಏಪ್ರಿಲ್ 1 ರಿಂದ ಪ್ರಾರಂಭಗೊಂಡು ಮುಂದಿನ ವರ್ಷದ ಮಾರ್ಚ್ ತಿಂಗಳ 31ನೆಯ ದಿನದಂದು ಅಂತ್ಯಗೊಳ್ಳುವ ಬ್ಯಾಂಕಿನ ಆರ್ಥಿಕ ವರ್ಷ.

4.19 **"ಪಾಲುದಾರ ಸಂಸ್ಥೆ" (ಫರ್ಮ್)** : ಎಂದರೆ ಭಾರತದ ಪಾಲುದಾರಿಕೆ ಕಾಯಿದೆ 1932ರಲ್ಲಿ ವಿವರಿಸಿರುವಂತೆ ಇರುವ ಪಾಲುದಾರರ ಸಂಸ್ಥೆ.

4.20 **"ನೋಂದಾಯಿಸಿದ ಸಂಘ" (ರಿಜಿಸ್ಟರ್ಡ್ ಸೊಸೈಟಿ)** : ಎಂದರೆ 1960 ರ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಯ ಅನ್ವಯ ನೋಂದಾಯಿಸಲ್ಪಟ್ಟ ಸಂಘ.

4.21 **"ವ್ಯಕ್ತಿ" (ಪರ್ಸನ್)** : ಎಂದರೆ ಪ್ರಾಪ್ತ ವಯಸ್ಕನಾದ ಮನುಷ್ಯ / ವ್ಯಕ್ತಿ ಅಥವಾ ಮಾಲೀಕತ್ವ ಸಂಸ್ಥೆ ಅಥವಾ 1932 ರ ಭಾರತೀಯ ಪಾಲುದಾರಿಕೆ ಕಾಯ್ದೆ ಅಡಿ ನೋಂದಾಯಿಸಲ್ಪಟ್ಟ ಪಾಲುದಾರಿಕೆ ಸಂಸ್ಥೆ, ಕಂಪನಿ, ಭಾರತೀಯ ಜೀವ ವಿಮಾ ನಿಗಮ, ಬಾಡಿ ಕಾರ್ಪೋರೇಟ್ ಮತ್ತು ರಾಜ್ಯ ಸರ್ಕಾರದಿಂದ ಅಧಿಸೂಚನೆ ಆಗತಕ್ಕಂತಹ ಇತರೆ ಸಹಕಾರೇತರ ಸಂಸ್ಥೆಗಳು.

4.22 **"ಕಂಪನಿ"** ಎಂದರೆ ಭಾರತೀಯ ಕಂಪನಿಗಳ ಕಾಯ್ದೆ 1956 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕಂಪನಿ.

4.23 **"ಬಾಡಿ ಕಾರ್ಪೋರೇಟ್"** ಎಂದರೆ ಹಾಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚನೆಗೊಂಡ ಅಥವಾ ನೋಂದಾಯಿಸಲಾದ ಸಂಸ್ಥಾರೂಪದ ವ್ಯಕ್ತಿ.

4.24 **"ಅವನು"** : ಎಂದರೆ "ಅವಳು' ಸಹ ಒಳಗೊಂಡಿರುತ್ತದೆ.

4.25 **"ಸಾಮಾನ್ಯ ನಿಕಾಯ"** (General Body) ಎಂದರೆ ಬ್ಯಾಂಕಿನ ಎಲ್ಲಾ ಸದಸ್ಯರು.

4.26 **"ಸಾಮಾನ್ಯ ಸಭೆ"** ಎಂದರೆ ಅಧಿನಿಯಮದ, ನಿಯಮಗಳ ಮತ್ತು ಬ್ಯಾಂಕಿನ ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ಕರೆಯಲ್ಪಟ್ಟ ಮತ್ತು ನಡೆಸಲ್ಪಟ್ಟ ಸಾಮಾನ್ಯ ನಿಕಾಯದ ಸಭೆ.

4.27 **"ಪ್ರತಿನಿಧಿ"** ಯೆಂದರೆ ಬ್ಯಾಂಕಿನ ಬಿಡಿವ್ಯಕ್ತಿ ಸದಸ್ಯರ ಗುಂಪಿನಿಂದ ಕಾಯ್ದೆಗೆ, ನಿಯಮಗಳಿಗೆ ಮತ್ತು ಉಪವಿಧಿಗಳಿಗೆ ಅನುಸಾರವಾಗಿ ಪ್ರಾತಿನಿಧಿಕ ಸಾಮಾನ್ಯ ನಿಕಾಯದಲ್ಲಿ ಆ ಗುಂಪನ್ನು ಪ್ರತಿನಿಧಿಸಲು ಮತ್ತು ಅದರ ಪರವಾಗಿ ಭಾಗವಹಿಸಲು ಮತ್ತು ತತ್ಸಂಬಂಧದ ನಿರ್ದೇಶಕರ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತ ನೀಡಲು ಚುನಾಯಿತನಾದ ಒಬ್ಬ ಸದಸ್ಯ.

4.28 **"ಪ್ರಾತಿನಿಧಿಕ ಸಾಮಾನ್ಯ ನಿಕಾಯ"** ಎಂದರೆ ಬ್ಯಾಂಕಿನ ಎಲ್ಲಾ ಪ್ರತಿನಿಧಿಗಳು.

4.29 **"ಪ್ರಾತಿನಿಧಿಕ ಸಾಮಾನ್ಯ ಸಭೆ"** ಎಂದರೆ, ಕಾಯ್ದೆಯ, ನಿಯಮಗಳ ಮತ್ತು ಉಪವಿಧಿಗಳ ಅನುಸಾರವಾಗಿ ಕರೆದ ಮತ್ತು ನಡೆಸಲಾದ ಬ್ಯಾಂಕಿನ ಎಲ್ಲಾ ಪ್ರತಿನಿಧಿಗಳ ಒಂದು ಸಭೆ.

4.30 **"ಡೆಲಿಗೇಟ್"** ಎಂದರೆ, ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಆಡಳಿತ ಮಂಡಳಿಯಿಂದ ನೇಮಕಗೊಂಡ ಬ್ಯಾಂಕಿನ ಒಬ್ಬ ನಿರ್ದೇಶಕ.

4.**31** **"ಸಹಕಾರಿ ಚುನಾವಣಾ ಪ್ರಾಧಿಕಾರ"** ಎಂದರೆ ಬ್ಯಾಂಕಿನ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧದ ಮತದಾರರ ಪಟ್ಟಿ ತಯಾರಿಸುವ ನಿಹಿತವಾದ ಅಧಿಕಾರವನ್ನುಳ್ಳ ಕಾಯ್ದೆಯಡಿಯಲ್ಲಿ ರಚಿತವಾದ ಸಹಕಾರ ಚುನಾವಣಾ ಪ್ರಾಧಿಕಾರ.

4.32 **"ಜಿಲ್ಲಾ ಚುನಾವಣಾಧಿಕಾರಿ" :** ಎಂದರೆ, ಯಾವುದೇ ಜಿಲ್ಲೆಗೆ ಆ ಜಿಲ್ಲೆಯಲ್ಲಿ ನೊಂದಾಯಿತ ಕಛೇರಿ ಇರುವ ಎಲ್ಲಾ ಸಹಕಾರ ಸಂಘಗಳ, ಎಲ್ಲಾ ಚುನಾವಣೆಗಳನ್ನು ನಡೆಸುವುದಕ್ಕೆ ಮತ್ತು ತತ್ಸಂಬಂಧದ ಮತದಾರರ ಪಟ್ಟಿಯನ್ನು ತಯಾರಿಸುವುದಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಸಮನ್ವಯಗೊಳಿಸಲು ಜಿಲ್ಲಾ ಚುನಾವಣಾಧಿಕಾರಿ ಎಂದು ಸಹಕಾರ ಚುನಾವಣಾ ಆಯೋಗದಿಂದ ನೇಮಿಸಲ್ಪಟ್ಟ ಒಬ್ಬ ಅಧಿಕಾರಿ.

4.33**""ಚುನಾವಣಾಧಿಕಾರಿ"** ಎಂದರೆ, ಸಹಾಯಕ ನಿಬಂಧಕರು/ ಉಪನಿಬಂಧಕರು, ಸಹಕಾರ ಸಂಘಗಳ ಜಂಟಿ ನಿಬಂಧಕರನ್ನು ಹೊರತುಪಡಿಸಿ ಸಹಕಾರಿ ಚುನಾವಣಾ ಪ್ರಾಧಿಕಾರದಿಂದ ಜಿಲ್ಲೆ/ಪ್ರಾಂತ್ಯ/ರಾಜ್ಯಮಟ್ಟದಲ್ಲಿ, ನಿರ್ದಿಷ್ಠ ಅವಧಿಗೆ ನೇಮಕಗೊಂಡ ಒಬ್ಬ ಅಧಿಕಾರಿ,

**4.34** **"ರಿಟರ್ನಿಂಗ್ ಆಫೀಸರ್"** ಎಂದರೆ, ಪ್ರತ್ಯೇಕ ಸಹಕಾರ ಬ್ಯಾಂಕಿಗೆ ಸಹಾಯಕ ನಿಬಂಧಕರು/ ಉಪನಿಬಂಧಕರು, ಸಹಕಾರ ಸಂಘಗಳ ಜಂಟಿ ನಿಬಂಧಕರನ್ನು ಹೊರತುಪಡಿಸಿ ಸಹಕಾರಿ ಚುನಾವಣಾ ಪ್ರಾಧಿಕಾರದಿಂದ ರಿಟರ್ನಿಂಗ್ ಆಫೀಸರ್ ಎಂದು ನೇಮಿಸಲ್ಪಟ್ಟ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ನೇಮಕವಾದ ಒಬ್ಬ ಅಧಿಕಾರಿ, ಇದು ರಿಟರ್ನಿಂಗ್ ಅಧಿಕಾರಿಯ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಿಸಲ್ಪಟ್ಟ ಒಬ್ಬ ಸಹಾಯಕ ರಿಟರ್ನಿಂಗ್ ಅಧಿಕಾರಿಯನ್ನೂ ಒಳಗೊಳ್ಳುತ್ತದೆ.

## ಅಧ್ಯಾಯ – 3

## ಉದ್ದೇಶಗಳು

**5. ಬ್ಯಾಂಕಿನ ಧ್ಯೇಯ ಮತ್ತು ಉದ್ದೇಶಗಳು ಈ ಕೆಳಕಂಡಂತೆ ಇರತಕ್ಕದ್ದು:**

5.1 "ಬ್ಯಾಂಕಿನ ಸದಸ್ಯರು, ಸಹಸದಸ್ಯರು, ನಾಮಮಾತ್ರ ಸದಸ್ಯರು, ಮತ್ತು ಬ್ಯಾಂಕಿನ ಠೇವಣಿದಾರರಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಭಾವನೆಗಳನ್ನು ಪ್ರೋತ್ಸಾಹಿಸುವುದು.

5.2 1949 ರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ (ಸಹಕಾರ ಸಂಘಗಳಿಗೆ ಅನ್ವಯವಾಗುವ) ಕಲಂ 5(ಬಿ) ನಲ್ಲಿ ವಿವರಿಸಿರುವಂತೆ, ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವುದು ಮತ್ತು ಸದರಿ ಕಾಯ್ದೆಯ ಕಲಂ 6 ರ ಪ್ರಕಾರ ಇತರೆ ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವುದು.

5.3 ಹಣವನ್ನು ಸಂಗ್ರಹಿಸುವುದು ಅಥವಾ ಸಾಲವಾಗಿ ಪಡೆಯುವುದು.

5.4 ಸದಸ್ಯರ ಮತ್ತು ಸಮಾಜದಲ್ಲಿನ ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಯೋಜನೆಗಳನ್ನು ತಯಾರಿಸುವುದು ಮತ್ತು ಹಣಕಾಸಿನ ಸಹಾಯ ಮಾಡುವುದು.

5.5 ಕಂತು ಖರೀದಿಯ (ಹೈರ್ ಪರಚೇಸ್) ಅಥವಾ ತೋರಾಧಾರ (ಹೈಪಾತಿಕೇಷನ್)ದ ಆಧಾರದ ಮೇಲೆ ಮೋಟಾರು ವಾಹನಗಳ ಕಾಯ್ದೆಯಲ್ಲಿ ವಿವರಿಸಿರುವಂತೆ ಮೋಟಾರು ವಾಹನಗಳನ್ನು ಕೊಳ್ಳಲು ಅಥವಾ ಯಂತ್ರೋಪಕರಣಗಳನ್ನು ಮತ್ತು ಇತರೆ ಯಂತ್ರಗಳನ್ನು ಕೊಳ್ಳಲು ಸದಸ್ಯರಿಗೆ ಸಾಲ ಒದಗಿಸುವುದು.

5.6 ಬ್ಯಾಂಕಿನ ವ್ಯವಹಾರಗಳ ಅವಶ್ಯಕತೆಗಾಗಿ ಮತ್ತು ಅನುಕೂಲಕ್ಕಾಗಿ ನಿವೇಶನ, ಕಟ್ಟಡಗಳನ್ನು ಹೊಂದುವುದು, ಸ್ವಾಧೀನ ಪಡಿಸಿಕೊಳ್ಳುವುದು, ಕಟ್ಟಡ ನಿರ್ಮಿಸುವುದು, ಬದಲಾವಣೆ ಮಾಡುವುದು ಮತ್ತು ಇತರ ಕಾರ್ಯಗಳನ್ನು ಕೈಗೊಳ್ಳುವುದು.

5.7 ಭಾರತೀಯ ರಿಸರ್ವ ಬ್ಯಾಂಕ್ ನ ಪೂರ್ವಾನುಮತಿ ಪಡೆದು ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಶಾಖೆಗಳನ್ನು, ಉಪಶಾಖೆಗಳನ್ನು, ಪಾವತಿ ಕಛೇರಿ ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡಬಹುದಾದ ಕಛೇರಿ ಮುಂತಾದವುಗಳನ್ನು ತೆರೆಯುವುದು.

5.8 ಗ್ರಾಹಕರ ಪರವಾಗಿ ಎಲ್ಲಾ ವಿಧವಾದ ಮುಚ್ಚಳಿಕೆಗಳು, ಹುಂಡಿಗಳು, ಪ್ರಮಾಣ ಪತ್ರಗಳು, ಡ್ರಾಫ್ಟ್‌ಗಳು, ವಾರೆಂಟ್‌ಗಳು, ಷೇರು ಪ್ರಮಾಣ ಪತ್ರಗಳು ಮತ್ತಿತರ ಆಧಾರ ಪತ್ರಗಳನ್ನು ಹೊರಡಿಸುವುದು, ಅಂಗೀಕರಿಸುವುದು, ಖರೀದಿಸುವುದು ಅಥವಾ ಮಾರಾಟ ಮಾಡುವುದು.

5.9 ಬ್ಯಾಂಕಿನ ಹೆಚ್ಚುವರಿ ಸಂಪನ್ಮೂಲಗಳನ್ನು ಸರಕಾರದ ಪ್ರಾಮಿಸರಿ ನೋಟುಗಳಲ್ಲಿ, ಋಣ ಪತ್ರಗಳಲ್ಲಿ, ಷೇರುಗಳಲ್ಲಿ ಮತ್ತು ಸರಕಾರ ಖಾತರಿ ಹೊಂದಿದ ಸಹಕಾರ ಸಂಘಗಳ ಸಾಲ ಪತ್ರಗಳಲ್ಲಿ ಮತ್ತು ಕಾಯ್ದೆಯ ಕಲಂ 58 ರನ್ವಯ ಇತರ ಸಂಸ್ಥೆಗಳಲ್ಲಿ ತೊಡಗಿಸುವುದು.

5.10 ಸಹಕಾರ ಶಿಕ್ಷಣವನ್ನು ಪ್ರೋತ್ಸಾಹಿಸಲು ನಿಧಿಗಳನ್ನು ಸ್ಥಾಪಿಸುವುದು.

5.11 ನಿರ್ದೇಶಕ ಮಂಡಳಿಯಿಂದ ರೂಪಿತವಾದ ನಿಯಮಗಳಿಗನುಸಾರವಾಗಿ ಸಿಬ್ಬಂದಿಯವರ ಅಥವಾ ಸದಸ್ಯರ ಹಾಗೂ ಸಿಬ್ಬಂದಿಯವರ ಆಶ್ರಿತರ ಅನುಕೂಲಕ್ಕಾಗಿ ನಿವ್ವಳ ಲಾಭದಿಂದ ನಿಧಿಯನ್ನು ಸ್ಥಾಪಿಸುವುದು ಅಥವಾ ನೆರವು ನೀಡುವುದು.

5.12 ನಿರ್ದೇಶಕ ಮಂಡಳಿಯು ರೂಪಿಸುವ ನಿಯಮಗಳ ಮಿತಿಯಲ್ಲಿ ಬ್ಯಾಂಕಿನ ಸದಸ್ಯರ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ನಿಧಿಯನ್ನು ರೂಪಿಸಿಕೊಳ್ಳುವುದು.

5.13 ನಿರ್ದೇಶಕ ಮಂಡಳಿಯಿಂದ ರೂಪಿತವಾದ ನಿಯಮಗಳಿಗೆ ಅನುಸಾರವಾಗಿ ಬ್ಯಾಂಕಿನ ಸದಸ್ಯರ ಅಲ್ಪಾವಧಿ ಹುಂಡಿಗಳನ್ನು ಮತ್ತು ವಹಿವಾಟಿನ ಬಿಲ್ಲುಗಳನ್ನು ವಟ್ಟಾವಣೆ (ಡಿಸ್ಕೌಂಟ್) ಮಾಡುವುದು.

5.14 ಸದಸ್ಯರ ಹಾಗೂ ಗ್ರಾಹಕರ ಪರವಾಗಿ ಖಾತರಿಗಾರನಾಗಿ (ಗ್ಯಾರಂಟರ್) ವರ್ತಿಸುವುದು ಮತ್ತು ಸರಕಾರ ಅಥವಾ ಅರೆ ಸರಕಾರಿ ಸಂಸ್ಥೆಗಳಿಗೆ ಖಾತರಿ ನೀಡುವುದು.

5.15 ನಿರುದ್ಯೋಗಸ್ಥರಿಗೆ ಸ್ವಂತ ಉದ್ಯಮ/ ಉದ್ಯೋಗ ಸ್ಥಾಪಿಸಲು ಆರ್ಥಿಕ ಮತ್ತು ತಾಂತ್ರಿಕ ನೆರವನ್ನೊದಗಿಸುವುದು.

5.16 ಸಾಲ ಮತ್ತು ಮುಂಗಡಗಳನ್ನು ಕೊಡಲು ಮತ್ತು ಪ್ರವಾಸಿ ಚೆಕ್ಕುಗಳನ್ನು ನೀಡಲು ವ್ಯವಸ್ಥೆ ಮಾಡುವುದು.

5.17 ಸಣ್ಣ ಕೈಗಾರಿಕೆಗಳಿಗೆ, ಗೃಹ ಕೈಗಾರಿಕೆಗಳಿಗೆ, ವಾಹನ ಸೌಕರ್ಯ ಒದಗಿಸುವ ಉದ್ದಿಮೆದಾರರಿಗೆ ಮತ್ತು ಸ್ವಯಂ ಉದ್ಯೋಗದಲ್ಲಿ ತೊಡಗಿರುವವರಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಅಥವಾ ವ್ಯಾಪಾರ ವ್ಯವಹಾರಗಳನ್ನು ಪ್ರಾರಂಭಿಸಲು ಆರ್ಥಿಕ ಮತ್ತು ತಾಂತ್ರಿಕ ಸಹಾಯ ಒದಗಿಸುವುದು.

5.18 ಸಾಲ ಮತ್ತು ಮುಂಗಡಗಳನ್ನು ಒದಗಿಸುವ ಸಲುವಾಗಿ ಬ್ಯಾಂಕುಗಳೊಡನೆ ಮತ್ತು ಇತರ ಆರ್ಥಿಕ ನೆರವು ನೀಡುವ ಸಂಸ್ಥೆಗಳೊಂದಿಗೆ ಒಪ್ಪಂದ ಏರ್ಪಡಿಸುವುದು.

5.19 ಧಾರ್ಮಿಕ ಸಂಸ್ಥೆ, ವಿಶ್ವಸ್ಥ ಮಂಡಳಿ ಮತ್ತು ಇತರೆ ಸಾರ್ವಜನಿಕ ಸಂಘ ಸಂಸ್ಥೆಗಳಿಂದ ಠೇವಣಿಗಳನ್ನು ಸ್ವೀಕರಿಸುವುದು.

5.20 ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಪಡೆದು ವಿದೇಶಿ ಬ್ಯಾಂಕುಗಳ ನೋಟುಗಳನ್ನೊಳಗೊಂಡಂತೆ ವಿದೇಶಿ ವಿನಿಮಯ ಖರೀದಿಸುವುದು ಮತ್ತು ಮಾರಾಟ ಮಾಡುವುದು.

5.21 ಸೋಡಿಯನ್ನು ಒಪ್ಪಿಕೊಳ್ಳುವುದು, ಭದ್ರ ಕಪಾಟು (ಲಾಕರ್) ಇತರೆ ಸಂಬಂಧಿತ ಸೇವೆಗಳನ್ನು ಒದಗಿಸುವುದು.

5.22 ಭಾಗಶಃ ಅಥವಾ ಸಂಪೂರ್ಣ ಬಾಕಿ ವಸೂಲಿಗೆ ಬ್ಯಾಂಕು ತನ್ನ ಸ್ವಾಧೀನಕ್ಕೆ ಬಂದಿರುವ ಯಾವುದೇ ಆಸ್ತಿ-ಪಾಸ್ತಿಗಳ ನಿರ್ವಹಣೆ ಹಾಗೂ ವಿಲೇವಾರಿ ಮಾಡುವುದು.

5.23 ಸದಸ್ಯರ ಅನುಕೂಲಕ್ಕಾಗಿ ಮರಣೋತ್ತರ ಸಹಾಯನಿಧಿ ಸಂಗ್ರಹಣೆ ಮಾಡುವುದು ಮತ್ತು ಸದಸ್ಯರ ಕುಟುಂಬಕ್ಕೆ ಮರಣೊತ್ತರ ಸಹಾಯ ಧನ ನೀಡುವುದು.

5.24 ಗ್ರಾಹಕರ ಪರವಾಗಿ ಸ್ಟಾಕ್ ಅಥವಾ ಷೇರುಗಳನ್ನು, ಡಿಬೆಂಚರುಗಳನ್ನು ಮತ್ತು ನಿಧಿಗಳನ್ನು ಹಾಗೂ ಇನ್ನಿತರ ಆಧಾರ ಪತ್ರಗಳನ್ನು ಸಂಗ್ರಹಿಸುವುದು, ಧಾರಣೆ ಮಾಡುವುದು ಅಥವಾ ಕಮೀಷನ್ ಮೇಲೆ ನೀಡುವುದು, ಕೊಳ್ಳುವುದು ಅಥವಾ ಮಾರುವುದು.

5.25 ಸದಸ್ಯರ ಪರವಾಗಿ ಹಣ ಮತ್ತು ಆಧಾರ ಪತ್ರಗಳನ್ನು ಸಂಗ್ರಹಿಸುವುದು ಮತ್ತು ರವಾನಿಸುವುದು.

5.26 ಸದಸ್ಯರ ಮತ್ತು ಪ್ರಾಸಂಗಿಕವಾಗಿ ಸಾರ್ವಜನಿಕ ಆರ್ಥಿಕ ಕಲ್ಯಾಣವನ್ನು ಪ್ರವರ್ತಿಸಲೆಂದು ಉದ್ದೇಶಿಸಲಾದ ಇತರೆ ಕಾರ್ಯಕಲಾಪಗಳನ್ನು ನಿರ್ವಹಿಸುವುದು.

5.27 ವ್ಯಾಪಾರ ಮತ್ತು ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲು ಸದಸ್ಯರನ್ನು ಪ್ರೋತ್ಸಾಹಿಸುವುದು ಹಾಗೂ ಈ ಉದ್ದೇಶಗಳನ್ನು ಸಾಧಿಸಲು ಮತ್ತು ಬ್ಯಾಂಕಿನ ವ್ಯವಹಾರವನ್ನು ಅಭಿವೃದ್ಧಿ ಪಡಿಸಲು ಸಂಭವನೀಯ ನೆರವಾಗುವ ಪ್ರೋತ್ಸಾಹ ನೀಡುವುದು.

5.28 ಬ್ಯಾಂಕಿನ ವ್ಯವಹಾರ ವೃದ್ಧಿಯಾಗುವುದಕ್ಕೆ ಮತ್ತು ಬಲಗೊಳ್ಳುವುದಕ್ಕೆ ಅವಶ್ಯಕವಾದ ಎಲ್ಲಾ ಬಗೆಯ ಕೆಲಸಗಳನ್ನು ಮಾಡುವುದು.

5.29 ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯೊಂದಿಗೆ ಕ್ರೆಡಿಟ್ / ಡೆಬಿಟ್ ಕಾರ್ಡುಗಳ ವ್ಯವಹಾರದಲ್ಲಿ ತೊಡಗುವುದು

## ಅಧ್ಯಾಯ – 4

## ನಿಧಿಗಳು

**6. ನಿಧಿ ಸಂಗ್ರಹಣೆ :**

ಮೇಲ್ಕಂಡ ಎಲ್ಲಾ ಅಥವಾ ಯಾವುದೇ ಉದ್ದೇಶಗಳ ಕಾರ್ಯಾಚರಣೆಗೆ ಈ ಕೆಳಕಂಡ ವಿಧಾನಗಳಲ್ಲಿ ನಿಧಿ ಸಂಗ್ರಹಣೆ ಮಾಡಬಹುದು.

ಅ. ಷೇರು ವಿತರಣೆ ಮಾಡುವ ಮುಖಾಂತರ,

ಆ. ವಿವಿಧ ರೀತಿಯ ಠೇವಣಿಗಳನ್ನು ಸ್ವೀಕರಿಸುವ ಮತ್ತು ನಿಧಿ ಸ್ವೀಕರಣಾ ಪತ್ರಗಳ (ಕ್ಯಾಷ್ ಸರ್ಟಿಫಿಕೇಟ್) ವಿತರಣೆ ಮುಖಾಂತರ.

ಇ. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಿಂದ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ಮತ್ತು ಸಾಮಾನ್ಯ ನಿಕಾಯದ ಅನುಮತಿಯೊಂದಿಗೆ ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಿಂದ ನಗದುದ್ದರಿ, ಮೀರೆಳತೆ ಸಾಲ(ಓವರ್ ಡ್ರಾಫ್ಟ್) ಮತ್ತು ಇತರೆ ಸಾಲಗಳನ್ನು ಪಡೆಯುವುದರ ಮುಖಾಂತರ.

ಈ. ದೇಣಿಗೆ ಪಡೆಯುವುದರ ಮೂಲಕ.

ಉ. ಪ್ರವೇಶ ಧನ ಮೂಲಕ.

ಊ. ಸದಸ್ಯರ ಮರಣೋತ್ತರ ಪರಿಹಾರ ನಿಧಿ ಮತ್ತು ಸದಸ್ಯರ ಕಲ್ಯಾಣ ನಿಧಿಗಳಿಗೆ ಸದಸ್ಯರಿಂದ ವಂತಿಕೆ ಸ್ವೀಕರಿಸುವ ಮುಖಾಂತರ.

ಋ.1959 ರ ಕಾಯ್ದೆಯಲ್ಲಿ ಅವಕಾಶವಿರುವ ಇರತೆ ಯಾವುದೇ ನಿಧಿ ಮೂಲಕ.

**7. ಠೇವಣಿಯ ವಿಧಗಳು:**

ಅ) ಚಾಲ್ತಿ ಠೇವಣಿ (ಆ) ಉಳಿತಾಯ ಠೇವಣಿ (ಇ) ನಿಶ್ಚಿತ ಠೇವಣಿ (ಈ) ಪಿಗ್ಮಿ ಠೇವಣಿ (ಉ) ಅವರ್ತನ ಠೇವಣಿ (ರೆಕರಿಂಗ್ ಡಿಪಾಜಿಟ್) (ಊ) ಭವಿಷ್ಯನಿಧಿ ಠೇವಣಿ (ಋ) ನಿಧಿ ಸ್ವೀಕರಣಾ ಪತ್ರಗಳು (ಕ್ಯಾಶ್ ಸರ್ಟಿಫಿಕೇಟ್) (ಎ) ನಿರ್ದೇಶಕ ಮಂಡಳಿಯವರು ಕಾಲಕಾಲಕ್ಕೆ ನಿರ್ಧರಿಸುವ ಇತರೆ ಠೇವಣಿ ಯೋಜನೆಗಳು.

*ಸೂಚನೆ:* ಈ ಠೇವಣಿಗಳ ವ್ಯವಹಾರಕ್ಕಾಗಿ ನಿರ್ದೇಶಕ ಮಂಡಳಿಯವರು ಭಾರತೀಯ ರಿಸರ್ವ ಬ್ಯಾಂಕ್ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಅನುಸರಿಸಿ ಪೂರಕ ನಿಯಮಗಳನ್ನು ರಚಿಸಿಕೊಳ್ಳತಕ್ಕದ್ದು.

**8. ಹೊರಗಿನ ಸಾಲಗಳು ಮತ್ತು ಠೇವಣಿಗಳು :**

ಭಾರತೀಯ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳಿಗೆ ಅನುಸಾರವಾಗಿ ನಿರ್ದೇಶಕ ಮಂಡಳಿಯವರು ನಿರ್ಧರಿಸುವ ಬಡ್ಡಿದರ ಮತ್ತು ಸಾಲದ ಗರಿಷ್ಠ ಪರಿಮಿತಿ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಸಾಲಗಳನ್ನು ಮತ್ತು ಠೇವಣಿಗಳನ್ನು ನಿಗದಿಯಾದ ಅವಧಿಗೆ ಸ್ವೀಕರಿಸಬಹುದು.ಆದರೆ ಹಾಗೆ ಸ್ವೀಕರಿಸಿದ ಸಾಲ ಮತ್ತು ಠೇವಣಿಗಳ ಒಟ್ಟು ಮೊಬಲಗು ಸಂದಾಯವಾದ ಷೇರುಧನ ಮತ್ತು ಮೀಸಲು ನಿಧಿಯ ಮತ್ತು ಕಟ್ಟಡ ನಿಧಿಯ ಮೊಬಲಗಿನಲ್ಲಿ ಕೂಡಿಬಿದ್ದ ನಷ್ಟಗಳನ್ನು ವಜಾ ಮಾಡಿದ ಮೇಲೆ ಬರುವ ನಿವ್ವಳ ಮೊಬಲಗಿನ 25 ರಷ್ಟಕ್ಕೆ ಅಥವಾ ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳಡಿ ನಿಗದಿಪಡಿಸಿದ ಪರಿಮಿತಿಗೆ ಮೀರಿರಕೂಡದು.

**9. ನಿಧಿ ತೊಡಗಿಸುವಿಕೆ:**

ವ್ಯವಹಾರಗಳಲ್ಲಿ ತೊಡಗಿಸದೇ ಉಳಿದ ಬ್ಯಾಂಕಿನ ನಿಧಿಗಳನ್ನು ಕಾಯಿದೆ ಕಲಂ 58 ರ ಪ್ರಕಾರ ತೊಡಗಿಸುವುದು.

## ಅಧ್ಯಾಯ – 5

### ಬ್ಯಾಂಕಿನ ಷೇರು ಬಂಡವಾಳ

**10. ಬ್ಯಾಂಕಿನ ಅಧಿಕೃತ ಷೇರು ಬಂಡವಾಳ:**

ಬ್ಯಾಂಕಿನ ಅಧಿಕೃತ ಷೇರು ಬಂಡವಾಳವನ್ನು ಸರ್ವಸದಸ್ಯರ ಸಭೆಯು ಆಗಿಂದಾಗ್ಗೆ ನಿರ್ಧರಿಸತಕ್ಕದ್ದು.ಪ್ರತಿ ಷೇರಿನ ಮುಖ ಬೆಲೆಯು ರೂ.100.00 ಮಾತ್ರ, ಷೇರಿನ ಪೂರ್ತಿ ಮೊಬಲಗನ್ನು ಅರ್ಜಿಯೊಂದಿಗೆ ಒಂದೇ ಕಂತಿನಲ್ಲಿ ಪಾವತಿ ಮಾಡತಕ್ಕದ್ದು.

**11. ಷೇರು ಹಣಕ್ಕಾಗಿ ಅರ್ಜಿ :**

ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು.ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನವನ್ನು ಪಾವತಿಸತಕ್ಕದ್ದು.ಅಂಥ ಷೇರು ಅರ್ಜಿಯನ್ನು ಮಂಡಳಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು.

**12. ಷೇರು ಪ್ರಮಾಣ ಪತ್ರ :**

ಸದಸ್ಯರಿಗೆ ಕೊಡತಕ್ಕ ಷೇರು ಪ್ರಮಾಣ ಪತ್ರಗಳು ಕ್ರಮಸಂಖ್ಯೆ ಹಾಗೂ ಬ್ಯಾಂಕಿನ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು ಈ ಷೇರು ಪ್ರಮಾಣ ಪತ್ರಗಳು ಬ್ಯಾಂಕಿನ ಅಧ್ಯಕ್ಷರ ಮತ್ತು ಮುಖ್ಯ ಕಾರ್ಯನಿರ್ವಾಹಕರ ಸಹಿಗಳನ್ನು ಹೊಂದಿರತಕ್ಕದ್ದು.ಷೇರು ಪ್ರಮಾಣ ಪತ್ರಗಳನ್ನು ನಿರ್ದೇಶಕ ಮಂಡಳಿಯಿಂದ ಷೇರುಗಳ ಹಂಚಿಕೆಯಾದ 30 ದಿನಗಳೊಳಗೆ ಸದಸ್ಯರಿಗೆ ಕೊಡತಕ್ಕದ್ದು.

**13. ಪ್ರತಿರೂಪ ಷೇರು ಪ್ರಮಾಣ ಪತ್ರಗಳ ನೀಡುವಿಕೆ:**

ಷೇರು ಪ್ರಮಾಣ ಪತ್ರಗಳು ವಿರೂಪಗೊಂಡಿದ್ದರೆ, ಹರಿದು ಹೋಗಿದ್ದರೆ ಅಥವಾ ಸವೆದು ಹೋಗಿದ್ದರೆ ಅಂತಹವುಗಳನ್ನು ಹಿಂದಿರುಗಿಸಿದರೆ, ಪ್ರತಿರೂಪ ಷೇರು ಪ್ರಮಾಣ ಪತ್ರಗಳನ್ನು ನೀಡತಕ್ಕದ್ದು. ಹಾಗೆಯೇ ನಾಶವಾದ ಅಥವಾ ಕಳೆದುಹೋದ ಷೇರು ಪ್ರಮಾಣ ಪತ್ರಗಳ ಬಗ್ಗೆ ನಿರ್ದೇಶಕ ಮಂಡಳಿಗೆ ಸಮಾಧಾನಕರವಾದ ರೀತಿಯಲ್ಲಿ ಪರಿಹಾರ ಪತ್ರ (ಇಂಡೆಮ್ನಿಟಿ ಬಾಂಡ್) ಸಲ್ಲಿಸಿ ಪ್ರತಿರೂಪ ಪತ್ರಗಳನ್ನು ಪಡೆಯಬಹುದು. ಅಂತಹ ಷೇರು ಪ್ರಮಾಣ ಪತ್ರಗಳನ್ನು ಪ್ರತಿ ಷೇರು ಪ್ರಮಾಣ ಪತ್ರ ಒಂದಕ್ಕೆ 10 ರೂ.ನಂತೆ ಪಾವತಿಸಿ ಪಡೆಯತಕ್ಕದ್ದು. ಹಾಗೆ ನೀಡಲ್ಪಟ್ಟ ಷೇರು ಪ್ರಮಾಣ ಪತ್ರಗಳ ಮೇಲೆ **"ಪ್ರತಿರೂಪ"** ಎಂದು ನಮೂದಿಸತಕ್ಕದ್ದು.

**14. ಷೇರು ವರ್ಗಾವಣೆ:**

14.1 ಸದಸ್ಯರು ತಮ್ಮ ಷೇರುಗಳನ್ನು ಬ್ಯಾಂಕಿನ ಇತರ ಸದಸ್ಯರಿಗೆ ವರ್ಗಾಯಿಸಲು ನಿರ್ದೇಶಕ ಮಂಡಳಿಯವರಿಗೆ ಅರ್ಜಿ ಸಲ್ಲಿಸಬಹುದು. ಇಂತಹ ವರ್ಗಾವಣೆ ಆಗುವ ಪ್ರತಿ ಷೇರಿಗೆ ಕನಿಷ್ಠ ಹತ್ತು ರೂಪಾಯಿ ಹಾಗೂ ಗರಿಷ್ಠ ನೂರು ರೂಪಾಯಿಗಳಿಗೆ ಮೀರದಂತೆ ಶುಲ್ಕವನ್ನು ವರ್ಗಾವಣೆ ಮಾಡುವವರಿಂದ ಪಡೆಯತಕ್ಕದ್ದು. ಷೇರು ವರ್ಗಾವಣೆ ಮಾಡುವ ಸದಸ್ಯರು ವರ್ಗಾವಣೆ ಮಾಡಲಾಗುವ ಷೇರುಗಳನ್ನು ಪಡೆದು ಕನಿಷ್ಠ ಮೂರು ವರ್ಷ ಆಗಿರಬೇಕು ಮತ್ತು ಷೇರು ವರ್ಗಾವಣೆಗಾಗಿ ಸಲ್ಲಿಸುವ ಲಿಖಿತ ಅರ್ಜಿಯನ್ನು ಷೇರು ಪ್ರಮಾಣ ಪತ್ರ, ಷೇರುಗಳನ್ನು ಪಡೆಯುವವನಿಂದ ಒಪ್ಪಿಗೆ ಪತ್ರ ಹಾಗೂ ನಿಗದಿತ ವರ್ಗಾವಣೆ ಶುಲ್ಕದೊಂದಿಗೆ ಸಲ್ಲಿಸಬೇಕು. ನಿರ್ದೇಶಕ ಮಂಡಳಿಯು ಆ ವರ್ಗಾವಣೆ ಒಪ್ಪುವವರೆಗೂ ಹಾಗೂ ಬ್ಯಾಂಕಿನ ಪುಸ್ತಕದಲ್ಲಿ ಆ ಬಗ್ಗೆ ನೋಂದಣಿ ಆಗುವವರೆಗೂ ಷೇರು ವರ್ಗಾವಣೆ ಕ್ರಮಬದ್ಧವಾಗುವುದಿಲ್ಲ. ಷೇರು

ವರ್ಗಾವಣೆದಾರನು ಉಪವಿಧಿಗಳಲ್ಲಿ ಸೂಚಿಸಿರುವ ಷರತ್ತುಗಳನ್ನು ಪಾಲಿಸದಿದ್ದಲ್ಲಿ, ನಿರ್ದೇಶಕ ಮಂಡಳಿಯು ಈ ಷೇರು ವರ್ಗಾವಣೆಯನ್ನು ತಿರಸ್ಕರಿಸಬಹುದು.

*ಟಿಪ್ಪಣಿ* : ಹೀಗೆ ವರ್ಗಾಯಿಸಲ್ಪಟ್ಟ ಷೇರುಗಳ ಬೆಲೆಯನ್ನು ನಿಯಮ 12ರ ಪ್ರಕಾರ ಲೆಕ್ಕ ಹಾಕಲಾಗುತ್ತದೆ.

14.2ಯಾವುದೇ ರೀತಿಯಲ್ಲಿ ಸದಸ್ಯನು ಬ್ಯಾಂಕಿನ ಸಾಲಗಾರನಾಗಿದ್ದಲ್ಲಿ ಅಂತಹ ಸದಸ್ಯನಿಂದ ಬಂದಿರುವ ಷೇರು ವರ್ಗಾವಣೆ ಮನವಿಯನ್ನು ನಿರ್ದೇಶಕ ಮಂಡಳಿಯವರು ತಿರಸ್ಕರಿಸಬಹುದು.

**15. ಷೇರುಗಳನ್ನು ವಾಪಸ್ಸು ಪಡೆಯುವುದು ಮತ್ತು ಅವುಗಳ ಬೆಲೆಯನ್ನು ನಿರ್ಧರಿಸುವುದು :**

15.1 ಯಾವುದೇ ಸದಸ್ಯನು ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಅಂತಹ ರಾಜಿನಾಮೆಯನ್ನು ನಿರ್ದೇಶಕ ಮಂಡಳಿಯವರು ಒಪ್ಪಿದ ಹೊರತು ಅವನ ಷೇರುಗಳನ್ನು ನಗದು ರೂಪದಲ್ಲಿ ವಾಪಸ್ಸು ಕೊಡತಕ್ಕದ್ದಲ್ಲ. ಈ ರೀತಿ ವಾಪಸ್ಸು ಮಾಡುವ ಷೇರುಗಳ ಮೌಲ್ಯವನ್ನು ನಿಯಮ 12 ರ ಪ್ರಕಾರ ನಿರ್ಧರಿಸತಕ್ಕದ್ದು.

15.2 ಬ್ಯಾಂಕಿಗೆ ಬರಬೇಕಾದ ಯಾವುದೇ ಬಾಕಿ ಹಣಕ್ಕೆ ಷೇರು ಮತ್ತು ಲಾಭಾಂಶಗಳ ಮೇಲೆ ಬ್ಯಾಂಕಿಗೆ ಮೂಲ ಅಥವಾ ಮೊದಲ ಹಕ್ಕು ಇರುತ್ತದೆ.

## ಅಧ್ಯಾಯ – 6

## ಸದಸ್ಯರ ಪ್ರವೇಶ

## ಅರ್ಹತೆಗಳು, ರದ್ದತಿ, ಹಕ್ಕುಗಳು ಮತ್ತು ಜವಾಬ್ದಾರಿಗಳು

**16. ಸದಸ್ಯತ್ವಕ್ಕೆ ಪ್ರವೇಶ:**

16.1 ಬ್ಯಾಂಕಿನ ಸದಸ್ಯತ್ವ ಪಡೆಯಲು ಈ ಕೆಳಗಿನವರು ಅರ್ಹರಾಗಿರುತ್ತಾರೆ.

(ಅ) ಭಾರತೀಯ ಒಪ್ಪಂದದ ಕಾಯ್ದೆ 1872 ಕಲಂ 11ರ ಪ್ರಕಾರ ಕರಾರುಗಳನ್ನು ಮಾಡಿಕೊಳ್ಳಲು ಅರ್ಹನಿರುವ ಯಾವುದೇ ವ್ಯಕ್ತಿ ಹಾಗೂ ಉಪವಿಧಿ 4(21)ರಲ್ಲಿ ವಿವರಿಸಿದ ಯಾವುದೇ ಇತರ ವ್ಯಕ್ತಿ.

16.2 ಸಹಕಾರಿ ಕಾಯಿದೆ ರೀತ್ಯ ನೋಂದಾಯಿಸಲ್ಪಟ್ಟಿರುವ ಯಾವುದೇ ಸಹಕಾರ ಸಂಘವು ಬ್ಯಾಂಕಿನ ಸದಸ್ಯತ್ವ ಪಡೆಯಲು ಅರ್ಹವಲ್ಲ.

16.3 ಪ್ರವೇಶದ ಅರ್ಹತೆಗಳು :

ಕೆಳಗೆ ಹೇಳಿದ ಅರ್ಹತೆಗಳನ್ನುಳ್ಳ ಯಾವುದೇ ವ್ಯಕ್ತಿಯನ್ನು ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು.

(ಅ) ಕಾನೂನು ರೀತ್ಯಾ ಕರಾರುಗಳನ್ನು ಮಾಡಿಕೊಳ್ಳಲು ಅರ್ಹನಾಗಿರುವ 18 ವರ್ಷ ವಯಸ್ಸು ಮೀರಿದ ವ್ಯಕ್ತಿ.

(ಆ) ಬ್ಯಾಂಕಿನ ಕಾರ್ಯಕ್ಷೇತ್ರದ ನಿವಾಸಿಯಾಗಿರತಕ್ಕ ಅಥವಾ ಆ ಕಾರ್ಯಕ್ಷೇತ್ರದಲ್ಲಿ ವ್ಯಾಪಾರ ಅಥವಾ ಉದ್ಯಮದಲ್ಲಿ ತೊಡಗಿರತಕ್ಕ ವ್ಯಕ್ತಿ. ಆದರೆ ಆವ್ಯಕ್ತಿ ಇತರ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅಥವಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯನಾಗಿರಕೂಡದು.

(ಇ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 17 ರನ್ವಯ ಅನರ್ಹನಾಗಿರಕೂಡದು.

16.4 ಕಾನೂನು ರೀತ್ಯಾ ಕರಾರುಗಳನ್ನು ಮಾಡಿಕೊಳ್ಳಲು ಅರ್ಹನಾಗಿರುವ 18 ವರ್ಷ ವಯಸ್ಸು ಮೀರಿದ ಹಾಗೂ ಬ್ಯಾಂಕಿನ ಕಾರ್ಯಕ್ಷೇತ್ರದ ನಿವಾಸಿಯಾಗಿರತಕ್ಕ ಬಿಡಿ ವ್ಯಕ್ತಿಯು ಹಾಗೂ ಬ್ಯಾಂಕಿನ ಸೇವೆಗಳನ್ನು ಪಡೆಯುವ ಇಚ್ಛೆಯುಳ್ಳ, ಇತರ ಯಾವುದೇ ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ಸದಸ್ಯನಾಗಿರದ ಮತ್ತು ಕಾಯ್ದೆ ಕಲಂ 17ರನ್ವಯ ಅನರ್ಹನಾಗಿರದ ಯಾವುದೇ ವ್ಯಕ್ತಿಯು ಪ್ರವೇಶ ಧನ ರೂಪದಲ್ಲಿ ರೂ, 25/–, ಷೇರು ಶುಲ್ಕವಾಗಿ ಪ್ರತಿ ಷೇರಿಗೆ 10/–ರೂ. ಮತ್ತು ಕನಿಷ್ಟ ಒಂದು ಷೇರಿನ ಪೂರ್ಣ ಹಣವನ್ನು ಪಾವತಿ ಮಾಡಿ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಿರತಕ್ಕದ್ದು.

17. **ಸದಸ್ಯತ್ವಕ್ಕಾಗಿ ಅರ್ಜಿ:**

**ಸದಸ್ಯತ್ವಕ್ಕಾಗಿ ಅರ್ಜಿ:**

ಬ್ಯಾಂಕಿನ ಸದಸ್ಯತ್ವ ಪಡೆಯಲು ಬಯಸುವ ಯಾವುದೇ ವ್ಯಕ್ತಿಯು ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನಿಗೆ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಅರ್ಜಿಸಲ್ಲಿಸತಕ್ಕದ್ದು. ಸದಸ್ಯತ್ವ ಕೋರಿ ಬಂದಿರುವ ಯಾವುದೇ ಅರ್ಜಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಮಂಡಳಿಯು ಹೊಂದಿರತಕ್ಕದ್ದು. ಸದಸ್ಯತ್ವವನ್ನು ತಿರಸ್ಕರಿಸಿದರೆ ಸದಸ್ಯತ್ವಕ್ಕಾಗಿ ಅಭ್ಯರ್ಥಿಯು ಪಾವತಿಸಿದ ಅರ್ಜಿ ಶುಲ್ಕದ ಹೊರತು ಉಳಿಕೆ ಹಣವನ್ನು ಪೂರ್ಣವಾಗಿ ವಾಪಸ್ಸು ಮಾಡತಕ್ಕದ್ದು. ಈ ಬಗ್ಗೆ ನಿರ್ಣಯ ಕೈಗೊಂಡ ಇಪ್ಪತ್ತು ದಿನಗಳೊಳಗಾಗಿ, ಅಂತಹ ಅರ್ಜಿದಾರನಿಗೆ ಅವನ ಅರ್ಜಿ ತಿರಸ್ಕೃತವಾದ ಬಗ್ಗೆ ಲಿಖಿತ ಮೂಲಕ ತಿಳಿಸತಕ್ಕದ್ದು. ಸದಸ್ಯತ್ವಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಎರಡು ತಿಂಗಳೊಳಗಾಗಿ ತಿರಸ್ಕರಿಸಿದ ಅಥವಾ ಪುರಸ್ಕರಿಸಿದ ಬಗ್ಗೆ ತಿಳಿಸದಿದ್ದಲ್ಲಿ ಅಂತಹ ಅರ್ಜಿದಾರನು ಮೇಲೆ ಹೇಳಿದ ಅವಧಿಯ ಕೊನೆಯ ದಿನ ಅವನ ಸದಸ್ಯತ್ವದ ಅರ್ಜಿಯು **ಅಂಗೀಕರಿಸಿದೆ** ಎಂದು ಭಾವಿಸತಕ್ಕದ್ದು. ಹಾಗೂ ಅಂತಹ ಅರ್ಜಿದಾರನು ಕಾಯ್ದೆಯ ಕಲಂ

105ಎ ಪ್ರಕಾರ **ಸಹಕಾರ ಸಂಘಗಳ ನಿಬಂಧಕರಿಗೆ** ತಿರಸ್ಕೃತವಾದ ಅರ್ಜಿಯ ಬಗ್ಗೆ ಅಪೀಲು ಹಾಕಿಕೊಳ್ಳಲು ಅವಕಾಶವಿರತಕ್ಕದ್ದು.

**17(ಅ)**. ಸಹಕಾರ ಸಂಘಗಳ ನಿಬಂಧಕರು, ಸಂಬಂಧಪಟ್ಟ ವ್ಯಕ್ತಿಗೆ ತನ್ನ ಮನವಿಯು ಯಾವುದಾದರೂ ಇದ್ದಲ್ಲಿ, ಅದನ್ನು ಲಿಖಿತದಲ್ಲಿ ಮಾಡಿಕೊಳ್ಳಲು ಮುಕ್ತ ಅವಕಾಶವನ್ನು ನೀಡಿದ ತರುವಾಯ ಮತ್ತು ಮಂಡಲಿಯು ಸದಸ್ಯತ್ವವನ್ನು ನಿರಾಕರಿಸಲು ನೀಡಿರುವ ಕಾರಣಗಳನ್ನು ಪರಿಗಣಿಸಿದ ತರುವಾಯ, ಸಹಕಾರ ಸಂಘವು ಆ ವ್ಯಕ್ತಿಯನ್ನು ಸದಸ್ಯನನ್ನಾಗಿ ಸೇರಿಸಿಕೊಳ್ಳತಕ್ಕಂದೆಂದಾಗಲೀ ಅಥವಾ ಆತನಿಗೆ ಪ್ರವೇಶವನ್ನು ನಿಡತಕ್ಕದ್ದಲ್ಲವೆಂದಾಗಲೀ ನಿರ್ದೇಶಿಸತಕ್ಕದ್ದು ಮತ್ತು ಮೊದಲನೇ ಸಂದರ್ಭದಲ್ಲಿ ಮಂಡಲಿಯು, ಸಾಮಾನ್ಯ ನಿಕಾಯದ ಗೊತ್ತುವಳಿಯ ದಿನಾಂಕದಿಂದ ಹದಿನೈದು ದಿನಗಳೊಳಗೆ ನಿರ್ಧಾರವನ್ನು ಜಾರಿಗೊಳಿಸತಕ್ಕದ್ದು.

**17(ಋ)(2)** ಸದಸ್ಯನಾಗಿ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಟ ವ್ಯವಹಾರವನ್ನು ನಡೆಸಲು ಅಥವಾ ಕನಿಷ್ಟ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಮೂರು ನಿರಂತರ ವರ್ಷಗಳವರೆಗೆ ವಿಫಲನಾದರೆ; ಆತನ /ಅದರ ಸದಸ್ಯತ್ವವು ಕೂಡಲೇ ಅಂತ್ಯವಾಗತಕ್ಕದ್ದು.

18. **ಸದಸ್ಯತ್ವದ ಅಂತ್ಯವಾಗುವಿಕೆ :**

18.1 ಬ್ಯಾಂಕಿನ ಸದಸ್ಯತ್ವವು ಕೆಳಕಂಡ ಸನ್ನಿವೇಶಗಳಲ್ಲಿ ರದ್ದಾಗುತ್ತದೆ.

(ಅ) ಸದಸ್ಯರು ಮೃತಪಟ್ಟರೆ

(ಆ) ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ನಿರ್ದೇಶಕ ಮಂಡಳಿಯಿಂದ ಸ್ವೀಕೃತವಾದರೆ.

(ಇ) ಕಾಯ್ದೆ ಕಲಂ 17 ರಲ್ಲಿರುವಂತೆ ಸದಸ್ಯರು ಅನರ್ಹನಾದರೆ.

(ಈ) ಸದಸ್ಯರು ಹೊಂದಿರುವ ಎಲ್ಲಾ ಷೇರು ವರ್ಗಾವಣೆ ಮಾಡಿದರೆ, ಮುಟ್ಟುಗೋಲು ಹಾಕಿಕೊಂಡರೆ, ಹೊಂದಾಣಿಕೆ ಮಾಡಿಕೊಂಡರೆ, ಅಥವಾ ಸರಿಹೊಂದಿಸಿಕೊಂಡರೆ,

(ಉ) ನೋಂದಾಯಿತ ಸಂಘ, ಪಾಲುಗಾರಿಕೆ ಸಂಸ್ಥೆ ಅಥವಾ ಕಂಪನಿ ಅಥವಾ ಬಾಡಿ ಕಾರ್ಪೋರೇಟ್ ಅಥವಾ ಇತರೆ ಸಂಸ್ಥೆಗಳು ವಿಸರ್ಜನಗೊಂಡರೆ.

(ಊ) ಉಪನಿಬಂಧನ 16 ರಲ್ಲಿ ವಿಧಿಸಿರುವ ಯಾವುದೇ ವಿಧವಾದ ಷರತ್ತುಗಳನ್ನು ಉಲ್ಲಂಘಿಸಿದರೆ.

(ಋ) ಕಾಯ್ದೆ ನಿಯಮಗಳು ಮತ್ತು ಉಪನಿಯಮಗಳಲ್ಲಿ ನಿಗಧಿಪಡಿಸಿರುವಂತೆ ಸದಸ್ಯನ ಜಾಮೀನುದಾರನ ಹೊಣೆಗಾರಿಕೆಯನ್ನು ನಿರಂತರವಾಗಿ ಮೂರು ವರ್ಷಗಳ ಅವಧಿಯಲ್ಲಿ ನಿರ್ವಹಿಸಲು ತಪ್ಪಿದಲ್ಲಿ ಸದರಿ ಅವಧಿಯು ಮುಕ್ತಾಯಗೊಂಡ ಕೂಡಲೆ ಅಂತಹ ವ್ಯಕ್ತಿಯ ಸದಸ್ಯತ್ವವು ರದ್ದಾಗುತ್ತದೆ.

(ಋ) ಬ್ಯಾಂಕಿನ ಸದಸ್ಯನಾಗಿರುವ ಯಾವುದೇ ವ್ಯಕ್ತಿಯು –

(1) ಬ್ಯಾಂಕಿನ ಅಥವಾ ಅದರ ಹಣಕಾಸು ಏಜೆನ್ಸಿಯ ಸಂಬಳ ಪಡೆಯುವ ಉದ್ಯೋಗಿಯಾಗಿದ್ದರೆ;

(2) ಅಂಥ ಸದಸ್ಯನಾಗಿ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಟ ವ್ಯವಹಾರವನ್ನು ನಡೆಸಲು ಅಥವಾ ಕನಿಷ್ಟ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಮೂರು ನಿರಂತರ ವರ್ಷಗಳವರೆಗೆ ವಿಫಲನಾದರೆ; (– ಆತನ /ಅದರ ಸದಸ್ಯತ್ವವು ಕೂಡಲೇ ಅಂತ್ಯವಾಗತಕ್ಕದ್ದು.

(ಎ) ಒಬ್ಬ ಸದಸ್ಯನು ಈ ಉಪವಿಧಿಯ ಖಂಡ(1)ರಲ್ಲಿ ತಿಳಿಸಿದ ಯಾವುದೇ ಅನರ್ಹತೆಗೆ ಒಳಗಾದಲ್ಲಿ, ಮಂಡಳಿಯು ಅಂತಹ ಸದಸ್ಯನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿ, ಕಾಯ್ದೆ, ನಿಯಮಗಳ ಮತ್ತು ಉಪವಿಧಿಗಳ ಪ್ರಕಾರ ಆತನ ಸದಸ್ಯತ್ವವು ಅಂತ್ಯವಾಗುವುದೇ ಎಂಬ ಬಗ್ಗೆ ನಿರ್ಧರಿಸತಕ್ಕದ್ದು.

18.2 ಈ ಉಪವಿಧಿಯ ಖಂಡ(2)ರಲ್ಲಿ ತಿಳಿಸಿದಂತೆ ಸದಸ್ಯತ್ವ ಅಂತ್ಯವಾಗುವಿಕೆಯ ಬಗ್ಗೆ ನಿರ್ಧರಿಸಿದಾಗ, ಮಂಡಳಿಯು ಅವರ ಹೆಸರನ್ನು ಸದಸ್ಯರ ಪಟ್ಟಿಯಿಂದ ತೆಗೆದುಹಾಕತಕ್ಕದ್ದು ಹಾಗೂ ಅವರಿಂದ ಯಾವುದಾದರೂ ಬರಬೇಕಾದ ಬಾಕಿ ಇದ್ದರೆ ಅದನ್ನು ಅವರಿಗೆ ಕೊಡಬೇಕಾದ ಷೇರು ಹಣದ ಮೌಲ್ಯ ಹಾಗೂ ಸಂದಾಯವಾಗಬೇಕಾದ ಡಿವಿಡೆಂಡ್ ಮೊತ್ತದಲ್ಲಿ ಮುರಿದುಕೊಂಡು ಉಳಿದ ಮೊತ್ತವನ್ನು ಪಾವತಿ ಮಾಡತಕ್ಕದ್ದು. ನಿಯಮ 12ರ ಪ್ರಕಾರ ಷೇರು ಹಣದ ಮೌಲ್ಯಮಾಪನ ಮಾಡತಕ್ಕದ್ದು.

19. **ಸದಸ್ಯತ್ವ ರದ್ದತಿಯಾದ ವ್ಯಕ್ತಿಗಳಿಂದ ಬರಬೇಕಾದ ಹಣ :**

ಉಪ ನಿಬಂಧನೆ ನಂ. 18 ರಲ್ಲಿ ನಮೂದಿಸಿದ ಕಾರಣಗಳಿಂದಾಗಿ ಸದಸ್ಯತ್ವ ರದ್ದಾದರೆ ಸದಸ್ಯತ್ವವನ್ನು ಕಳೆದುಕೊಂಡವರು ಪ್ರಧಾನ ಸಾಲಗಾರರಾಗಿ ಅಥವಾ ಜಾಮೀನುದಾರರಾಗಿ ಸದರಿ ಸಾಲಗಳು ಬಾಕಿಯಾಗಿಲ್ಲದಿದ್ದರೂ ಸಹ ಈ ಉಪ ನಿಬಂಧನೆಗಳಲ್ಲಿ ಅಥವಾ ಅಂತಹ ಸದಸ್ಯನು ಬ್ಯಾಂಕಿಗೆ ಬರೆದುಕೊಟ್ಟ ಕರಾರು ಪತ್ರಗಳಲ್ಲಿ ಏನೇ ಇದ್ದರೂ ಸದಸ್ಯತ್ವ ರದ್ದತಿಯಾದ ದಿನವೇ ಅಂತಹ ಸಾಲಗಳನ್ನು ಪೂರ್ಣವಾಗಿ ಮರುಪಾವತಿ ಮಾಡತಕ್ಕದ್ದು.

20. **ಸದಸ್ಯತ್ವಕ್ಕೆ ರಾಜೀನಾಮೆ:**

ಯಾವ ಸದಸ್ಯನೇ ಆಗಲೀ ಸದಸ್ಯತ್ವಕ್ಕೆ ರಾಜೀನಾಮೆ ಕೊಡಲು:–

20.1 ಯಾವ ಸದಸ್ಯನೇ ಆಗಲಿ ಕನಿಷ್ಠ ಮೂರು ವರ್ಷಗಳ ಅವಧಿಗೆ ಷೇರನ್ನು ಹೊಂದಿದ್ದರೆ ಮತ್ತು ಒಂದು ತಿಂಗಳ ಮುನ್ಸೂಚನೆ ಕೊಟ್ಟಿದ್ದರೆ ಆತನು ಸದಸ್ಯತ್ವಕ್ಕೆ ರಾಜೀನಾಮೆ ಕೊಡಬಹುದು.

20.2 ಬ್ಯಾಂಕಿಗೆ ಸಾಲಗಾರನಾಗಿ ಹಾಗೂ ಜಾಮೀನುದಾರನಾಗಿ ಕೊಡಬೇಕಾದ ಬಾಕಿ ಮೊಬಲಗನ್ನು ಪೂರ್ತಿಯಾಗಿ ತೀರಿಸಿರಬೇಕು.

20.3**ಆತನ ರಾಜೀನಾಮೆಯನ್ನು ನಿರ್ದೇಶಕ ಮಂಡಳಿಯು ಒಪ್ಪಿರಬೇಕು.**

***ಸೂಚನೆ:***

(ಅ) ಒಂದು ವರ್ಷದಲ್ಲಿ ಹಿಂತಿರುಗಿಸುವ ಒಟ್ಟು ಷೇರು ಮೊಬಲಗು ಹಿಂದಿನ ವರ್ಷದ ಅಂತ್ಯದಲ್ಲಿದ್ದ ಬ್ಯಾಂಕಿನ ಷೇರು ಬಂಡವಾಳದ ಶೇಕಡ 10 ಕ್ಕೆ ಮೀರಿರಕೂಡದು.

(ಆ) (ಕೈಬಿಡಲಾಗಿದೆ).

21. **ಸದಸ್ಯರಿಗೆ ಗುರುತಿನ ಕಾರ್ಡನ್ನು ನೀಡುವುದು :**

ಬ್ಯಾಂಕಿನ ಸದಸ್ಯರನ್ನು ಗುರುತಿಸಲು ಅನುಕೂಲವಾಗುವಂತೆ ಅವರುಗಳ ಭಾವಚಿತ್ರಗಳನ್ನು ಒಳಗೊಂಡ ಗುರುತಿನ ಚೀಟಿಗಳನ್ನು ನೀಡಲು ನಿರ್ದೇಶಕ ಮಂಡಳಿಯು ಏರ್ಪಾಡು ಮಾಡತಕ್ಕದ್ದು.ಪ್ರತಿ ಸದಸ್ಯನು ಇದಕ್ಕೆ ಬೇಕಾದಷ್ಟು ಭಾವಚಿತ್ರಗಳನ್ನು ಬ್ಯಾಂಕಿಗೆ ನೀಡತಕ್ಕದ್ದು.ಇಂತಹ ಗುರುತಿನ ಚೀಟಿಗಳನ್ನು ಬ್ಯಾಂಕಿನ ಸರ್ವಸದಸ್ಯರ ಸಭೆಗಳಲ್ಲಿ ಮತ್ತು ಇತರೆ ಸಭೆಗಳಲ್ಲಿ ಭಾಗವಹಿಸಲು, ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಮತ ಚಲಾಯಿಸಲು ಹಾಗೂ ಇನ್ನಿತರ ಬ್ಯಾಂಕ್ ವ್ಯವಹಾರಗಳಲ್ಲಿ ಉಪಯೋಗಿಸಿಕೊಳ್ಳತಕ್ಕದ್ದು.

***ಸೂಚನೆ :***

(ಅ) ಗುರುತಿನ ಚೀಟಿ ಪಡೆಯದೆ ಇದ್ದ ಸದಸ್ಯರುಗಳು ಸಭೆಗಳಲ್ಲಿ ಭಾಗವಹಿಸುವುದನ್ನು ಮತ್ತು ಮತ ಚಲಾಯಿಸುವುದನ್ನು ನಿಷೇಧಿಸುವ ಅಧಿಕಾರ ಆಡಳಿತ ಮಂಡಳಿಗೆ ಇರುತ್ತದೆ.

(ಆ) ಸದಸ್ಯರು ಬ್ಯಾಂಕಿನಿಂದ ಕೊಡಲ್ಪಟ್ಟ ಗುರುತಿನ ಚೀಟಿಯನ್ನು ಕಳೆದುಕೊಂಡಲ್ಲಿ ಗುರುತಿನ ಚೀಟಿಯ ಪ್ರತಿಯನ್ನು ಪಡೆಯಲು ನಿರ್ದೇಶಕ ಮಂಡಳಿಯು ನಿಗದಿ ಪಡಿಸಿದ ಶುಲ್ಕವನ್ನು ಪಾವತಿ ಮಾಡಿ ಪಡೆದುಕೊಳ್ಳತಕ್ಕದ್ದು.

(ಇ) ಬ್ಯಾಂಕು ಕೊಟ್ಟ ಗುರುತಿನ ಕಾರ್ಡನ್ನು ಕಳೆದುಕೊಂಡಲ್ಲಿ, ಅಂತಹ ಸದಸ್ಯನು ಮಂಡಳಿಯು ನಿಗದಿಪಡಿಸಿದ ಶುಲ್ಕವನ್ನುಪಾವತಿ ಮಾಡಿ ಗುರುತಿನ ಕಾರ್ಡಿನ ಪ್ರತಿರೂಪ ಪ್ರತಿಯನ್ನು ಪಡೆದುಕೊಳ್ಳತಕ್ಕದ್ದು. ಪ್ರತಿರೂಪ ಗುರುತಿನ ಕಾರ್ಡನ್ನು ಪಡೆಯಲುಸಾಕಷ್ಟು ಕಾಲಾವಕಾಶವಿಲ್ಲದಿದ್ದಲ್ಲಿ ಮತ್ತು ಸಾಮಾನ್ಯ ಸಭೆ ಅಥವಾ ಚುನಾವಣೆಯಲ್ಲಿ ಭಾಗವಹಿಸುವ ತುರ್ತುಸ್ಥಿತಿ ಇದ್ದಲ್ಲಿ,ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕನಿಂದ ಅಂಥ ಸದಸ್ಯನು ತಾತ್ಕಾಲಿಕ ಗುರುತಿನ ಚೀಟಿಯನ್ನು ಪಡೆಯಬಹುದು.

22. **ನಾಮ ನಿರ್ದೇಶನ:**

22.1 ಬ್ಯಾಂಕಿನ ಸದಸ್ಯರು ತಮ್ಮ ಮರಣಾನಂತರ ಷೇರಿನ ಹಣ ಅಥವಾ ಲಾಭಾಂಶ ಅಥವಾ ತಮಗೆ ಬರಬೇಕಾದ ಯಾವುದೇ ಬಗೆಯ ಹಣವನ್ನು ಪಡೆಯಲು ಒಬ್ಬ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡಬಹುದು.ಸದಸ್ಯರು ಅಂತಹ ನಾಮ ನಿರ್ದೇಶನವನ್ನು ಲಿಖಿತ ಮೂಲಕ ನಿಗದಿತ ಶುಲ್ಕ ರೂ.10 ನ್ನು ಪಾವತಿ ಮಾಡಿ ಆಗಿಂದಾಗ್ಗೆ ಬದಲಾಯಿಸಬಹುದು. ಈ ಉಪವಿಧಿಯಡಿ ಮಾಡಿದ ನಾಮನಿರ್ದೇಶನವು ಸದಸ್ಯರು ಮೃತಪಟ್ಟಲ್ಲಿ ಕಾರ್ಯರೂಪಕ್ಕೆ ಬರಲು :

(ಅ) ಲಿಖಿತದಲ್ಲಿದ್ದು ಸದಸ್ಯರು ಇನ್ನಿತರ ಇಬ್ಬರು ಸಾಕ್ಷಿಗಳ ಸಮಕ್ಷಮದಲ್ಲಿ ಸಹಿ ಮಾಡಿರಬೇಕು.

(ಆ) ಬ್ಯಾಂಕಿನಲ್ಲಿ ಈ ಉದ್ದೇಶಕ್ಕಾಗಿಯೇ ಇಟ್ಟಿರುವ ರಿಜಿಸ್ಟರ್ ನಲ್ಲಿ ನೋಂದಾಯಿಸಿರಬೇಕು.

22.2 ಸದಸ್ಯರು ಯಾವ ನಾಮ ನಿರ್ದೇಶನವನ್ನೂ ಮಾಡದಿದ್ದ ಸಂದರ್ಭದಲ್ಲಿ ಅಥವಾ ಮಾಡಿರಬಹುದಾದ ನಾಮ ನಿರ್ದೇಶನ ಸಿಂಧುವಾಗದಿದ್ದ ಸಂದರ್ಭದಲ್ಲಿ:

(ಅ) ಸದಸ್ಯರ ಷೇರು ಮೊಬಲಗು ಮತ್ತು ಬ್ಯಾಂಕಿನಿಂದ ಬರುವ ಇತರ ಬಾಕಿ ಮುಂತಾದವುದಳ ಒಟ್ಟು ಮೊತ್ತ 1,00,000.00 ಒಂದು ಲಕ್ಷ ರೂಪಾಯಿಗಳಿಗೆ ಮೀರದಿದ್ದ ಸಂದರ್ಭದಲ್ಲಿ ನಿರ್ದೇಶಕ ಮಂಡಳಿಯ ಅಭಿಪ್ರಾಯದಲ್ಲಿ ಯಾರು ಮೃತಪಟ್ಟ ಸದಸ್ಯರ ವಾರಸುದಾರರು ಅಥವಾ ವಿಧಿಬದ್ಧ ಪ್ರತಿನಿಧಿಗಳು ಎಂದು ಕಂಡುಬರುತ್ತಾರೋ ಆ ವಾರಸುದಾರರಿಗೆ ಅಥವಾ ವಿಧಿಬದ್ಧ ಪ್ರತಿನಿಧಿಗಳಿಗೆ ಭದ್ರತೆಗಾಗಿ ಜಾಮೀನುದಾರರ ಸಹಿತ ಸರಳ ನಷ್ಟಭರ್ತಿ ಪತ್ರ (ಇಂಡೆಮ್ನಿಟಿ ಬಾಂಡ್) ವನ್ನು ಪಡೆದು ಆ ಮೊಬಲಗನ್ನು ಪಾವತಿ ಮಾಡಬಹುದು.

(ಆ) ಮೃತರಾದ ಸದಸ್ಯರಿಗೆ ಬ್ಯಾಂಕಿನಿಂದ ಕೊಡಬೇಕಾಗಿದ್ದ ಷೇರು ಮೊಬಲಗು ಮತ್ತು ಇತರೆ ಯಾವುದಾದರೂ ಹಣದ ಮೊತ್ತವು ಒಂದು ಲಕ್ಷ (1,00,000/–) ರೂಪಾಯಿಗಳಿಗೆ ಮೀರಿದ್ದ ಸಂದರ್ಭದಲ್ಲಿ ಅಂತಹ ಮೃತಪಟ್ಟ ಸದಸ್ಯರ ಪರವಾಗಿ ಹಣವನ್ನು ಪಡೆಯಲು ಮುಂದೆ ಬಂದವರು ತಾವು ಆ ಹಣಕ್ಕೆ ಉತ್ತರಾಧಿಕಾರಿ/ ವಾರಸುದಾರ ಎಂದು ಅರ್ಹ ಕೋರ್ಟಿನಿಂದ ವಾರಸುದಾರಿಕೆ/ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಸಾಬೀತು ಪಡಿಸಿದಾಗ ಮಾತ್ರವೇ ಆ ಹಣವನ್ನು ಕೊಡತಕ್ಕದ್ದು.

*ಟಿಪ್ಪಣಿ* : ಮೃತರಾದವರ ಪರವಾಗಿ ಹಣವನ್ನು ಪಡೆಯಲು ಬಂದ ವಾರಸುದಾರರು ಅಥವಾ ವಿಧಿಬದ್ಧ ಪ್ರತಿನಿಧಿಗಳು ಉಪನಿಯಮ ನಂ 16 ಮತ್ತು 17 ರ ಪ್ರಕಾರ ಸದಸ್ಯರಾಗಲು ಅರ್ಹತೆ ಪಡೆದಿದ್ದಲ್ಲಿ ಅವರುಗಳನ್ನು ಬ್ಯಾಂಕಿನ ಸದಸ್ಯರುಗಳನ್ನಾಗಿ ಸೇರಿಸಿಕೊಳ್ಳಬಹುದು.

22(2) ಬ್ಯಾಂಕಿನ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಆಕಸ್ಮಿಕ ಅಪಘಾತಕ್ಕೆ ಈಡಾಗಿ ಮರಣ ಹೊಂದಿದ್ದರೆ, ಸದಸ್ಯರ ಹಾಗೂ ಬ್ಯಾಂಕಿನ ಸಿಬ್ಬಂದಿವರ್ಗದ ಕ್ಷೇಮನಿಧಿಯಿಂದ ರೂ.25000/–ಗಳನ್ನು ಪರಿಹಾರ ಧನವಾಗಿ ನೀಡಬಹುದು.

22.4 ಬ್ಯಾಂಕಿನ ಸದಸ್ಯರು ಮೃತರಾದಾಗ ಶವ ಸಂಸ್ಕಾರ ಮಾಡಲು ಬ್ಯಾಂಕಿನ ವತಿಯಿಂದ ರೂ.10,000/–ಗಳ ಆರ್ಥಿಕ ನೆರವನ್ನು ಸದಸ್ಯರ ಕುಟುಂಬಕ್ಕೆ ಸಹಾಯಧನವಾಗಿ ನೀಡಬಹುದು.

22.5 ಕಿಡ್ನಿ, ಹೃದಯ ತೊಂದರೆ, ಕ್ಯಾನ್ಸರ್, Liver transplantation, Knee joint replacement ನಂತಹ Major ಶಸ್ತ್ರಚಿಕಿತ್ಸೆಗಳಿಗೆ ಒಳಪಟ್ಟಿರುವ ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳಿಗೆ ರೂ.5,000/–ಗಳಿಂದ ರೂ.50,000/–ಗಳಿಗೆ ಮೀರದಂತೆ, ಸದಸ್ಯರ ಹಾಗೂ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಖಾಯಿಲೆಯ ತೀವ್ರತೆ ಮತ್ತು ವೈದ್ಯಕೀಯ ದೃಢೀಕರಣ ಪತ್ರವನ್ನು ಪರಿಗಣಿಸಿ ಸಹಾಯಧನ ನೀಡಬಹುದು.

22.6 ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳ ವೈದ್ಯಕೀಯ ತಪಾಸಣೆ ಹಾಗೂ ಶುಷ್ರೂಷೆಗಾಗಿ ನಡೆಸುತ್ತಿರುವ "ಟಿ ಜಿ ಎಂ ಛಾರಿಟಬಲ್ ಟ್ರಸ್ಟ್" ನಿಂದ ಸದಸ್ಯರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಕಾರ್ಯಕಾರಿ ಮಂಡಳಿಯು ಪ್ರತಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ವಾರ್ಷಿಕ ರೂ.1,500/–ಗಳಿಗೆ ಮೀರದಂತೆ ಕೊಡಬಹುದು.

**23. ಸದಸ್ಯರ ಮರಣಾನಂತರ ಹಕ್ಕು ಬಾಧ್ಯತೆಗಳ ವರ್ಗಾವಣೆ:**

23.1 ಮರಣ ಹೊಂದಿದ ಸದಸ್ಯರ ಹಕ್ಕು ಬಾಧ್ಯತೆಗಳನ್ನು ಸಹಕಾರ ಕಾಯಿದೆಯ ಕಲಂ 24 ರ ರೀತ್ಯಾ ಇತ್ಯರ್ಥ ಪಡಿಸತಕ್ಕದ್ದು.

23.2 ಸದಸ್ಯನು ಮೃತಹೊಂದಿದ ಮಾಹಿತಿ ತಲುಪಿದ ಮೂರು ತಿಂಗಳೊಳಗಾಗಿ ನಾಮ ನಿರ್ದೇಶಿತರಿಂದ ಷೇರು ವರ್ಗಾವಣೆಗಾಗಿ ಅರ್ಜಿ ಬಾರದೇ ಇದ್ದಲ್ಲಿ ಅಥವಾ ನಾಮ ನಿರ್ದೇಶಿತರೇ ಇಲ್ಲದಿದಲ್ಲಿ ಅಥವಾ ಹಕ್ಕುದಾರರೇ ಇಲ್ಲದಿದ್ದಲ್ಲಿ ಬ್ಯಾಂಕಿಗೆ ಮೃತ ಸದಸ್ಯನಿಂದ ಬರಬೇಕಾದ ಎಲ್ಲಾ ಬಾಕಿಯನ್ನು ಹೊಂದಾಣಿಕೆ ಮಾಡಿಕೊಂಡ ಮೇಲೆ ಉಳಿದ ಹಣವನ್ನು "ಅಮಾನತು ಖಾತೆ" (ಸಸ್‌ಪೆನ್ಸ್ ಅಕೌಂಟ್) ಗೆ ವರ್ಗಾವಣೆ ಮಾಡತಕ್ಕದ್ದು.

23.3 ಮೃತಪಟ್ಟ ಸದಸ್ಯನ ಷೇರು ವರ್ಗಾವಣೆಗಾಗಿ ಹಕ್ಕುದಾರರು ಸಲ್ಲಿಸತಕ್ಕ ಅರ್ಜಿಯನ್ನು ತಲುಪಿಸಿದ 30 ದಿನಗಳ ಅವಧಿಯೊಳಗಾಗಿ ನಿರ್ದೇಶಕ ಮಂಡಳಿಯ ಮುಂದಿಡಬೇಕು.ನಿರ್ದೇಶಕ ಮಂಡಳಿಯು ಈ ಬಗ್ಗೆ ಸರಿಯೆನಿಸಿದಲ್ಲಿ ಹಕ್ಕುದಾರರು ಈಗಾಗಲೇ ಬ್ಯಾಂಕಿನ ಸದಸ್ಯರಾಗಿದ್ದರೆ, ಅವರಿಗೆ ಮೃತರು ಹೊಂದಿರುವ ಎಲ್ಲಾ ಷೇರುಗಳನ್ನು ವರ್ಗಾಯಿಸಬಹುದು.

23.4 ನಾಮ ನಿರ್ದೇಶಿತ ಹಕ್ಕುದಾರರು ಸದಸ್ಯರಾಗಿರದಿದ್ದಲ್ಲಿ ಅಂತಹವರು ಉಪವಿಧಿ 16 ಮತ್ತು 17 ರ ಪ್ರಕಾರ ಸದಸ್ಯರಾಗಲು ಅರ್ಹತೆಯನ್ನು ಪಡೆದಿದ್ದರೆ ಅಂತಹವರನ್ನು ಸದಸ್ಯರನ್ನಾಗಿ ಸೇರಿಸಿಕೊಂಡು, ಮೃತರ ಷೇರುಗಳನ್ನು ಉಪವಿಧಿ 23(3) ರ ಪ್ರಕಾರ ವರ್ಗಾವಣೆ ಮಾಡತಕ್ಕದ್ದು.

23.5 ಒಬ್ಬರಿಗಿಂತ ಹೆಚ್ಚು ನಾಮ ನಿರ್ದೇಶಿತರಿದ್ದರೆ ಅಥವಾ ಯಾವ ನಾಮ ನಿರ್ದೇಶಿತರೂ ಇಲ್ಲದಿದ್ದಲ್ಲಿ ಅಥವಾ ಒಬ್ಬರಿಗಿಂತ ಹೆಚ್ಚು ಹಕ್ಕುದಾರರಿದ್ದರೆ, ವರ್ಗಾವಣೆ ಅರ್ಜಿಯಲ್ಲಿ ಎಲ್ಲಾ ನಾಮ ನಿರ್ದೇಶಿತರ ಅಥವಾ ಹಕ್ಕುದಾರರ ಸಹಿಯಾಗಿರಬೇಕು.ಅಥವಾ ಅಪ್ರಾಪ್ತ ವಯಸ್ಕರಿದ್ದರೆ ಅವರಲ್ಲಿ ಯಾರಿಗೆ ಎಷ್ಟು ಷೇರುಗಳನ್ನು ವರ್ಗಾಯಿಸಬೇಕೆಂದು ಆ ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

23.6 ಮೃತರ ಎಲ್ಲಾ ಷೇರುಗಳನ್ನು ವರ್ಗಾವಣೆ ಮಾಡದೇ ಭಾಗಶಃ ವರ್ಗಾಯಿಸಿದಲ್ಲಿ ಉಪವಿಧಿ 23(3) ರ ಪ್ರಕಾರ ವರ್ಗಾವಣೆ ಮಾಡದ ಷೇರು ಮೊಬಲಗನ್ನು ಸಹಕಾರ ಕಾಯ್ದೆಯ 24 ನೇ ಕಲಂ ನಲ್ಲಿ ವಿವರಿಸಿರುವಂತೆ ವಿಲೇವಾರಿ ಮಾಡತಕ್ಕದ್ದು.

**24. ಸದಸ್ಯನ ಹೊಣೆಗಾರಿಕೆಗಳು:**

24.1 ಬ್ಯಾಂಕು ಸಮಾಪನೆಗೊಂಡ ಸಂದರ್ಭದಲ್ಲಿ ಪ್ರತಿಯೊಬ್ಬ ಸದಸ್ಯನ ಹೊಣೆಗಾರಿಕೆಯು ಆತನು ಹೊಂದಿರುವ ಷೇರಿನ ಮೊತ್ತಕ್ಕೆ ಸೀಮಿತವಾಗಿರುತ್ತದೆ.

24.2 ಸಹಸದಸ್ಯರು ಮತ್ತು ನಾಮಮಾತ್ರ ಸದಸ್ಯರನ್ನು ಹೊರತುಪಡಿಸಿ ಬ್ಯಾಂಕಿನ ಎಲ್ಲಾ ಸದಸ್ಯರೂ ವಾರ್ಷಿಕ ಮಹಾಸಭೆ/ ವಿಶೇಷ ಮಹಾಸಭೆಗಳಲ್ಲಿ ಭಾಗವಹಿಸತಕ್ಕದ್ದು ಹಾಗೂ ನಿರ್ದೇಶಕ ಮಂಡಳಿಗೆ ನಡೆಯುವ ಚುನಾವಣೆಯಲ್ಲಿ ಭಾಗವಹಿಸತಕ್ಕದ್ದು.

24.3 ಬ್ಯಾಂಕಿನಿಂದ ಸಾಲ ಪಡೆದ ಸಾಲಗಾರ ಸದಸ್ಯರು ಯಾವ ಉದ್ದೇಶಕ್ಕಾಗಿ ಸಾಲ ಪಡೆದಿರುತ್ತಾರೋ ಅದೇ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದು.ಸಾಲಗಾರ / ಜಾಮೀನುದಾರರು ಬ್ಯಾಂಕು ನಿಗಧಿಪಡಿಸಿದಂತೆ ಕಾಲಕಾಲಕ್ಕೆ ಸಾಲದ ಅಸಲು, ಬಡ್ಡಿ ಮತ್ತು ದಂಡ ಬಡ್ಡಿ ಇತ್ಯಾದಿ ವೆಚ್ಚಗಳನ್ನು ಪಾವತಿಸತಕ್ಕದ್ದು.

24.4 (ಕೈಬಿಡಲಾಗಿದೆ).

24.5 ಯಾವ ಸದಸ್ಯನೇ ಆಗಲಿ ಬ್ಯಾಂಕಿನ ಹಿತಕ್ಕೆ ಧಕ್ಕೆ ಬರುವಂತಹ ಯಾವುದೇ ಚಟುವಟಿಕೆಗಳಲ್ಲಿ ತೊಡಗಬಾರದು.

**24.6 ಬ್ಯಾಂಕಿನ ಯಾರೇ ಸದಸ್ಯನು –**

1. ಬ್ಯಾಂಕಿನ ವ್ಯವಹಾರ ಮತ್ತು ಆಗು–ಹೋಗುಗಳ ಬಗ್ಗೆ ತಿಳಿದುಕೊಳ್ಳುವ;
2. ತನ್ನ ದೈನಂದಿನ ವ್ಯವಹಾರದಲ್ಲಿ ತನಗೆ ಸಂಬಂಧಪಟ್ಟಂತೆ ಬ್ಯಾಂಕು ನಿರ್ವಹಿಸುವ ಲೆಕ್ಕಪುಸ್ತಕಗಳನ್ನು ನೋಡುವ ಮತ್ತು ತತ್ಸಂಬಂಧದ ಮಾಹಿತಿ ಮತ್ತು ಲೆಕ್ಕಗಳನ್ನು ಪಡೆಯುವ;

3 ರಿಸರ್ವ್ ಬ್ಯಾಂಕಿನ ನಿಬಂಧನೆಗಳಿಗೆ ಒಳಪಟ್ಟು ಬ್ಯಾಂಕಿನ ನಿಯಮಾನುಸಾರ ಸಾಲ ಮುಂಗಡಗಳನ್ನು ಪಡೆಯುವ;

4. ಲಾಭ ಹಂಚಿಕೆ ಮಾಡಿದಾಗ, ಡಿವಿಡೆಂಡ್ ಪಡೆಯುವ;

5. ಕಾಯ್ದೆ ಬದ್ಧ ಲೆಕ್ಕಪರಿಶೋಧನಾ ವರದಿಯ ಪ್ರತಿಯನ್ನು ಪಡೆಯುವ;

6. ಕಾಯ್ದೆ ಬದ್ಧ ವಿಚಾರಣಾ ಮತ್ತು ಅಥವಾ ಪರಿವೀಕ್ಷಣಾ ವರದಿ, ಇದ್ದಲ್ಲಿ ಅದರ ಪ್ರತಿಯನ್ನು ಪಡೆಯುವ;

7. ಲೆಕ್ಕಪರಿಶೋಧನಾ ಅಥವಾ ವಿಚಾರಣಾ ಅಥವಾ ಪರಿವೀಕ್ಷಣಾ ವರದಿಗಳಲ್ಲಿ ಕಂಡು ಬರುವ ಲೋಪದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಳ್ಳಬೇಕಾದ ಕ್ರಮವನ್ನು ಸೂಚಿಸುವ;

8. ಸಾಮಾನ್ಯ ಸಭೆಯ ನೋಟೀಸಿನ ಜೊತೆ ಅಜೆಂಡಾದ ಪ್ರಕಾರ ಪ್ರತಿ ವಿಷಯಕ್ಕೆ ಸಂಬಂಧಪಟ್ಟ ಟಿಪ್ಪಣಿ, ಮಾಹಿತಿ ಮತ್ತು ವರದಿಗಳ ಪ್ರತಿಯನ್ನು (ಹಿಂದಿನ ಸಾಲಿನ ಸಾಮಾನ್ಯ ಸಭೆಯ ನಡವಳಿ ಸಹಿತ) ಪಡೆಯುವ ಹಾಗೂ ಸಾಮಾನ್ಯ ಸಭೆ ನಡೆಯುವ ಸಂದರ್ಭದಲ್ಲಿ ಎಲ್ಲಾ ಸದಸ್ಯರಿಗೆ ನೀಡುವ ಟಿಪ್ಪಣಿ, ಮಾಹಿತಿ ಹಾಗೂ ವರದಿಗಳ ಪ್ರತಿಯನ್ನು ಪಡೆಯುವ;– ಹಕ್ಕು ಹೊಂದಿರತಕ್ಕದ್ದು.

24.7 ಬ್ಯಾಂಕಿನಿಂದ ಪಡೆದ ಸಾಲದ ಅಥವಾ ಯಾವುದೇ ರೀತಿಯ ಬಾಕಿಯನ್ನು ಪಾವತಿಸಲು ಸುಸ್ತಿದಾರನಾಗಿದ್ದಲ್ಲಿ, ಅಂಥ ಸದಸ್ಯನು ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

24.8 ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯನು ಸಾಮಾನ್ಯ

ಸಭೆಯಲ್ಲಿ ಮತನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**24 (ಅ) ಸದಸ್ಯನ ಕರ್ತವ್ಯಗಳು :** ಬ್ಯಾಂಕಿನ ಯಾರೇ ಸದಸ್ಯನು

(1) ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ನೌಕರನಾಗಿರತಕ್ಕದ್ದಲ್ಲ;

(2) ಕಾಯ್ದೆಯ ಕಲಂ 16 ರಡಿ ಸದಸ್ಯತ್ವ ಪಡೆಯಲು ಅರ್ಹನಾಗಿರತಕ್ಕದ್ದು;

(3) ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ವಾಸಮಾಡುತ್ತಿರತಕ್ಕದ್ದು ಮತ್ತು ಬ್ಯಾಂಕು ನಡೆಸುತ್ತಿರುವಂತಹ ಬಗೆಯ ಯಾವುದೇ ವ್ಯವಹಾರವನ್ನು ನಡೆಸುತ್ತಿರತಕ್ಕದ್ದಲ್ಲ;

(4) ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಷೇರು ಮತ್ತು ಠೇವಣಿಯನ್ನು ಪಾವತಿಸಿರತಕ್ಕದ್ದು;

(5) ಸಾಮಾನ್ಯವಾಗಿ ಬ್ಯಾಂಕಿನ ಪ್ರತಿಯೊಂದು ಸಾಮಾನ್ಯ ಸಭೆಗೆ ಹಾಜರಾಗತಕ್ಕದ್ದು. ಆದರೆ, ಕಳೆದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರತಕ್ಕದ್ದು;

(6) ಸಾಮಾನ್ಯ ಸಭೆಗೆ ಹಾಜರಾಗುವ ಮುನ್ನ ಸಭೆಯ ಅಜೆಂಡಾ ಹಾಗೂ ಟಿಪ್ಪಣಿಗಳನ್ನು ಅಧ್ಯಯನ ಮಾಡಿ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕದು. ಅಗತ್ಯ ಬಿದ್ದರೆ ಯಾವುದೇ ನಿರ್ಣಯದ ವಿರುದ್ಧ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಲು ಹಕ್ಕುಳ್ಳವನಾಗಿರತಕ್ಕದ್ದು;

(7) ಬ್ಯಾಂಕಿನಿಂದ ಪಡೆದ ಸಾಲದ ಅಥವಾ ಯಾವುದೇ ರೀತಿಯ ಬಾಕಿಯನ್ನು ಪಾವತಿಸಲು ಸುಸ್ತಿದಾರನಾಗಿರತಕ್ಕದ್ದಲ್ಲ;

(8) ಬೇರೆ ಸಹಕಾರ ಸಂಘಗಳ ಸದಸ್ಯನಾಗಿದ್ದಲ್ಲಿ ಸದರಿ ಮಾಹಿತಿಯನ್ನು ಬ್ಯಾಂಕಿಗೆ ತಿಳಿಸತಕ್ಕದ್ದು;

(9) ತನ್ನ ಮರಣಾ ನಂತರ ಬ್ಯಾಂಕಿನಲ್ಲಿರುವ ತನ್ನ ಷೇರನ್ನು ಅಥವಾ ಯಾವುದೇ ಇತರ ಹಿತಾಸಕ್ತಿಯನ್ನು ಪಡೆಯಲು ನಾಮಿನಿಯನ್ನು ನೇಮಕ ಮಾಡತಕ್ಕದ್ದು;

(10) ಸದಸ್ಯನಾದ ತಕ್ಷಣ ಬ್ಯಾಂಕಿನಿಂದ ಗುರುತಿನ ಕಾರ್ಡನ್ನು ಪಡೆಯತಕ್ಕದ್ದು;

(11) ತನ್ನ ವಾಸಸ್ಥಳ ಅಥವಾ ವಿಳಾಸದಲ್ಲಿ ಯಾವುದೇ ಬದಲಾವಣೆಯಾದಲ್ಲಿ, ಅಂಥ ಬದಲಾವಣೆಯಾದ ಹದಿನೈದು ದಿನಗಳೊಳಗಾಗಿ ಲಿಖಿತದಲ್ಲಿ ಬ್ಯಾಂಕಿಗೆ ತಿಳಿಸತಕ್ಕದ್ದು;

(12) ಸದಸ್ಯತ್ವದ ಹಕ್ಕನ್ನು ಪಡೆಯಲು ಅಗತ್ಯವಾದ ಷೇರು ಬಂಡವಾಳದ ಮುಖ ಬೆಲೆಯನ್ನು ಹೆಚ್ಚಿಸಿದ ಸಂದರ್ಭದಲ್ಲಿ, ಬ್ಯಾಂಕು ಅಂಥ ಹೆಚ್ಚುವರಿ ಮೊಬಲಗನ್ನು ಪಾವತಿಸಲು ನೀಡಿದ ನೋಟೀಸಿನ ನಂತರ ಪಾವತಿಸತಕ್ಕದ್ದು;

(13) ಬ್ಯಾಂಕಿನ ಹಿತಕ್ಕೆ ಧಕ್ಕೆ ತರುವಂತಹ ಯಾವುದೇ ಕೃತ್ಯವನ್ನು ಎಸಗತಕ್ಕದ್ದಲ್ಲ;

(14) ಸಾಮಾನ್ಯ ಸಭೆಯಲ್ಲಿ ಕಾಯ್ದೆಯ, ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳಿಗೆ ವಿರುದ್ಧವಾದ ಅಥವಾ ಬ್ಯಾಂಕಿನ ಹಿತಕ್ಕೆ ಧಕ್ಕೆ ತರುವಂತಹ ಯಾವುದೇ ನಿರ್ಣಯಕ್ಕೆ ಭಾಗಿದಾರನಾಗಿರತಕ್ಕದ್ದಲ್ಲ.

**24 (ಆ) ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು :**

(1) ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು–

(ಅ) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು;

(ಆ) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಎರಡು ಸಾವಿರದ ಐದು ನೂರು ರೂಪಾಯಿಗಳು;

ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ, ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯಮೊತ್ತ

(ಇ) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು 25 ಇರತಕ್ಕದ್ದು.

(2) ಮೇಲೆ ತಿಳಿಸಿದ ಠೇವಣಿಯು ಸದಸ್ಯನು ವರ್ಷವಿಡೀ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ) ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.

(3) ರಿಸರ್ವ್ ಬ್ಯಾಂಕು ನೀಡಿರುವ "ನಿಮ್ಮ ಗ್ರಾಹಕನನ್ನು ತಿಳಿಯಿರಿ (ಕೆ.ವೈ.ಸಿ)" ನಿರ್ದೇಶನವು ಬ್ಯಾಂಕಿನ ಪ್ರತಿ ಸದಸ್ಯನಿಗೆ ಅನ್ವಯವಾಗತಕ್ಕದ್ದು.

(4) ಸಾಲದ ಮೊತ್ತವು ಬ್ಯಾಂಕು ಮಂಜೂರು ಮಾಡಿ ಸದಸ್ಯನು ಉಪಯೋಗಿಸಿಕೊಂಡ ಸಾಲದ ಮಿತಿಯಾಗಿರತಕ್ಕದ್ದು. ಇದು ಇಡೀ ಸಾಲದ ಅವಧಿಗೆ ಅನ್ವಯವಾಗತಕ್ಕದ್ದು.

**25. ಜಾಮೀನುದಾರರ ಜವಾಬ್ದಾರಿ ಮತ್ತು ಕರ್ತವ್ಯಗಳು :**

25.1 ಜಾಮೀನುದಾರರು ಸಾಲಗಾರರಷ್ಟೇ ಬ್ಯಾಂಕಿನ ಸಾಲದ ಹಣಕ್ಕೆ ಹೊಣೆಗಾರರಾಗಿರುತ್ತಾರೆ.

25.2 ಜಾಮೀನು ಕೊಡುವ ಮುನ್ನ ಜಾಮೀನುದಾರರು ಸಾಲಗಾರರ ಆರ್ಥಿಕ ಸ್ಥಿತಿ ಸಾಲದ ಉದ್ದೇಶ ಮತ್ತು ಸಾಲ ತೀರಿಸುವ ಶಕ್ತಿ ಇವುಗಳ ಬಗ್ಗೆ ತಿಳಿದುಕೊಳ್ಳತಕ್ಕದ್ದು.

25.3 ಯಾವುದೇ ಸದಸ್ಯರಿಂದ ಬ್ಯಾಂಕಿಗೆ ಬರಬೇಕಾದ ಬಾಕಿ ಹಣವನ್ನು ನ್ಯಾಯಾಲಯದ ಡಿಕ್ರಿ ಮೂಲಕ ವಸೂಲಿ ಮಾಡಿದರೆ ಅಂತಹ ಸದಸ್ಯರು ಸಾಲ ತೀರುವಳಿಯಾದ ದಿನಾಂಕದಿಂದ ಆರು ತಿಂಗಳವರೆಗೆ ಸಾಲ ಪಡೆಯಲು ಮತ್ತು ಇತರ ಸದಸ್ಯರಿಗೆ ಯಾವುದೇ ರೀತಿಯಲ್ಲೂ ಜಾಮೀನುದಾರರಾಗಿ ನಿಲ್ಲಲ್ಲು ಅನರ್ಹರಾಗಿರುತ್ತಾರೆ.

**26. ಹಿಂದಿನ ಸದಸ್ಯರ ಹೊಣೆಗಾರಿಕೆ ಮತ್ತು ಮೃತಪಟ್ಟ ಸದಸ್ಯರ ಆಸ್ತಿಯ ಹೊಣೆಗಾರಿಕೆ:**

ಹಿಂದಿನ ಸದಸ್ಯರ ಮತ್ತು ಮೃತಪಟ್ಟ ಸದಸ್ಯನ ಆಸ್ತಿಯ ಜವಾಬ್ದಾರಿಯು ಕಾಯ್ದೆಯ 25 ನೇ ಕಲಂಗೆ ಒಳಪಟ್ಟಿರುತ್ತದೆ.ಸದಸ್ಯನಿಂದ ಕಾಲಕಾಲಕ್ಕೆ ಬರತಕ್ಕ ಎಲ್ಲಾ ಬಾಕಿ ಮೊಬಲಗಿಗೂ ಸದಸ್ಯನು ಪಡೆದಿರತಕ್ಕ ಷೇರು, ಡಿವಿಡೆಂಡ್ ಮತ್ತು ಠೇವಣಿಗಳ ಮೇಲೆ ಬ್ಯಾಂಕಿಗೆ ಪ್ರಥಮ ಹಕ್ಕು ಇರುತ್ತದೆ.ಸದಸ್ಯನಿಂದ ಬರತಕ್ಕ ಬಾಕಿ ಹಣದ ಸಲುವಾಗಿ ಅವನಿಗೆ ಸಂದಾಯವಾಗಬೇಕಾದಾಗ ಮೊಬಲಗುಗಳನ್ನು ಹೊಂದಾಣಿಕೆ ಮಾಡಿಕೊಳ್ಳುವ ಅಧಿಕಾರವೂ ಬ್ಯಾಂಕಿಗೆ ಇರುತ್ತದೆ.

**27. ವಾರ್ಷಿಕ ಸರ್ವಸದಸ್ಯರ ಸಭೆಗೆ ಮುನ್ನ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು.**

ವಾರ್ಷಿಕ ಸರ್ವಸದಸ್ಯರ ಸಭೆ **ಅಥವಾ ಚುನಾವಣೆ** ನಡೆಯುವ ತಾರೀಖಿನ 30 ದಿನಗಳ ಮುಂಚಿತವಾಗಿ ಯಾವ ವ್ಯಕ್ತಿಯನ್ನೂ ಸದಸ್ಯರನ್ನಾಗಿ ಸೇರಿಸಿಕೊಳ್ಳಕೂಡದು.

**28. ಸದಸ್ಯರ ರಿಜಿಸ್ಟರ್ :**

ಮಂಡಳಿಯು ನಿಗದಿಪಡಿಸಿದ ರೀತಿಯಲ್ಲಿ ಬ್ಯಾಂಕು ಪ್ರತಿ ಸಹಕಾರ ವರ್ಷದ ಕೊನೆಯ ದಿನದಂದು ಇರುವಂತೆ ತನ್ನ ಸದಸ್ಯರುಗಳ ಒಂದು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಸದಸ್ಯರುಗಳ ಪಟ್ಟಿಯನ್ನು ಮಂಡಳಿಯ ಚುನಾವಣೆಯ ಸಲುವಾಗಿ ನಿಗದಿ ಮಾಡಲಾದ ಸಭೆಯ ದಿನಾಂಕಕ್ಕೆ ಹದಿನಾಲ್ಕು ದಿವಸ ಮುಂಚಿತವಾಗಿ ಪರಿಷ್ಕರಿಸತಕ್ಕದ್ದು ಮತ್ತು ಸದರಿ ಪಟ್ಟಿಯನ್ನು ಈ ಹಿಂದೆ ಪರಿಷ್ಕರಿಸಲಾದ ದಿನಾಂಕದಂದು ಕೊನೆಗೊಳ್ಳುವ ಅವಧಿಯವರೆಗೆ ಹೊಸದಾಗಿ ಸೇರಿಸಲ್ಪಟ್ಟ ಸದಸ್ಯರುಗಳನ್ನು ಸೇರಿಸಿ ಸದರಿ ಅವಧಿಯಲ್ಲಿ ತೆಗೆದುಹಾಕಲಾದ ಸದಸ್ಯರ ಹೆಸರುಗಳನ್ನು ಹೊರತುಪಡಿಸತಕ್ಕದ್ದು.

**29. ಸದಸ್ಯರ ವಿಳಾಸ :**

ಸದಸ್ಯರನ್ನಾಗಿ ಸೇರಿಸಿಕೊಂಡ ಪ್ರತಿ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಅವರ ಅರ್ಜಿಯಲ್ಲಿ ಇರುವಂತೆಯೇ ಸದಸ್ಯರ ರಿಜಿಸ್ಟರ್‌ನಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.ಮುಖ್ಯ ಕಾರ್ಯನಿರ್ವಾಹಕರಿಗೆ ಸದಸ್ಯರು ಬರೆದು ತಿಳಿಸಿದ ಎಲ್ಲಾ ವಿಳಾಸದ ಬದಲಾವಣೆಯನ್ನು ಮೇಲೆ ಹೇಳಿದ ರಿಜಿಸ್ಟರ್‌ನಲ್ಲಿ ದಾಖಲೆ ಮಾಡತಕ್ಕದ್ದು.ಸದಸ್ಯರಿಗೆ ಕಳುಹಿಸಿದ ಎಲ್ಲಾ ಮುನ್ಸೂಚನೆ ಪತ್ರಗಳನ್ನು ಅವರ ನೋಂದಾಯಿತ ವಿಳಾಸಕ್ಕೆ ಕಳುಹಿಸಿದಲ್ಲಿ ಸದಸ್ಯರಿಗೆ ಅವು ತಲುಪಿರುವಂತೆ ಭಾವಿಸಲಾಗುವುದು.

**30. ಸದಸ್ಯರಿಗೆ ಉಪವಿಧಿಗಳ ಪ್ರತಿಗಳನ್ನು ಒದಗಿಸುವುದು :**

ಸದಸ್ಯರು ಅಪೇಕ್ಷೆಪಟ್ಟಲ್ಲಿ ಉಪವಿಧಿಗಳ ಪ್ರತಿಯನ್ನು ಮತ್ತು ವ್ಯವಹಾರ ನಿಯಮಗಳ ಪ್ರತಿಯನ್ನು ನಿರ್ದೇಶಕ ಮಂಡಳಿಯು ನಿಗದಿ ಮಾಡುವ ಬೆಲೆಗೆ ಒದಗಿಸಬಹುದು.

**31. ಷೇರುಗಳ, ಠೇವಣಿಗಳ ಮತ್ತು ಲಾಭಾಂಶಗಳ ಮೇಲೆ ಧಾರಣಾಧಿಕಾರ :**

ಷೇರುಗಳ, ಠೇವಣಿಗಳ ಮತ್ತು ಇತರ ಲಾಭಾಂಶಗಳ ಮೊಬಲಗುಗಳ ಮೇಲೆ ಬ್ಯಾಂಕು ಪ್ರಥಮ ಧಾರಣಾಧಿಕಾರ ಹೊಂದಿದ್ದು ಸದಸ್ಯರಿಂದ ಕಾಲಕಾಲಕ್ಕೆ ಬರತಕ್ಕ ಎಲ್ಲಾ ಮೊಬಲಗುಗಳ ವಸೂಲಿಯ ಮೇಲೆ ಪ್ರಥಮ ಹಕ್ಕು ಪಡೆದಿರುತ್ತದೆ.

## ಅಧ್ಯಾಯ – 7

## ಸಹಸದಸ್ಯರು

**32. ಸಹ ಸದಸ್ಯರು – ಹಕ್ಕು ಮತ್ತು ಹೊಣೆಗಾರಿಕೆಗಳು :**

32.1 (ಅ) 18 ವರ್ಷಕ್ಕೆ ಮೀರಿದ ಯಾವ ವ್ಯಕ್ತಿಯೇ ಆಗಲಿ ಬ್ಯಾಂಕಿನ ಆಡಳಿತ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದಲ್ಲಿ ಅಂತಹವರನ್ನು ಹಾಗೂ ಉಪನಿಬಂದನೆ 4(21) ರಲ್ಲಿ ವಿವರಿಸಿರುವ ಇತರೆ ಯಾವುದೇ ವ್ಯಕ್ತಿಯನ್ನು ಬ್ಯಾಂಕಿನ ಸಹ ಸದಸ್ಯನನ್ನಾಗಿ ನಿರ್ದೇಶಕ ಮಂಡಳಿಯವರು ಸೇರಿಸಿಕೊಳ್ಳಬಹುದು.

32.1 (ಆ) ಸಹ ಸದಸ್ಯನಾಗಬಯಸುವ ವ್ಯಕ್ತಿಯು ಕನಿಷ್ಠ ಒಂದು ಷೇರಿನ ಪೂರ್ಣ ಹಣದ ಜೊತೆಗೆ ಪ್ರವೇಶಧನ ರೂ.25/– ಷೇರು ಶುಲ್ಕ ರೂ. 10/–ಗಳಂತೆ ಪಾವತಿಮಾಡಿ ಮಂಡಳಿಯು ನಿಗದಿಪಡಿಸಿರುವ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು..

32.1 (ಇ) ಸಹಸದಸ್ಯರ ಅರ್ಜಿ ತಿರಸ್ಕೃತವಾದರೆ ಅರ್ಜಿದಾರರಿಗೆ ಸೂಚನೆಕೊಟ್ಟು ಅವರು ಪಾವತಿ ಮಾಡಿರುವ (ಅರ್ಜಿ ಶುಲ್ಕ ಹೊರತುಪಡಿಸಿ ಉಳಿದ) ಪೂರ್ಣ ಹಣವನ್ನು ವಾಪಸ್ ನೀಡಬೇಕು.

32.1 (ಈ) ಸಹಸದಸ್ಯರು ಸಾಮಾನ್ಯ ಸದಸ್ಯರಿಗೆ ಲಭ್ಯವಿರುವ ಎಲ್ಲಾ ವಿಧವಾದ ಸಾಲ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.ಈ ಸೌಕರ್ಯವು ಆಡಳಿತ ಮಂಡಳಿಯಿಂದ ರೂಪಿತವಾದ ಹಾಗೂ ಸಹಕಾರಿ ನಿಬಂಧಕರಿಂದ ಅಂಗೀಕೃತವಾದ ವ್ಯವಹಾರ ನಿಯಮಗಳಿಗೆ ಒಳಪಟ್ಟಿರುತ್ತದೆ.

32.1(ಉ) ಸಹಸದಸ್ಯರು ಯಾವುದೇ ಒಬ್ಬ ಸಾಮಾನ್ಯ ಸದಸ್ಯನಿಗೆ ಹಾಗೂ ಒಬ್ಬ ಸಹಸದಸ್ಯನಿಗೆ ಜಾಮೀನುದಾರರಾಗಬಹುದು.

32.2 ಬ್ಯಾಂಕಿನ ಸಹಸದಸ್ಯರ ಹೊಣೆಗಾರಿಕೆಯು ಸಾಲಗಾರರಾಗಿ ಅಥವಾ ಜಾಮೀನುದಾರರಾಗಿ ಮತ್ತು ಅವರು ಹೊಂದಿರುವ ಷೇರಿನ ಮೊತ್ತ ಹಾಗೂ ಬ್ಯಾಂಕಿಗೆ ಕೊಡಬೇಕಾದ ಸಾಲದ ಬಾಕಿಗೆ ಮಾತ್ರ ಸೀಮಿತವಾಗಿರುತ್ತದೆ.

32.3 ಪ್ರತಿ ಸಹಸದಸ್ಯನ ಹೊಣೆಗಾರಿಕೆಯು ಸಾಮಾನ್ಯ ಸದಸ್ಯರಿಗೆ ಅನ್ವಯವಾಗುವ ಉಪವಿಧಿ ಸಂಖ್ಯೆ 24(1), (3), (4) ಮತ್ತು (5) ರಲ್ಲಿದ್ದಂತೆ ಇರತಕ್ಕದ್ದು.

32.4 ಸಹಸದಸ್ಯರಿಗೆ ಈ ಕೆಳಗಿನ ಅಂಶಗಳಲ್ಲಿ ಹಕ್ಕಿರುವುದಿಲ್ಲ.

32.4 (ಅ) ವಾರ್ಷಿಕ ಮಹಾಸಭೆಗಳಲ್ಲಿ ಭಾಗವಹಿಸಲು, ಮತಹಾಕಲು ಅಥವಾ ಆ ಬಗ್ಗೆ ಸೂಚನಾ ಪತ್ರ ಪಡೆಯಲು.

32.4 (ಆ) ಬ್ಯಾಂಕಿನ ಸಾಮಾನ್ಯ ಸದಸ್ಯರು ಪಡೆಯುವಂತೆ ಬ್ಯಾಂಕಿನ ವಾರ್ಷಿಕ ವರದಿ, ಆಸ್ತಿ–ಜವಾಬ್ದಾರಿ ಪಟ್ಟಿ ಅಥವಾ ಇತರೆ ಪತ್ರಗಳನ್ನು ಪಡೆಯಲು.

32.4 (ಇ) ಬ್ಯಾಂಕಿನ ಆಡಳಿತದಲ್ಲಿ ಭಾಗವಹಿಸಲು.

32.4 (ಈ) ಸಹಸದಸ್ಯನು ಇತರೆ ಸಹಕಾರಿ ಬ್ಯಾಂಕ್ ಅಥವಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯನಾಗಿ ಅಥವಾ ಸಹಸದಸ್ಯನಾಗಿ ಇರಕೂಡದು.

32.4 (ಉ) 32.5 ಬ್ಯಾಂಕಿನ ಒಟ್ಟು ಸಹ ಸದಸ್ಯರ ಸಂಖ್ಯೆಯು ಬ್ಯಾಂಕಿನ ಒಟ್ಟು ಸದಸ್ಯರ ಶೇ.15 ಕ್ಕೆ ಮೀರಕೂಡದು.

## ಅಧ್ಯಾಯ – 8

## ನಾಮಮಾತ್ರ ಸದಸ್ಯರು

**33. ನಾಮಮಾತ್ರ ಸದಸ್ಯರ ಹಕ್ಕು ಮತ್ತು ಹೊಣೆಹಾರಿಕೆ :**

33.1 18 ವರ್ಷಕ್ಕೆ ಮೀರಿದ ಯಾವ ವ್ಯಕ್ತಿಯೇ ಆಗಲಿ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದಲ್ಲಿ ಅಂತಹವರನ್ನು ಬ್ಯಾಂಕಿನ ನಾಮಮಾತ್ರ ಸದಸ್ಯರನ್ನಾಗಿ ಬ್ಯಾಂಕಿನ ನಿರ್ದೇಶಕ ಮಂಡಳಿಯವರು ಸೇರಿಸಿಕೊಳ್ಳಬಹುದು.

33.2 ಬ್ಯಾಂಕಿನ ಹಿತದೃಷ್ಟಿಯಿಂದ ಈ ಕೆಳಕಂಡವರನ್ನು ನಿರ್ದೇಶಕ ಮಂಡಳಿಯವರು ನಾಮಮಾತ್ರ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು.

(ಅ) ಬ್ಯಾಂಕಿನ ಪಿಗ್ಮಿ ಏಜೆಂಟರು.

(ಆ) ಬ್ಯಾಂಕಿನ ಆಸ್ತಿಗೆ ಸಂಬಂಧಪಟ್ಟ ಸಿವಿಲ್, ವಿದ್ಯುಚ್ಛಕ್ತಿ ಮತ್ತು ಇತರ ಕೆಲಸಗಳನ್ನು ನಿರ್ವಹಿಸುವ ಗುತ್ತಿಗೆದಾರರು ಮತ್ತು ಸರಬರಾಜುದಾರರು.

(ಇ) ಬ್ಯಾಂಕಿನ ಒಡವೆಗಳ ಗುಣಮಟ್ಟ ಪರೀಕ್ಷಕರು, ಮೌಲ್ಯಮಾಪಕರು, ಕಾನೂನು ಸಲಹೆಗಾರರು, ಆಂತರಿಕ ಲೆಕ್ಕಪರಿಶೋಧಕರು ಮತ್ತು ಬ್ಯಾಂಕಿನೊಡನೆ ವ್ಯವಹಾರಗಳನ್ನುಳ್ಳ ಇನ್ನಿತರರು.

33.3 ನಾಮಮಾತ್ರ ಸದಸ್ಯತ್ವ ಕೋರುವ ಅರ್ಜಿ ನಿಗದಿಗೊಳಿಸಿರುವ ನಮೂನೆಯಲ್ಲಿರತಕ್ಕದ್ದು ಮತ್ತು ಆ ಅಭ್ಯರ್ಥಿಯು ಅರ್ಜಿಯಲ್ಲಿ ಸಹಿ ಹಾಕಿ ಶುಲ್ಕ 100/– ರೂಪಾಯಿಗಳನ್ನು ಪಾವತಿ ಮಾಡಿರತಕ್ಕದ್ದು..

33.4 ನಾಮಮಾತ್ರ ಸದಸ್ಯರುಗಳನ್ನು ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರು ಸೇರಿಸಿಕೊಳ್ಳಬಹುದಾಗಿದ್ದು ಇಂತಹ ಸೇರಿಸಿಕೊಳ್ಳುವಿಕೆಯನ್ನು ನಿರ್ದೇಶಕ ಮಂಡಳಿಯು ಅನುಮೋದಿಸಬೇಕು.

33.5 ಸದಸ್ಯತ್ವಕ್ಕೆ ಸಲ್ಲಿಸಿದ ಅರ್ಜಿ ತಿರಸ್ಕೃತವಾದರೆ ಅರ್ಜಿದಾರರಿಗೆ ಅಂತಹ ತಿರಸ್ಕರಣೆಯ ಬಗ್ಗೆ ತಿಳುವಳಿಕೆ ಕೊಡಬೇಕು.

33.6 ಯಾರೇ ವ್ಯಕ್ತಿಯ ನಾಮಮಾತ್ರ ಸದಸ್ಯತ್ವವು ಆತನು ಸಾಲಗಾರನಾಗಿ ಅಥವಾ ಜಾಮೀನುದಾರನಾಗಿ ಪಡೆದ ಸಾಲಗಳನ್ನು ತೀರಿಸಿದ ಅಥವಾ ಆತನ ಇನ್ನಾವುದೇ ಒಪ್ಪಂದದ ಹೊಣೆಗಾರಿಕೆಯು ಪಾಲನೆ ಆದ ಕೂಡಲೇ, ಆತನ ನಾಮಮಾತ್ರ ಸದಸ್ಯತ್ವವು ಅಂತ್ಯಗೊಳ್ಳತಕ್ಕದ್ದು. ಆದಾಗ್ಯೂ ನಿಯಮಾನುಸಾರವಾಗಿ ಅವನು ಪುನ: ನಾಮಮಾತ್ರ ಸದಸ್ಯನಾಗಲು ಅರ್ಹತೆಯನ್ನು ಹೊಂದಿರತಕ್ಕದ್ದು.

33.7 ನಾಮಮಾತ್ರ ಸದಸ್ಯರಿಗೆ ಈ ಕೆಳಗೆ ನಮೂದಿಸಿರುವ ಅಂಶಗಳಲ್ಲಿ ಹಕ್ಕಿರುವುದಿಲ್ಲ.

(ಅ) ಬ್ಯಾಂಕಿನ ಷೇರು ಬಂಡವಾಳವನ್ನು ಹೊಂದಲು.

(ಆ) ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಲು ಅಥವಾ ಅದರ ಬಗ್ಗೆ ಮುನ್ಸೂಚನೆ ಪಡೆಯಲು.

(ಇ) ಬ್ಯಾಂಕಿನ ಆಡಳಿತದಲ್ಲಿ ಭಾಗವಹಿಸಲು.

(ಈ) ಬ್ಯಾಂಕಿಗೆ ಬರುವ ಲಾಭ ಅಥವಾ ಆಸ್ತಿಯಲ್ಲಿ ಯಾವುದೇ ರೀತಿಯ ಪಾಲು ಅಥವಾ ಅಂಶ ಪಡೆಯಲು.

(ಉ) ಬ್ಯಾಂಕಿನ ವಾರ್ಷಿಕ ವರದಿ, ಲಾಭ ನಷ್ಟ ಪಟ್ಟಿ ಹಾಗೂ ಆಸ್ತಿ ಜವಾಬ್ದಾರಿ ಪಟ್ಟಿ ಪಡೆಯಲು.

(ಊ) ಬ್ಯಾಂಕಿನ ಆಡಿಟ್ ವರದಿ, ವಿಚಾರಣಾ / ಪರಿವಿಕ್ಷಣಾ ವರದಿಗಳ ಪ್ರತಿಯನ್ನು ಪಡೆಯಲು.

33.8 ನಾಮಮಾತ್ರ ಸದಸ್ಯನು ಇತರೆ ಸಹಕಾರ ಬ್ಯಾಂಕ್ ಅಥವಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯನಾಗಿ ಅಥವಾ ನಾಮಮಾತ್ರ ಸದಸ್ಯನಾಗಿ ಇರಕೂಡದು.

33.9 ಬ್ಯಾಂಕಿನ ನಾಮಮಾತ್ರ ಸದಸ್ಯರ ಹೊಣೆಯು ಅವರು ತೆಗೆದುಕೊಂಡ ಮತ್ತು ಅವರು ಜಾಮೀನುದಾರರಾದ ಸಾಲದ ಹೊಣೆಗೆ ಮಾತ್ರ ಸೀಮಿತವಾಗಿರುತ್ತದೆ.

33.10 ನಾಮಮಾತ್ರ ಸದಸ್ಯ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ.

33.11 ಒಬ್ಬ ನಾಮಮಾತ್ರ ಸದಸ್ಯನು ಒಬ್ಬ ಸಾಮಾನ್ಯ ಸದಸ್ಯನಿಗೆ ಮಾತ್ರ ಜಾಮೀನುದಾರ ಆಗಿರಬಹುದು.

33.12 ನಿರ್ದೇಶಕ ಮಂಡಳಿಯಿಂದ ರೂಪಿತವಾದ ವ್ಯವಹಾರದ ನಿಯಮಗಳಿಗೆ ಒಳಪಟ್ಟು ನಾಮಮಾತ್ರ ಸದಸ್ಯರು ಈ ಕೆಳಗೆ ಕಾಣಿಸಿದ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಸಾಲಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

(ಅ) ಸರ್ಕಾರದ ಮತ್ತು ಇತರ ನ್ಯಾಸ ಪತ್ರಗಳ ಭದ್ರತೆಗಳ ಮೇಲೆ, ಅಂಚೆ ಉಳಿತಾಯಪತ್ರಗಳ ಆಧಾರದ ಮೇಲೆ

(ಆ) ವಿಮಾ ಪತ್ರಗಳ ಆಧಾರದ ಮೇಲೆ

(ಇ) ಚಿನ್ನದ ಒಡವೆಗಳ ಆಧಾರದ ಮೇಲೆ

(ಈ) ಸಾವಧಿ ಠೇವಣಿಗಳ (ಟರ್ಮ್ ಡಿಪಾಸಿಟ್) ಆಧಾರದ ಮೇಲೆ

(ಉ) ಭಾರತೀಯ ರಿಸರ್ವ ಬ್ಯಾಂಕ್‌ನವರು ಕಾಲಕಾಲಕ್ಕೆ ನಿಗದಿ ಮಾಡಿದ ಮಿತಿಯ ಒಳಗೆ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಲು.

33.13 ಯಾವುದೇ ಕಾಯ್ದೆಯಡಿಯಲ್ಲಿ ನೋಂದಾಯಿಸಲ್ಪಟ್ಟ ಸಹಕಾರ ಸಂಘವು ನಾಮಮಾತ್ರ ಸದಸ್ಯತ್ವ ಪಡೆಯಲು ಅರ್ಹವಲ್ಲ.

33.14 ನಾಮಮಾತ್ರ ಸದಸ್ಯರ ಒಟ್ಟು ಸಂಖ್ಯೆಯು ಭಾರತೀಯ ರಿಸರ್ವ್ ಬ್ಯಾಂಕ್‌ನವರು ಕಾಲಕಾಲಕ್ಕೆ ನಿಗದಿಪಡಿಸುವ ಮಿತಿಯನ್ನು ಮೀರಿರಕೂಡದು.

## ಅಧ್ಯಾಯ – 9

## ಸರ್ವ ಸದಸ್ಯರ ಸಭೆಗಳು

**34. ಪ್ರಥಮ ಸರ್ವಸದಸ್ಯರ ಸಭೆ:**

34.1 ಬ್ಯಾಂಕಿನ ನೋಂದಣಿಗೆ ಮುನ್ನ ಅರ್ಜಿ ಹಾಕಿ ಪ್ರಾರಂಭಿಕ ಷೇರು ಹಣ ನೀಡಿದ ಎಲ್ಲಾ ಸದಸ್ಯರ ಪ್ರಥಮ ಸಭೆಯನ್ನು ನೋಂದಣಿಯಾದ ಒಂದು ತಿಂಗಳೊಳಗಾಗಿ ಮುಖ್ಯ ಪ್ರವರ್ತಕರು ನಡೆಸತಕ್ಕದ್ದು ಮತ್ತು ಮುಖ್ಯಪ್ರವರ್ತಕರು ಅಂತಹ ಪ್ರಥಮ ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

34.2 ಪ್ರಥಮ ಸರ್ವ ಸದಸ್ಯರ ಸಭೆಯಲ್ಲಿ ಕೆಳಕಂಡ ವ್ಯವಹಾರಗಳನ್ನು ನಡೆಸತಕ್ಕದ್ದು.

(ಅ) ಸಭೆಯ ಸೂಚನಾ ಪತ್ರವನ್ನು ಓದಿ ದಾಖಲ್ಮಾಡುವುದು.

(ಆ) ನಿಬಂಧಕರು ಅನುಮೋದಿಸಿದ ಉಪವಿಧಿಗಳನ್ನು ಮತ್ತು ನೀಡಿದ ನೋಂದಣಿ ಪ್ರಮಾಣ ಪತ್ರವನ್ನು ಓದಿ ದಾಖಲ್ಮಾಡುವುದು.

(ಇ) ನೋಂದಣಿ ಮುನ್ನ ಸದಸ್ಯತ್ವ ಬಯಸಿ ಷೇರು ಹಣ ತೊಡಗಿಸಿದ ಹಾಗೂ ನೋಂದಣಿ ಅರ್ಜಿಯಲ್ಲಿ ಸೇರಿಕೊಂಡಿರುವ ವ್ಯಕ್ತಿಗಳ ಸದಸ್ಯತ್ವದ ಮನ್ನಣೆ.

(ಈ) ಮುಖ್ಯ ಪ್ರವರ್ತಕರು ಸಂಘದ ನೋಂದಣಿಯವರಿಗೆ ಮತ್ತು ಅನಂತರ ಪ್ರಥಮ ಮಹಾಸಭೆಯ ದಿನಾಂಕದವರೆಗೆ ಮಾಡಿದ ಜಮಾ ಖರ್ಚುಗಳ ವಿವರಗಳನ್ನು ಪರಿಶೀಲಿಸುವುದು ಮತ್ತು ಅಂಗೀಕರಿಸುವುದು.

(ಉ) ಆಡಳಿತ ಮಂಡಳಿಯ ಸದಸ್ಯರುಗಳನ್ನು ಆಯ್ಕೆ ಮಾಡುವುದು.

(ಊ) ಹಾಲಿ ಸಾಲಿನ ಬಜೆಟ್ ಅನುಮೋದಿಸುವುದು.

(ಋ) ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೇ ವಿಷಯಗಳು.

**35. ಪ್ರಥಮ ಸಾಮಾನ್ಯ ಸಭೆಯ ನೋಟೀಸು :**

ಮುಖ್ಯ ಪ್ರವರ್ತಕರು ಸಂಘದ ನೋಂದಣಿಗೆ ಮುನ್ನ ಅರ್ಜಿ ಹಾಕಿ ಪ್ರಾರಂಭಿಕ ಷೇರು ಹಣ ನೀಡಿದ ಪ್ರತಿಯೊಬ್ಬ ವ್ಯಕ್ತಿಗೆ ಪ್ರಥಮ ಸಾಮಾನ್ಯ ಸಭೆಯ ಸಭೆಗೆ ಸ್ಪಷ್ಟ 15 ದಿನಗಳ ಅವಧಿಯ ನೋಟೀಸು ಕೊಡತಕ್ಕದ್ದು.ನೋಟೀಸಿನಲ್ಲಿ ಸಭೆಯು ನಡೆಯುವ ದಿನಾಂಕ, ವೇಳೆ ಹಾಗೂ ಸ್ಥಳವನ್ನು ನಮೂದಿಸಿರತಕ್ಕದ್ದು.ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು ಸಹ ನಮೂದಿಸಿರಬೇಕು.ನೋಟೀಸನ್ನು ಪ್ರತಿಯೊಬ್ಬ ಸದಸ್ಯರಿಗೆ ಖುದ್ದಾಗಿ ಅಥವಾ ದೃಢೀಕೃತ ಅಂಚೆಯ ಮೂಲಕ ತಲುಪಿಸುವುದು.ನೋಟೀಸಿನ ಒಂದು ಪ್ರತಿಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು.

**36. ಪ್ರಥಮ ಸಾಮಾನ್ಯ ಸಭೆಯ ಕೋರಂ:**

ಪ್ರಥಮ ಸಾಮಾನ್ಯ ಸಭೆಯ ಸಭೆಗೆ ಕನಿಷ್ಟ ಸದಸ್ಯರ ಸಂಖ್ಯೆ ಉಪವಿಧಿ 41 ರಲ್ಲಿ ನಮೂದಿಸಿರುವಂತೆ ಇರತಕ್ಕದ್ದು.

**37. ಸಾಮಾನ್ಯ ಸಭೆ :**

37.1 ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ಅದರಡಿಯಲ್ಲಿ ರೂಪಿಸಿದ ನಿಯಮಗಳಿಗೆ ಹಾಗೂ ಈ ಉಪವಿಧಿಗಳಿಗೆ ಒಳಪಟ್ಟು ಬ್ಯಾಂಕಿನ ಅಂತಿಮ ಅಧಿಕಾರವು ಸರ್ವಸದಸ್ಯರ ಸಭೆಗೆ ಇರುತ್ತದೆ.

37.2 ಸಾಮಾನ್ಯ ಸಭೆಯ ಸಭೆಯಲ್ಲಿ ಎರಡು ವಿಧ – ಅಂದರೆ,

(ಅ) ವಾರ್ಷಿಕ ಸಾಮಾನ್ಯ ಸಭೆಯ ಸಭೆ ಮತ್ತು

(ಆ) ವಿಶೇಷ ಸಾಮಾನ್ಯ ಸಭೆಯ ಸಭೆ.

37.3 ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಪ್ರತಿವರ್ಷವೂ ಕಾಯ್ದೆ ಕಲಂ 27 ರ ಪ್ರಕಾರ ಸೆಪ್ಟೆಂಬರ್ 25ನೇ ತಾರೀಖಿನಂದು ಅಥವಾ ಅದರೊಳಗಾಗಿ ಮಂಡಳಿಯವರು ನಿರ್ಧರಿಸುವ ದಿನಾಂಕದಂದು ಕರೆಯತಕ್ಕದ್ದು.

37(ಎ) ಪ್ರಾತಿನಿಧಿಕ ಸಾಮಾನ್ಯ ಸಭೆ – ಬ್ಯಾಂಕಿನ ಸದಸ್ಯತ್ವವು ನಿಗದಿತ ಸಂಖ್ಯೆಗಿಂತ ಜಾಸ್ತಿಯಿದ್ದಲ್ಲಿ ಅಥವಾ ಕಾರ್ಯಕ್ಷೇತ್ರವು ನಿಗದಿತ ವ್ಯಾಪ್ತಿಗಿಂತ ಜಾಸ್ತಿಯಿದ್ದಲ್ಲಿ, ನಿಯಮಿಸಬಹುದಾದಂತಹ ಸಂಖ್ಯೆಯ ಪ್ರತಿನಿಧಿಗಳನ್ನುಳ್ಳ ಮತ್ತು ಸಾಮಾನ್ಯ ನಿಕಾಯದ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಪ್ರಾಥಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸಬಹುದು. ಹಾಗೆ ರಚಿಸಿದಲ್ಲಿ, ಮಂಡಳಿಯು ಪ್ರತಿನಿಧಿಗಳ ಸಂಖ್ಯೆಯನ್ನು ನಿಯಮಗಳಲ್ಲಿ ನಿಗದಿಪಡಿಸುವಂತೆ ನಿರ್ಧರಿಸಲು ಮತ್ತು ಪ್ರತಿನಿಧಿಗಳ ಚುನಾವಣೆಗೆ ಅಗತ್ಯವಾದ ಮತಕ್ಷೇತ್ರಗಳನ್ನು ನಿಗದಿಪಡಿಸಲು ಅಧಿಕಾರ ಹೊಂದಿರತಕ್ಕದ್ದು.

**38. ಸಾಮಾನ್ಯ ಸಭೆಗಾಗಿ ನೋಟೀಸು :**

ಸಾಮಾನ್ಯ ಸಭೆಯ ವಾರ್ಷಿಕ ಸಭೆ ಅಥವಾ ವಿಶೇಷ ಸಾಮಾನ್ಯ ಸಭೆಯ ಸಭೆಗೆ ಸ್ಪಷ್ಟ 15 ದಿನಗಳ ಮುಂಚೆ ಸೂಚನೆಯನ್ನು ಪ್ರತಿಯೊಬ್ಬ ಸದಸ್ಯರಿಗೂ ಕಳುಹಿಸಿಕೊಡತಕ್ಕದ್ದು.ಈ ಸೂಚನೆಯಲ್ಲಿ ಸಭೆ ನಡೆಯುವ ದಿನಾಂಕ, ವೇಳೆ, ಸ್ಥಳವನ್ನು ಮತ್ತು ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು ವಿವರವಾಗಿ ನಮೂದಿಸಿರಬೇಕು.ಸಾಮಾನ್ಯ ಸಭೆಯ ಸಭೆಯ ಸೂಚನೆಯನ್ನು ಪ್ರತಿ ಸದಸ್ಯರಿಗೂ ಮುದ್ದಾಂ ಬಟವಾಡೆ ಅಥವಾ ಪ್ರಮಾಣೀಕೃತ ಅಂಚೆಯ ಮೂಲಕ ಕಳುಹಿಸಿಕೊಡಬೇಕು.ಈ ಸೂಚನೆಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿಯೂ ಪ್ರದರ್ಶಿಸಬೇಕು ಮತ್ತು ಆ ಪ್ರದೇಶದಲ್ಲಿ ಪ್ರಸಾರದಲಿರುವ ವೃತ್ತ ಪತ್ರಿಕೆಯಲ್ಲೂ ಪ್ರಕಟಿಸಬೇಕು.ಎಲ್ಲಾ ಸದಸ್ಯರಿಗೆ ಸೂಚನೆ ಕಳುಹಿಸಿರುವುದಕ್ಕೆ ಬ್ಯಾಂಕಿನಲ್ಲಿ ಪ್ರಮಾಣೀಕೃತ ಅಂಚೆಯ ದಾಖಲೆ ಇದ್ದಲ್ಲಿ, ಅಂತಹ ಸೂಚನೆಯನ್ನು ಎಲ್ಲಾ ಸದಸ್ಯರಿಗೂ ತಲುಪಿಸಲಾಗಿದೆ ಎಂದು ಭಾವಿಸತಕ್ಕದ್ದು.ವಾರ್ಷಿಕ ಅಥವಾ ವಿಶೇಷ ಸಾಮಾನ್ಯ ಸಭೆಯ ಸೂಚನಾ ಪ್ರತಿ ತಲುಪಿಲ್ಲವೆಂಬ ಕಾರಣದಿಂದ ಸಭೆಯ ನಡವಳಿಕೆಗಳನ್ನು ಅನೂರ್ಜಿತಗೊಳಿಸಲಾಗದು.ಈ ಸಭೆಗಳ ನೋಟೀಸು ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರಿಂದ ಸಹಿ ಮಾಡಲ್ಪಟ್ಟಿರಬೇಕು.

38.(ಅ) **ಸಾಮಾನ್ಯ ಸಭೆಗಾಗಿ ನೋಟೀಸು:–**

ತುರ್ತು ಸಂದರ್ಭಗಳಲ್ಲಿ ಕನಿಷ್ಠ ಹತ್ತು ಸ್ಪಷ್ಟ ದಿನಗಳ ನೋಟೀಸು ನೀಡುವುದರ ಮೂಲಕ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು. ಈ ನೋಟೀಸಿನಲ್ಲಿ ಸಭೆಯು ನಡೆಯುವ ಸ್ಥಳ, ದಿನಾಂಕ ಮತ್ತು ವೇಳೆಯನ್ನು ಮತ್ತು ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು (ಅಜೆಂಡಾ) ಸ್ಪಷ್ಟವಾಗಿ ನಮೂದಿಸತಕ್ಕದ್ದು. ಅಂಥ ನೋಟೀಸಿನ ಜೊತೆ ಮುಖ್ಯಕಾರ್ಯನಿರ್ವಾಹಕನು ಅಜೆಂಡಾದಲ್ಲಿನ ಪ್ರತಿ ವಿಷಯದ ಬಗ್ಗೆ ವಿವರವಾದ ಟಿಪ್ಪಣಿಗಳನ್ನು ಹಿಂದಿನ ವರ್ಷದ ಲೆಕ್ಕಪರಿಶೋಧಿತ ಆಸ್ತಿ ಹೊಣೆ ಪಟ್ಟಿ, ಲಾಭ–ನಷ್ಟ ತಃಖ್ತೆ ಮತ್ತು ಲೆಕ್ಕಪರಿಶೋಧನಾ ವರದಿಯ ಪ್ರತಿಯನ್ನು, ಅದರ ಮೇಲೆ ಮಂಡಳಿಯು ತೆಗೆದುಕೊಂಡ ಕ್ರಮಗಳ ಅನುಸರಣಾ ವರದಿಯ ಪ್ರತಿಯನ್ನು ಲಗತ್ತಿಸತಕ್ಕದ್ದು. ಉಪವಿಧಿ ತಿದ್ದುಪಡಿಯ ಪ್ರಸ್ತಾವವಿದ್ದಲ್ಲಿ, ಬೈಲಾ ಸಂಖ್ಯೆ, ಹಾಲಿ ಇರುವ ಬೈಲಾ ಉಪಬಂಧ, ಪ್ರಸ್ತಾಪಿತ ತಿದ್ದುಪಡಿಯ ಪಾಠ ಮತ್ತು ತಿದ್ದುಪಡಿಗೆ ಕಾರಣಗಳನ್ನೂ ಸಹಿತ ನೋಟೀಸಿನ ಜೊತೆ ಕಳುಹಿಸತಕ್ಕದ್ದು. ಅಂಥ ನೋಟೀಸನ್ನು ಬ್ಯಾಂಕಿನ ನೋಂದಾಯಿತ ಕಛೇರಿಯ ಮತ್ತು ಅದರ ಶಾಖೆಗಳ ಸೂಚನಾ ಫಲಕಗಳಲ್ಲಿ ಅಂಟಿಸಿ ಪ್ರದರ್ಶಿಸತಕ್ಕದ್ದು ಹಾಗೂ ಈ ಕೆಳಗಿನ ವಿಧಾನದ ಮೂಲಕ ಕಳುಹಿಸತಕ್ಕದ್ದು.

(1)ವಿದ್ಯುಜ್ಜನ್ಯ ಅಂಚೆಯ (e-mail) / ಸಂಕ್ಷಿಪ್ತ ಸಂದೇಶ ಸೇವೆ(SMS)ಯ ಮೂಲಕ; ಅಥವಾ

(2) ಸೌಲಭ್ಯಗಳು ಲಭ್ಯವಾಗುವ ಎಲ್ಲಾ ಸ್ಥಳಗಳಲ್ಲಿ ಒಟ್ಟಾಗಿ (ಬಲ್ಕ್) ಅಂಚೆ ಮೂಲಕ; ಅಥವಾ

**(3) ಕೊರಿಯರ್ ಮೂಲಕ: ಅಥವಾ**

(4) ಸೂಕ್ತ ಸ್ವೀಕೃತಿಯ ಸಹಿತ ಸ್ಥಳೀಯ ತಲುಪಿಸುವಿಕೆ ಮೂಲಕ; ಅಥವಾ

(5) ಸಾಮಾನ್ಯ ಅಂಚೆ ಮೂಲಕ; ಮತ್ತು ಕಾರ್ಯಕ್ಷೇತ್ರದಲ್ಲಿ ಸಾಕಷ್ಟು ಪರಿಚಲನೆಯಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ.: (ಅ) ಬ್ಯಾಂಕಿನ ಕಾರ್ಯಕ್ಷೇತ್ರವು ಜಿಲ್ಲೆಗಿಂತ ಕಡಿಮೆ ಇದ್ದಲ್ಲಿ ಅಂಥ ಸ್ಥಳಗಳಲ್ಲಿ ಒಂದು ಕನ್ನಡ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ; ಅಥವಾ (ಆ) ಬ್ಯಾಂಕಿನ ಕಾರ್ಯಕ್ಷೇತ್ರವು ಜಿಲ್ಲೆಗೆ ಮತ್ತು ಜಿಲ್ಲೆಗಿಂತ ಮೀರಿ ಇಡೀ ರಾಜ್ಯಕ್ಕೆ ವಿಸ್ತರಿಸಿದಲ್ಲಿ, ಅಂಥ ಸ್ಥಳಗಳಲ್ಲಿ ಒಂದು ಕನ್ನಡ ಮತ್ತು ಒಂದು ಆಂಗ್ಲ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ.

39. ಸಾಮಾನ್ಯ ನಿಕಾಯದ ಅಧಿಕಾರಗಳು ಮತ್ತು ಕರ್ತವ್ಯಗಳು :
39.1 ಸಾಮಾನ್ಯ ನಿಕಾಯದ ಅಧಿಕಾರಗಳು ಮತ್ತು ಕರ್ತವ್ಯಗಳು ಹೀಗಿರತಕ್ಕದ್ದು:

(ಅ) ಮಂಡಳಿಯಿಂದ ರೂಪಿಸಿದ ಬ್ಯಾಂಕಿನ ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು.

(ಆ) ಬ್ಯಾಂಕಿನ ವ್ಯವಹಾರ ಚಟುವಟಿಕೆಗಳಲ್ಲಿ ಕೊರತೆಯೇನಾದರೂ ಇದ್ದಲ್ಲಿ ಆ ಬಗ್ಗೆ ಪರಿಶೀಲಿಸುವುದು ಮತ್ತು ಅಂತಹ ಕೊರತೆಗಳನ್ನು ನೀಗಿಸಿಕೊಳ್ಳಲು ಕಾರ್ಯಕ್ರಮ ಹಮ್ಮಿಕೊಳ್ಳುವುದು.

(ಇ) ಆಡಿಟ್ ಆದ ಅಥವಾ ತಾತ್ಕಾಲಿಕ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ, ಲಾಭ ನಷ್ಟದ ತಃಖ್ತೆ ಮತ್ತು ಹಾಲಿ ವರ್ಷದ ಆಯವ್ಯಯದ ಮುಂಗಡ ಪತ್ರದ ಜೊತೆಗೆ ಬ್ಯಾಂಕಿನ ವ್ಯವಹಾರದ ಚಟುವಟಿಕೆಗಳ ವರದಿಗೆ ಅನುಮೋದನೆ ನೀಡುವುದು.

(ಈ) ಕಾಯ್ದೆ ಹಾಗೂ ನಿಯಮಗಳ ಅವಕಾಶಗಳಿಗೆ ಒಳಪಟ್ಟು ಆಡಿಟ್ ಆಗಿ ದೃಢೀಕರಿಸಿದ ಲಾಭವನ್ನು ವಿಂಗಡಿಸಿ ಲಾಭಾಂಶ (ಡಿವಿಡೆಂಡ್) ಹಂಚಿಕೆಗೆ ಮಂಜೂರಾತಿ ನೀಡುವುದು.

(ಉ) ಶಾಸನಬದ್ಧ ಲೆಕ್ಕ ತಪಾಸಿಗರಿಂದ ಬಂದಿರುವ ಇತ್ತೀಚಿನ ಆಡಿಟ್ ವರದಿ, ನಿರ್ದೇಶಕ ಮಂಡಳಿಯವರು ಆಡಿಟ್‌ರವರ ಅಭಿಪ್ರಾಯ ಹಾಗೂ ಸೂಚನೆಗಳಿಗೆ ನೀಡಿದ ಸಮಜಾಯಿಷಿ, ಅಥವಾ ನಿಬಂಧಕರಿಂದ ಬಂದ ಇತರ ಯಾವುದೇ ವಿಷಯವನ್ನು ಪರಿಶೀಲಿಸುವುದು.

(ಊ) ಸದಸ್ಯರು ಮಂಡಳಿಯ ಮೇಲೆ ದೂರಿದಲ್ಲಿ ಅಂತಹ ಅಪಾದನೆಗಳನ್ನು ಪರಿಶೀಲಿಸುವುದು.

(ಋ) ಉಪವಿಧಿಗಳನ್ನು ರೂಪಿಸುವುದು, ಮಾರ್ಪಡಿಸುವುದು ಮತ್ತು ತಿದ್ದುಪಡಿಗಳನ್ನು ಅಂಗೀಕರಿಸುವುದು.

(ೠ) ಮಂಡಳಿಯವರು ಬ್ಯಾಂಕಿಗಾಗಿ ಪಡೆಯಬಹುದಾದ ಸಾಲದ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು.

(ಎ) ನಿಬಂಧಕರ ಅನುಮತಿಗೊಳಪಟ್ಟು ಯೋಗ್ಯ ಪ್ರಕರಣಗಳಲ್ಲಿ ಮುಳುಗು ಮತ್ತು ಹೋಕುಬಾಕಿ (ಬ್ಯಾಡ್ ಡೆಟ್ಸ್) ಸಾಲವನ್ನು ವಜಾ ಮಾಡಲು ನಿರ್ಧರಿಸುವುದು.

(ಏ) ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳನ್ನು ರಚಿಸುವುದು

(ಐ) ನಿರ್ದೇಶಕರುಗಳ ಅಥವಾ ಮುಖ್ಯ ಕಾರ್ಯನಿರ್ವಾಹಕರ ಸಂಬಂಧಿಗಳನ್ನೇನಾದರೂ ನೇಮಕ ಮಾಡಿಕೊಂಡಿದ್ದಲ್ಲಿ ಅಂತಹ ನೌಕರರ ಪಟ್ಟಿಯನ್ನು ಅವಲೋಕಿಸುವುದು.

(ಒ) ಬ್ಯಾಂಕಿನ ನಿರ್ದೇಶಕರುಗಳಿಗೆ, ಪದಾಧಿಕಾರಿಗಳಿಗೆ ಮತ್ತು ನೌಕರರುಗಳಿಗೆ ನೀತಿ ಸಂಹಿತೆಗಳನ್ನು ರೂಪಿಸುವುದು.

(ಓ) ಬ್ಯಾಂಕಿಗೆ ಸದಸ್ಯರುಗಳನ್ನು ಸೇರಿಸಿಕೊಂಡ ಹಾಗೂ ತೆಗೆದುಹಾಕಿದ ಬಗೆಗಿನ ಪಟ್ಟಿಯನ್ನು ಪರಿಶೀಲಿಸುವುದು.

(ಔ) ಮುನ್ಸೂಚನೆ ಮೇರೆಗೆ ತರಬಹುದಾದ ಇತರೇ ವಿಷಯಗಳು.

(ಅಂ)ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಆತನಿಗೆ ಕೊಡಬಹುದಾದ ಸಂಭಾವನೆಯ ನಿರ್ಧರಣೆ;

(ಅಃ) ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ವಿಮರ್ಶೆ;

(ಕ) ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ನೀಡಲಾದ ಸಾಲಗಳ ಮತ್ತು ಮುಂಗಡಗಳ, ಸುಸ್ತಿ ಬಾಕಿ ಯಾವ್ಯದಾದರೂ ಇದ್ದರೆ ಅವುಗಳ ಮತ್ತು ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ;

(ಖ) ವಿಚಾರಣಾ ಮತ್ತು ಪರಿವೀಕ್ಷಣಾ ವರದಿಗಳು, ಯಾವುದಾದರೂ ಇದ್ದರೆ ಅವುಗಳ ಮತ್ತು ಸದರಿ ವರದಿಗಳಲ್ಲಿ ತೋರಿಸಲಾದ ದೋಷಗಳನ್ನು ಸರಿಪಡಿಸುವ ಮತ್ತು ಅಕ್ರಮಗಳನ್ನು ನೇರ್ಪಡಿಸುವ ಸಂಬಂಧದಲ್ಲಿ ಕೈಗೊಂಡ ಕ್ರಮದ ಬಗ್ಗೆ ಮಂಡಳಿಯು ನೀಡಿರುವ ಅನುಸರಣಾ ವರದಿಯ ಪರಿಶೀಲನೆ;

(ಗ) ಪದಾಧಿಕಾರಿಗಳೂ ಸೇರಿದಂತೆ ನಿರ್ದೇಶಕರು, ಅವರ ಆ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಅಥವಾ ಸಂಬಂಧಿತ ಸಭೆಗಳಿಗೆ ಹಾಜರಾದುದಕ್ಕೆ ಸಂಬಂಧಪಟ್ಟಂತೆ ಅವರಿಗೆ ಸಂದಾಯ ಮಾಡಿದ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯ ಮತ್ತು ಇತರ ಭತ್ಯೆಗಳ ವಿಮರ್ಶೆ;

(ಘ) ಜಮೀನು ಅಥವಾ ಕಟ್ಟಡ ಖರೀದಿ ಅಥವಾ ಕಟ್ಟಡ ನಿರ್ಮಾಣ ಒಳಗೊಂಡಂತೆ ಸ್ಥಿರಾಸ್ತಿಯ ಖರೀದಿ ಮತ್ತು ಮಾರಾಟದ ಬಗ್ಗೆ ಅನುಮೋದನೆ;

(ಙ) ಬ್ಯಾಂಕಿನ ಸಿಬ್ಬಂದಿ ಬಲ ಮತ್ತು ನೌಕರರಿಗೆ ಕೊಡಲಾಗುವ ವೇತನ ಶ್ರೇಣಿ, ತುಟ್ಟಿ ಭತ್ಯೆ ಮತ್ತು ಇತರ ಭತ್ಯೆಗಳ ಪಾವತಿಯ ಪರಿಗಣನೆ;

(ಚ) ಮಂಡಳಿಯು ಸದಸ್ಯತ್ವ ನಿರಾಕರಿಸಿದ ವ್ಯಕ್ತಿಯ ಅಪೀಲನ್ನು ಯುಕ್ತ ಅವಕಾಶ ನೀಡಿದ ತರುವಾಯ ನಿರ್ಧರಿಸುವುದು;

(ಛ) ಬ್ಯಾಂಕು ತನ್ನ ನಿಧಿಗಳನ್ನು ಕಾಯ್ದೆಯ ಕಲಂ 58ರ ಪ್ರಕಾರ ತೊಡಗಿಸಲು ಅನುಮತಿ ಕೊಡುವುದು;

(ಜ) ಬ್ಯಾಂಕಿನ ಸದಸ್ಯತ್ವವು ಅಥವಾ ಬ್ಯಾಂಕಿನ ಕಾರ್ಯಕ್ಷೇತ್ರವು ನಿಗದಿತ ಮಿತಿಗಿಂತ ಹೆಚ್ಚಿದ್ದಾಗ, ಬ್ಯಾಂಕಿನ ಸುಗಮ ಕಾರ್ಯನಿರ್ವಹಣೆಯ ಹಿತದೃಷ್ಟಿಯಿಂದ ಕಾಯ್ದೆ ಮತ್ತು ನಿಯಮಗಳ ಉಪಬಂಧಗಳ ಪ್ರಕಾರ ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸುವುದು;

39.2 ಮುಖ್ಯಕಾರ್ಯನಿರ್ವಾಹಕನು ಸಭೆಯ ನಡವಳಿಗಳನ್ನು ಚರ್ಚೆಗಳನುಸಾರ ನೈಜವಾಗಿ ಮತ್ತು ನಿಖರವಾಗಿ ಅದೇ ಉದ್ದೇಶಕ್ಕಾಗಿಡಲ್ಪಟ್ಟ ಪುಸ್ತಕದಲ್ಲಿ ದಾಖಲಿಸತಕ್ಕದ್ದು. ಸಭೆಯ ನಡವಳಿಗಳು ಸಭೆಯಲ್ಲಿನ ಚರ್ಚೆಗಳ ನಿಖರವಾದ ಮತ್ತು ಯುಕ್ತವಾದ ಸಂಗ್ರಹವನ್ನು ಒಳಗೊಂಡಿರತಕ್ಕದ್ದು. ಹಾಗೆ ದಾಖಲಿಸಿದ ನಡವಳಿ ಪುಸ್ತಕದಲ್ಲಿ ಮುಖ್ಯಕಾರ್ಯನಿರ್ವಾಹಕನು ಮತ್ತು ಸಭಾಪತಿಯು ಸಹಿ ಮಾಡತಕ್ಕದ್ದು. ಈ ರೀತಿ ನಡವಳಿಗಳನ್ನು ದಾಖಲಿಸಿ ಸಹಿ ಮಾಡಿದ ನಡವಳಿಗಳು ಅವುಗಳ ನಿಖರತೆಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು. ಸಾಮಾನ್ಯ ಸಭೆಯು ಕಲಾಪವನ್ನು ನಡೆಸುವಾಗ ಯಾರೇ ಸದಸ್ಯನು ಯಾವುದೇ ನಿರ್ಣಯದ ಬಗ್ಗೆ ತನ್ನ ಅಸಮ್ಮತಿಯನ್ನು ಸೂಚಿಸಿದರೆ ಅದನ್ನು ನೈಜವಾಗಿ ಮತ್ತು ಸ್ಪಷ್ಟವಾಗಿ ನಡವಳಿಗಳಲ್ಲಿ ದಾಖಲಿಸುವುದು ಮುಖ್ಯಕಾರ್ಯನಿರ್ವಾಹಕನ ಕರ್ತವ್ಯವಾಗಿರುತ್ತದೆ. ಹಾಗೆ ದಾಖಲಿಸಿದ ಯಾವುದೂ ಅಂಥ ನಡವಳಿಗಳಲ್ಲಿ ಈ ಕೆಳಗಿನದನ್ನು ಸೇರಿಸುವ ಅಗತ್ಯವಿದೆಯೆಂದು ಭಾವಿಸತಕ್ಕದ್ದಲ್ಲ;

(ಅ)ಅದು ಯಾವುದೇ ವ್ಯಕ್ತಿಗೆ ಅಪಖ್ಯಾತಿಕರವಾದದ್ದು ಅಥವಾ ಯುಕ್ತವಾಗಿ ಅಪಖ್ಯಾತಿಕರವೆಂದು ಪರಿಗಣಿಸುವಂಥಾದ್ದಾಗಿದ್ದುದು; ಅಥವಾ

(ಆ)ಅದು ಸಭೆಯ ನಡವಳಿಗಳಿಗೆ ಅಸಂಗತವಾಗಿದ್ದುದು ಅಥವಾ ಮಹತ್ವವಿಲ್ಲದ್ದುದು; ಅಥವಾ

(ಇ)ಅದು ಬ್ಯಾಂಕಿನ ಹಿತಕ್ಕೆ ಧಕ್ಕೆ ಉಂಟುಮಾಡುವಂಥಹದ್ದು;

ಮುಖ್ಯಕಾರ್ಯನಿರ್ವಾಹಕನು ಸಭೆ ನಡೆದ ಮೂವತ್ತು ದಿನದೊಳಗಾಗಿ ನಡವಳಿಗಳ ಪ್ರಮಾಣೀಕೃತ ಪ್ರತಿಗಳನ್ನು ಎಲ್ಲಾ ಸದಸ್ಯರಿಗೆ, ರಿಜಿಸ್ಟ್ರಾರನಿಗೆ ಮತ್ತು ಹಣಕಾಸು ಪೂರೈಸುವ ಸಂಸ್ಥೆಗೆ ಅಥವಾ ಕ್ರೆಡಿಟ್ ಏಜೆನ್ಸಿಗೆ ರವಾನಿಸಿ ಅದರ ಒಂದು ಪ್ರತಿಯನ್ನು ಬ್ಯಾಂಕಿನ ಸೂಚನಾಫಲಕದಲ್ಲಿ ಅಂಟಿಸತಕ್ಕದ್ದು;

39.3 ಪ್ರಕಟಿತವಾದ ಆಸ್ತಿ ಹೊಣೆಪಟ್ಟಿ ಅಥವಾ ಅದಕ್ಕೆ ಸಂಬಂಧಪಟ್ಟ ತಃಖ್ತೆಗಳ ಬಗ್ಗೆ ಅಥವಾ ಇತರೇ ಯಾವುದೇ ವಿಷಯದ ಬಗ್ಗೆ ಸುಸ್ತಿದಾರರಲ್ಲದ ಸದಸ್ಯರು ಸ್ವಷ್ಟೀಕರಣ ಬಯಸಿದಲ್ಲಿ, ಸಭೆಯು ನಡೆಯುವುದಕ್ಕೆ ಕನಿಷ್ಠ ಮೂರು ದಿವಸ ಮುಂಚಿತವಾಗಿ ಬ್ಯಾಂಕಿಗೆ ಲಿಖಿತವಾಗಿ ತಿಳಿಸತಕ್ಕದ್ದು.

**40. ಸಾಮಾನ್ಯ ಸಭೆಯ ಅಧ್ಯಕ್ಷತೆ:**

ಪ್ರತಿ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರೇ ವಹಿಸತಕ್ಕದ್ದು.ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ವಹಿಸತಕ್ಕದ್ದು.ಇವರಿಬ್ಬರ ಗೈರುಹಾಜರಿಯಲ್ಲಿ ಸರ್ವಸದಸ್ಯರ ಸಭೆಯು ಆಯ್ಕೆ ಮಾಡಿದ ನಿರ್ದೇಶಕ ಮಂಡಳಿಯ ಸದಸ್ಯರೊಬ್ಬರು ಸಭಾಧ್ಯಕ್ಷತೆಯನ್ನು ವಹಿಸತಕ್ಕದ್ದು.ಇವರೆಲ್ಲರ ಗೈರುಹಾಜರಿಯಲ್ಲಿ ಸರ್ವಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ ಆರಿಸಿಕೊಳ್ಳತಕ್ಕದ್ದು.

**41. ಸಾಮಾನ್ಯ ಸಭೆಯ ಅವಶ್ಯಕ ಸಂಖ್ಯೆ (ಕೋರಂ) :**

ಮತ ನೀಡಲು ಅರ್ಹತೆ ಇರುವ ಒಟ್ಟು ಸದಸ್ಯರ ಪೈಕಿ **ಒಂದು ಸಾವಿರ ಮಂದಿ ಅಥವಾ ಕನಿಷ್ಠ ಶೇಕಡ ಹತ್ತರಷ್ಟು ಯಾವುದು ಕಡಿಮೆಯೋ ಅದು** ಸದಸ್ಯರ ಹಾಜರಾತಿಯು ಸಾಮಾನ್ಯ ಸಭೆಯ ಸಭಾವಶ್ಯಕ ಸಂಖ್ಯೆ(ಕೋರಂ) ಆಗಿರತಕ್ಕದ್ದು. ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸಿದಲ್ಲಿ, ಮತ ನೀಡಲು ಅರ್ಹತೆ ಇರುವ ಒಟ್ಟು ಪ್ರತಿನಿಧಿಗಳ ಪೈಕಿ ಕನಿಷ್ಠ ಶೇಕಡ ಅರವತ್ತರಷ್ಟು ಪ್ರತಿನಿಧಿಗಳ ಹಾಜರಾತಿಯು ಪ್ರಾತಿನಿಧಿಕ ಸಾಮಾನ್ಯ ಸಭೆಯ ಸಭಾವಶ್ಯಕ ಸಂಖ್ಯೆ (ಕೋರಂ) ಆಗಿರತಕ್ಕದ್ದು.

**42. ಸಾಮಾನ್ಯ ಸಭೆಯಮುಂದೂಡಿಕೆ:**

42.1 ಸಾಮಾನ್ಯ ಸಭೆಯನ್ನು ಪ್ರಾರಂಭಿಸುವ ಸಮಯದಲ್ಲಿ ಸಭಾವಶ್ಯಕ ಸಂಖ್ಯೆ (ಕೋರಂ) ಇಲ್ಲದಿದ್ದರೆ ಅಂಥ ಕಲಾಪವನ್ನುನಡೆಸತಕ್ಕದ್ದಲ್ಲ. ಸಭೆಗೆ ಗೊತ್ತುಪಡಿಸಿದ ಸಮಯದಿಂದ ಒಂದು ಗಂಟೆಯೊಳಗೆ ಕೋರಂ ಇಲ್ಲದ ಪಕ್ಷದಲ್ಲಿ ಅಂಥ ಸಭೆಯನ್ನು ಮುಂದೂಡತಕ್ಕದ್ದು. ಪರಂತು, ಅಂಥ ಸಭೆಯನ್ನು ಸದಸ್ಯರ ಕೋರಿಕೆಯ ಮೇರೆಗೆ ಕರೆದಿದ್ದರೆ, ಅಂಥ ಸಭೆಯನ್ನು ವಿಸರ್ಜಿಸತಕ್ಕದ್ದು. ಮೇಲಿನಂತೆ ಸಭೆಯು ಮುಂದೂಡಲ್ಪಟ್ಟಾಗ, ಮುಂದುವರೆದ ಸಭೆಯನ್ನು ಆ ದಿನದಂದು ಅಥವಾ ಮುಂದೂಡಿದ ದಿನಾಂಕದಿಂದ 7 ದಿನಗಳ ಒಳಗೆ ಸಭಾಪತಿಯು ಗೊತ್ತುಪಡಿಸಿದ ಅಂಥ ಸ್ಥಳದಲ್ಲಿ ಮತ್ತು ಅಂಥ ದಿನಾಂಕ ಮತ್ತು ವೇಳೆಯಲ್ಲಿ ನಡೆಸತಕ್ಕದ್ದು.

42.2 ಹೀಗೆ ಮುಂದೂಡಿದ ಸಭೆಯಲ್ಲಿ ಸರ್ವಸದಸ್ಯರ ಸಭೆಗೆ ಸೂಚಿಸಿದ ವಿಷಯಗಳನ್ನಲ್ಲದೆ ಬೇರೆ ವಿಷಯಗಳನ್ನು ಚರ್ಚಿಸತಕ್ಕದ್ದಲ್ಲ.

42.3 ಸಭೆಯ ಕಲಾಪವನ್ನು ನಡೆಸುತ್ತಿರುವಾಗ ಯಾವುದೇ ಕಾಲಕ್ಕೆ ಸಭೆಯಲ್ಲಿ ಹಾಜರಿರುವ ಸದಸ್ಯರ ಸಂಖ್ಯೆಯು ಕೋರಂಗಿಂತ ಕಡಿಮೆ ಇದ್ದ ಪಕ್ಷದಲ್ಲಿ, ಸಭಾಪತಿಯು ತಾನಾಗಿಯೇ ಅಥವಾ ಅವನ ಗಮನಕ್ಕೆ ತಂದಾಗ ಸಭೆಯನ್ನು ಮುಂದೂಡತಕ್ಕದ್ದು. ಮುಂದುವರೆದ ಸಭೆಗೂ ಸಹ ಕಲಾಪವನ್ನು ನಡೆಸಲು ಕೋರಂ ಅಗತ್ಯವಿರತಕ್ಕದ್ದು.

**43. ವಿಶೇಷ ಸಾಮಾನ್ಯ ಸಭೆ :**

43.1 ವಾರ್ಷಿಕ ಸಾಮಾನ್ಯ ಸಭೆಯನ್ನು ಬಿಟ್ಟು ಉಳಿದ ಎಲ್ಲಾ ಸಾಮಾನ್ಯ ಸಭೆಗಳನ್ನೂ ವಿಶೇಷ ಸಾಮಾನ್ಯ ಸಭೆಗಳೆಂದು ಕರೆಯತಕ್ಕದ್ದು, ಅಂತಹ ವಿಶೇಷ ಸಾಮಾನ್ಯ ಸಭೆಯನ್ನು ಮಂಡಲಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಯಾವಾಗ ಬೇಕಾದರೂ ಕರೆಯಬಹುದು ಅಂಥ ವಿಶೇಷ ಸಾಮಾನ್ಯ ಸಭೆಯು ಬ್ಯಾಂಕಿನ ಉಪವಿಧಿಗಳ ಪ್ರಕಾರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಡೆಸಬಹುದಾದ ಎಲ್ಲಾ ವ್ಯವಹಾರಗಳನ್ನು ನಡೆಸಲು ಅಧಿಕಾರ ಹೊಂದಿರತಕ್ಕದ್ದು.

ಬ್ಯಾಂಕಿನ ಒಟ್ಟು ಸದಸ್ಯರ ಪೈಕಿ 1/5 ರಷ್ಟು ಮತನೀಡುವ ಹಕ್ಕುಳ್ಳ ಸದಸ್ಯರು ಅಥವಾ ರಿಜಿಸ್ಟ್ರಾರನು ಲಿಖಿತವಾಗಿ ಮುಖ್ಯಕಾರ್ಯನಿರ್ವಾಹಕನಿಗೆ ಕೋರಿಕೆಯನ್ನು ಸಲ್ಲಿಸಿದಲ್ಲಿ, ಅಂತಹ ಕೋರಿಕೆಯು ಬಂದ ತಾರೀಖಿನಿಂದ ಒಂದು ತಿಂಗಳೊಳಗಾಗಿ ಮಂಡಲಿಯು ವಿಶೇಷ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.ಅಂಥ ಕೋರಿಕೆಯಲ್ಲಿ ನಿಗದಿಪಡಿಸಿದ ವಿಷಯವನ್ನಲ್ಲದೆ ಬೇರೆ ಯಾವ ವಿಷಯವನ್ನೂ ಆ ಸಭೆಯಲ್ಲಿ ಚರ್ಚಿಸತಕ್ಕದ್ದಲ್ಲ. ಸದಸ್ಯರ ಕೋರಿಕೆ ಮೇರೆಗೆ ಏರ್ಪಡಿಸಿದ ಸಭೆಯಾಗಿದ್ದಲ್ಲಿ ನಿಗದಿತ ವೇಳೆಯ ಒಂದು ಘಂಟೆಯೊಳಗಾಗಿ ಸಭಾವಶ್ಯಕ ಸಂಖ್ಯೆ (ಕೋರಂ) ಇಲ್ಲದಿದ್ದರೆ, ಆ ಸಭೆಯನ್ನು ವಿಸರ್ಜಿಸತಕ್ಕದ್ದು.

43.2 ನಿಬಂಧಕರು ಮುಖ್ಯ ಕಾರ್ಯನಿರ್ವಾಹಕರು ಕಳುಹಿಸಿದ ಕೋರಿಕೆಯು ಬಂದ ಒಂದು ತಿಂಗಳೊಳಗಾಗಿ ಅವರು ತಿಳಿಸಿದವಿಷಯದ ಬಗ್ಗೆ ಚರ್ಚಿಸಿ ತೀರ್ಮಾನಿಸಲು ಮಂಡಳಿಯವರು ವಿಶೇಷ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.

43.3 ವಿಶೇಷ ಸಾಮಾನ್ಯ ಸಭೆಯು ಬ್ಯಾಂಕಿನ ಉಪವಿಧಿಗಳ ಪ್ರಕಾರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಡೆಸಬಹುದಾದ ಎಲ್ಲಾ ವ್ಯವಹಾರಗಳನ್ನು ನಡೆಸಲು ಅಧಿಕಾರ ಹೊಂದಿರತಕ್ಕದ್ದು.

**44. ಮತ ನೀಡಿಕೆ:**

44.1 ಎಲ್ಲ ವಿಷಯಗಳನ್ನು ಸುಸ್ತಿದಾರರಲ್ಲದ ಸದಸ್ಯರ ಬಹುಮತದ ಮೂಲಕ ನಿರ್ಧರಿಸತಕ್ಕದ್ದು.

44.2 ತಾನು ಹೊಂದಿರುವ ಷೇರುಗಳು ಎಷ್ಟೇ ಇದ್ದರೂ, ಪ್ರತಿಯೊಬ್ಬ ಸದಸ್ಯನಿಗೂ ಒಂದು ಮತ ನೀಡುವ ಹಕ್ಕು ಮಾತ್ರ ಇದೆ.ಚುನಾವಣೆ ಹೊರತು ಇತರ ವಿಷಯಗಳಲ್ಲಿ ಸಮಮತವು ಇದ್ದಲ್ಲಿ ಸಭಾಧ್ಯಕ್ಷರಿಗೆ ನಿರ್ಣಾಯಕ ಮತ (ಕಾಸ್ಟಿಂಗ್ ಓಟ್) ನೀಡಲು ಹಕ್ಕಿದೆ.

44.3 ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ / ಚುನಾವಣೆಯ ದಿನಾಂಕದಿಂದ ಕನಿಷ್ಠ 45 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ / ಚುನಾವಣಾ ದಿನಾಂಕದಿಂದ ಕನಿಷ್ಠ 15 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ;

44.4 ನೋಂದಾಯಿತ ಸಂಘ ಅಥವಾ ಪಾಲುದಾರಿಕೆ ಸಂಸ್ಥೆ ಅಥವಾ ಕಂಪನಿ ಅಥವಾ ಬಾಡಿ ಕಾರ್ಪೋರೇಟ್ ಅಥವಾ ಇತರೆ ಯಾವುದೇ ಸಹಕಾರೇತರ ಸಂಸ್ಥೆಯು ಬ್ಯಾಂಕಿನ ಸದಸ್ಯತ್ವ ಪಡೆದಿದ್ದು ಸುಸ್ತಿದಾರರಾಗಿಲ್ಲದಿದ್ದಲ್ಲಿ, ಅಂತಹ ಸಂಸ್ಥೆಯಿಂದ ನಾಮ ನಿರ್ದೇಶನಗೊಂಡ ವ್ಯಕ್ತಿಯು ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ ಭಾಗವಹಿಸಬಹುದು ಮತ್ತು ಚುನಾವಣೆಯಲ್ಲಿ ಮತ ಹಾಕಬಹುದು.

**44.5 ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ.**

(ಅ) ಸಹಸದಸ್ಯರು ಮತ್ತು ನಾಮಮಾತ್ರ ಸದಸ್ಯರು

(ಆ) ಬ್ಯಾಂಕಿನಿಂದ ಸಾಲಪಡೆದು ಸುಸ್ತಿಬಾಕಿದಾರರಾದ ಸದಸ್ಯರು

(ಇ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 16(1) (ಡಿ), (ಇ), (ಎಫ್) ಮತ್ತು (ಜಿ) ಯ ಪ್ರಕಾರ ಸದಸ್ಯರಾಗಿ ಪ್ರವೇಶ ಪಡೆದ ಸುಸ್ತಿದಾರರು.

(ಈ) ಅಂಥ ಸಭೆಯ / ಚುನಾವಣೆಯ ದಿನಾಂಕಕ್ಕೆ ಮುಂಚಿತವಾದ ಹನ್ನೆರಡು ತಿಂಗಳೊಳಗೆ ಬ್ಯಾಂಕಿನ ಸದಸ್ಯನಾದ ವ್ಯಕ್ತಿ;

(ಉ) ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಒಬ್ಬ ಸದಸ್ಯ;

(ಊ) ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯ.

**45. ಸಾಮಾನ್ಯ ನಿಕಾಯದ ಹಾಗೂ ಮಂಡಳಿಯ ಸಭೆ ನಡೆಯುವ ಸ್ಥಳ :**

ಸಾಮಾನ್ಯ ನಿಕಾಯದ ಮತ್ತು ಬ್ಯಾಂಕಿನ ಮಂಡಳಿಯ ಸಭೆಗಳನ್ನು ಬ್ಯಾಂಕಿನ ನೋಂದಾಯಿತ ಕಛೇರಿಯಲ್ಲಿ ನಡೆಸತಕ್ಕದ್ದು. ಅಲ್ಲಿ ಸಾಕಷ್ಟು ಸ್ಥಳಾವಕಾಶ ಇಲ್ಲದೆ ಇದ್ದ ಪಕ್ಷದಲ್ಲಿ ಕಾಯ್ದೆ ಕಲಂ 113(2) ರ ಮೇರೆಗೆ ಬ್ಯಾಂಕಿನ ನೋಂದಾಯಿತ ಕಛೇರಿಯು ಇರುವ ನಗರ ಅಥವಾ ಪಟ್ಟಣದ ಬೇರಾವುದೇ ಸ್ಥಳದಲ್ಲಿ ನಡೆಸಬಹುದು.

## ಅಧ್ಯಾಯ – 10

## ನಿರ್ದೇಶಕ ಮಂಡಳಿ

**46. ನಿರ್ದೇಶಕ ಮಂಡಳಿಯ ರಚನೆ:**

46.1 ಬ್ಯಾಂಕಿನ ವ್ಯವಸ್ಥಾಪನೆಯ ಅಧಿಕಾರವು ಕಾಯ್ದೆ, ನಿಯಮ ಮತ್ತು ಉಪವಿಧಿಗಳಿಗೆ ಅನುಗುಣವಾಗಿ ರಚಿಸಲಾದ ಹತ್ತೊಂಬತ್ತು (19) ಜನ ನಿರ್ದೇಶಕರನ್ನೊಳಗೊಂಡ ಮಂಡಳಿಗೆ ಇರತಕ್ಕದ್ದು. ಇವುಗಳಲ್ಲಿ ಒಂದು ಸ್ಥಾನವನ್ನು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗಗಳಿಗೆ ಸೇರಿದ ಸದಸ್ಯರಿಗೆ, ಎರಡು ಸ್ಥಾನಗಳನ್ನು ಮಹಿಳಾ ವರ್ಗದ ಸದಸ್ಯರಿಗೆ ಮತ್ತು ಎರಡು ಸ್ಥಾನವನ್ನು ಹಿಂದುಳಿದ ವರ್ಗಕ್ಕೆ ಅಂದರೆ ಸಹಕಾರಿಗಳ ಮಂಡಳಿಯಲ್ಲಿ, ಮೀಸಲಾತಿ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ "ಎ" ಮತ್ತು "ಬಿ" ಪ್ರವರ್ಗಗಳು ಎಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಮೀಸಲಿರಿಸತಕ್ಕದ್ದು. ಮಂಡಳಿಯು ಬ್ಯಾಂಕಿಂಗ್, ವ್ಯವಸ್ಥಾಪನೆ ಹಾಗೂ ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಬ್ಯಾಂಕು ಕೈಗೊಂಡ ಉದ್ದೇಶಗಳಿಗೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಇತರ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ಇಬ್ಬರು ವ್ಯಕ್ತಿಗಳನ್ನು ಮಂಡಳಿಯ ವೃತ್ತಿಪರ ನಿರ್ದೇಶಕರನ್ನಾಗಿ ಸಹಮತದಿಂದ (ಕೋ–ಆಪ್ಷನ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಳ್ಳಲಾದ ನಿರ್ದೇಶಕರು ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕು ಹೊಂದಿರತಕ್ಕದ್ದಲ್ಲ. ಮತ್ತು ಮಂಡಳಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ. ಹಾಗೆ ಸಹಮತದಿಂದ ಸೇರಿಸಿಕೊಳ್ಳಲಾದ ನಿರ್ದೇಶಕರನ್ನು ಮಂಡಳಿಯ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಗಣಿಸುವ ಉದ್ದೇಶಕ್ಕಾಗಿ ಹೊರತುಪಡಿಸತಕ್ಕದ್ದು. ಹಾಗೂ ಮಂಡಳಿಯ ಸಭೆಗಳನ್ನು ನಡೆಸಲು ಕೋರಂನ ಭಾಗವಾಗಿರತಕ್ಕದ್ದಲ್ಲ ಎಂದು ಪರಿಗಣಿಸತಕ್ಕದ್ದು;

46.1 (ಅ) 1. ಆಡಳಿತ ಮಂಡಲಿಯ ಮೊದಲನೆ ಅವಧಿಯಲ್ಲಿ ಹಿಂದುಳಿದ ಸ್ಥಾನಗಳ 2 ಸ್ಥಾನಗಳನ್ನು ಪ್ರವರ್ಗ 'ಎ' ಗೆ ಮೀಸಲಿರಿಸತಕ್ಕದ್ದು.
2. ಆಡಳಿತ ಮಂಡಲಿಯ ಎರಡನೇ ಮತ್ತು ಮೂರನೇ ಅವಧಿಯಲ್ಲಿ ಹಿಂದುಳಿದ ವರ್ಗಗಳ 2 ಸ್ಥಾನಕ್ಕೆ ಪ್ರವರ್ಗ 'ಎ' ಮತ್ತು 'ಬಿ' ಯಿಂದ ಒಬ್ಬೊಬ್ಬರಿಗೆ ಮತ್ತು
3. ಆಡಳಿತ ಮಂಡಲಿಯ ನಾಲ್ಕನೇ ಅವಧಿಯಲ್ಲಿ ಹಿಂದುಳಿದ ಸ್ಥಾನಗಳ 2 ಸ್ಥಾನಗಳನ್ನೂ ಮತ್ತೆ ಪ್ರವರ್ಗ 'ಎ' ಗೆ ಮೀಸಲಿರಿಸತಕ್ಕದ್ದು ಮತ್ತು ಇದೇ ರೀತಿ ಪುನರಾವರ್ತನೆಯಾಗುವಂತೆ ನೋಡಿಕೊಳ್ಳಬೇಕು.
ಮತ್ತು ಅವಶ್ಯಕತೆಯಿದ್ದಲ್ಲಿ ಸದರಿ ವಿಷಯದ ಬಗ್ಗೆ ಸಹಕಾರ ಸಂಘಗಳ ನಿಬಂಧಕರಿಂದ ಸ್ಪಷ್ಟನೆ ತೆಗೆದುಕೊಳ್ಳಬಹುದು.

46.2 ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನು ಪದನಿಮಿತ್ತ ಆಡಳಿತ ಮಂಡಳಿಯ ನಿರ್ದೇಶಕನಾಗಿರತಕ್ಕದ್ದು.ಆದರೆ, ಆತನು ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**47. ನಿರ್ದೇಶಕ ಮಂಡಳಿಯ ಅಧಿಕಾರದ ಅವಧಿ:**

**ನಿರ್ದೇಶಕ ಮಂಡಲಿಯ ಅಧಿಕಾರದ ಅವಧಿ:–**
ಕಾಯ್ದೆಯ ಕಲಂ 28ಎ(4)ರ ಪ್ರಕಾರ ಮಂಡಳಿಯ ನಿರ್ದೇಶಕರ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳು ಆಗಿರತಕ್ಕದ್ದು. ಹೊಸದಾಗಿ ಚುನಾಯಿತರಾದ ನಿರ್ದೇಶಕರು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡುವುದನ್ನು ಖಾತ್ರಿಗೊಳಿಸುವ ಹಾಗೆ ಮಂಡಳಿಯ ನಿರ್ದೇಶಕರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯು ಮುಕ್ತಾಯವಾಗುವ **ಮುನ್ನ** ನಡೆಸತಕ್ಕದ್ದು.

**47 (ಅ). ಮಂಡಳಿಯ ನಿರ್ದೇಶಕರ ಚುನಾವಣೆ:**

(1) ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನುಳ್ಳ ಬ್ಯಾಂಕಿನ ಸಂಬಂಧದಲ್ಲಿ ಪ್ರತಿನಿಧಿಗಳ ಚುನಾವಣೆಯನ್ನೂ ಒಳಗೊಂಡಂತೆ ಬ್ಯಾಂಕಿನ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಡೆಸುವ, ಅನ್ವಯವಾಗುವಷ್ಟರ ಮಟ್ಟಿಗೆ ಯಾವುದೇ ಪ್ರತಿನಿಧಿಯ / ನಿರ್ದೇಶಕರ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿಸ್ಥಾನಕ್ಕೆ ಚುನಾವಣೆಯನ್ನು ನಡೆಸುವ ಮತ್ತು

ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಹಾಗೂ ತತ್ಸಂಬಂಧದ ಮತದಾರರ ಪಟ್ಟಿ ತಯಾರಿಸುವ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

(2) ಬ್ಯಾಂಕಿನ ಮಂಡಳಿಯು :

(ಅ) ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ ಆರು ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸತಕ್ಕದ್ದು;

(ಆ) ಮರಣ, ರಾಜೀನಾಮೆ, ಅನರ್ಹತೆ ಇತ್ಯಾದಿ ಯಾವುದೇ ಕಾರಣದಿಂದ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಅಥವಾ ಪದಾಧಿಕಾರಿಗಳ ಪದದಲ್ಲಿ ಆಕಸ್ಮಿಕ ಖಾಲಿ ಸ್ಥಾನ ಉಂಟಾದಲ್ಲಿ, ಆ ಬಗ್ಗೆ ಕೂಡಲೇ ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸತಕ್ಕದ್ದು;

(ಇ) ಸಹಕಾರ ಚುನಾವಣಾ ಆಯೋಗವು ನಿಯಮಿಸಬಹುದಾದಂಥ ಕ್ಯಾಲೆಂಡರ್ ಪ್ರಕಾರ ಅದು ಅಗತ್ಯಪಡಿಸಬಹುದಾದಂಥ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಒದಗಿಸತಕ್ಕದ್ದು; ಮತ್ತು

(ಈ) ಸಹಕಾರ ಚುನಾವಣಾ ಆಯೋಗವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅವಶ್ಯವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು;

(3) ಸಹಕಾರ ಚುನಾವಣಾ ಆಯೋಗವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಬ್ಯಾಂಕಿನ ಮಂಡಳಿಯ ಪದಾವಧಿಯ ಮುಕ್ತಾಯದ ಹಿಂದಿನ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಬಹುದು;

(4) ಬ್ಯಾಂಕಿನ ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಹೊಸದಾಗಿ ಚುನಾಯಿತರಾದ ನಿರ್ದೇಶಕರು ಪದಧಾರಣ ಮಾಡುವುದನ್ನು ಖಾತ್ರಿಗೊಳಿಸುವ ಹಾಗೆ ಮಂಡಳಿಯ ನಿರ್ದೇಶಕರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯು ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಡೆಸುವಂತೆ ಬ್ಯಾಂಕಿನ ಆಡಳಿತ ಮಂಡಳಿಯು ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸತಕ್ಕದ್ದು.

(5) ಮತದಾರರ ಪಟ್ಟಿ ತಯಾರಿಸುವಿಕೆಗೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ತಗಲುವ ವೆಚ್ಚವನ್ನು ನಿಯಮಗಳಲ್ಲಿ ನಿಗದಿಪಡಿಸಬಹುದಾದಂತೆ ಬ್ಯಾಂಕು ಭರಿಸತಕ್ಕದ್ದು.

(6) ಬ್ಯಾಂಕಿನ ಯಾರೇ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂತಹ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಆಡಳಿತ ಮಂಡಳಿಯು ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸತಕ್ಕದ್ದು.

**47.(6)** ಬ್ಯಾಂಕಿನ ಯಾರೇ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂತಹ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಆಡಳಿತ ಮಂಡಳಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು, ಸದರಿ ಖಾಲಿ ಸ್ಥಾನವನ್ನು ಸಹಕಾರ ಸಂಘಗಳ ನಿಬಂಧಕರಿಂದ ನಾಮಿನೇಷನ್ ಮೂಲಕ ಭರ್ತಿ ಮಾಡಲಾಗುತ್ತದೆ.

**48. ಪದಾಧಿಕಾರಿಗಳ ಚುನಾವಣೆ:**

48.1 ಬ್ಯಾಂಕಿನ ಪದಾಧಿಕಾರಿಗಳ ಪದಾವಧಿಯು ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಮತ್ತು ಅದು ಮಂಡಳಿಯ ಅವಧಿಯ ಜೊತೆಗೆ ಅಂತ್ಯಗೊಳ್ಳತಕ್ಕದ್ದು. ಸಾಮಾನ್ಯ ಚುನಾವಣೆಯ ತರುವಾಯ, ಮಂಡಳಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ, ಇದ್ದಲ್ಲಿ, ಚುನಾವಣೆಗಳನ್ನು ಚುನಾವಣಾ ಪ್ರಾಧಿಕಾರದಿಂದ ನೇಮಕವಾದ ಚುನಾವಣಾಧಿಕಾರಿಗಳ ನೇತೃತ್ವದಲ್ಲಿ ನಡೆಸಬೇಕು.

48.2 ಸಹಕಾರಿ ಕಾಯ್ದೆಯ ಕಲಂ 29 ಎಫ್ (7) ರ ರೀತ್ಯಾ ಹೊಸ ಮಂಡಳಿಯ ಸಭೆಯು ನಡೆದ ತಾರೀಖಿನಿಂದ ಮೂರು ದಿನಗಳೊಳಗಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕನು ಸಭೆಯ ನೋಟೀಸು ಪ್ರತಿಯನ್ನು ಮತ್ತು ಆ ಸಭೆಯ ನಡವಳಿಕೆಗಳ ಪ್ರತಿಯನ್ನು ನಿಬಂಧಕರಿಗೆ ಕಳುಹಿಸಿಕೊಡತಕ್ಕದ್ದು.

**49. ಅಧ್ಯಕ್ಷರು :**

ಬ್ಯಾಂಕಿನ ಸಾಮಾನ್ಯ ಆಡಳಿತವು ಅಧ್ಯಕ್ಷರ ನಿಯಂತ್ರಣಕ್ಕೊಳಪಟ್ಟಿರತಕ್ಕದ್ದು ಹಾಗೂ ಮಂಡಳಿಯ ಸಭೆಗಳ, ಉಪ-ಸಮಿತಿ ಸಭೆಗಳ ಮತ್ತು ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಅವರೇ ವಹಿಸತಕ್ಕದ್ದು.ಮಂಡಳಿಯ ಸಾಮಾನ್ಯ ನಿರ್ದೇಶನದಂತೆ ಬ್ಯಾಂಕಿನ ಹಿತದೃಷ್ಟಿಯಿಂದ ಅವಶ್ಯಕವಿರುವ ವ್ಯವಹಾರಗಳನ್ನು ನಡೆಸಲು ಅಧ್ಯಕ್ಷರಿಗೆ ಅಧಿಕಾರವಿರತಕ್ಕದ್ದು.

**50. ಉಪಾಧ್ಯಕ್ಷರು :**

ಅಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷರ ಕೆಲಸ ಕಾರ್ಯಗಳನ್ನು ಉಪಾಧ್ಯಕ್ಷರು ನಿರ್ವಹಿಸತಕ್ಕದ್ದು.

**51. ಮಂಡಳಿಯ ಸಭೆಗಳು :**

51.1 ಬ್ಯಾಂಕಿನ ವ್ಯವಹಾರಗಳನ್ನು ನಿರ್ವಹಿಸಲು ಮಂಡಳಿಯು ಕನಿಷ್ಟಪಕ್ಷ ತಿಂಗಳಿಗೊಮ್ಮೆಯಾದರೂ ಸಭೆ ಸೇರಬೇಕು.ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಮುಖ್ಯ ಕಾರ್ಯನಿರ್ವಾಹಕರು ಮಂಡಳಿಯ ಸಭೆಯನ್ನು ಕರೆಯಬೇಕು.ಸಭೆಯ ವಿಷಯಸೂಚಿಯೊಂದಿಗೆ ವಿಷಯಗಳ ಮೇಲಿನ ಟಿಪ್ಪಣಿ ಸಹಿತ ಸೂಚನಾ ಪತ್ರವನ್ನು 7 ದಿನ ಮುಂಚಿತವಾಗಿ ನಿರ್ದೇಶಕರಿಗೆ ಕಳುಹಿಸಿಕೊಡಬೇಕು.ತುರ್ತು ಸಂದರ್ಭದಲ್ಲಿ ಸಭೆಯನ್ನು ಕರೆಯಲು ಸಾಕಷ್ಟು ಕಾಲಾವಕಾಶವಿಲ್ಲದಿದ್ದಾಗ ಅಂತಹ ವಿಷಯಕ್ಕೆ ಸಂಬಂಧಿಸಿದ ಪತ್ರಗಳನ್ನು ಸುತ್ತೋಲೆ ಮೂಲಕ ವಿತರಿಸಿ ಮಂಡಳಿಯ ಎಲ್ಲಾ ಸದಸ್ಯರುಗಳ ಒಪ್ಪಿಗೆ ಪಡೆದು ತೀರ್ಮಾನ ಕೈಗೊಳ್ಳತಕ್ಕದ್ದು. ಅಂತಹ ನಿರ್ಣಯಗಳನ್ನು ಮುಂದಿನ ಮಂಡಳಿಯ ಸಭೆಯಲ್ಲಿ ಇಟ್ಟು, ಅನುಮೋದನೆ ಪಡೆಯತಕ್ಕದ್ದು.ಸುತ್ತೋಲೆ ಮೂಲಕ ತೀರ್ಮಾನ ಕೈಗೊಳ್ಳುವ ಸಂದರ್ಭದಲ್ಲಿ ಭಿನ್ನಾಭಿಪ್ರಾಯವುಂಟಾದರೆ ಆ ವಿಷಯದಲ್ಲಿ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳದೆ ಮೂರು ದಿನಗಳ ಸೂಚನಾ ಪತ್ರವನ್ನು ಕಳುಹಿಸಿ ಮಂಡಳಿಯ ತುರ್ತುಸಭೆಯನ್ನು ಕರೆದು ಸಭೆಯ ನಿರ್ಣಯಕ್ಕೆ ಮಂಡಿಸತಕ್ಕದ್ದು.

51.2 ವಿಷಯಸೂಚಿಯಲ್ಲಿ ನಮೂದಿಸಿರುವ ವಿಷಯಗಳಲ್ಲದೆ ಬೇರಾವ ವಿಷಯವನ್ನು ಸಭೆಯಲ್ಲಿ ಚರ್ಚಿಸಕೂಡದು.ಒಂದು ವೇಳೆ ವಿಷಯಸೂಚಿಯಲ್ಲಿ ತಿಳಿಸಿದ ಯಾವುದೇ ವಿಷಯವನ್ನು ಚರ್ಚಿಸಿ ತೀರ್ಮಾನಿಸುವ ಅಗತ್ಯತೆ ಅಥವಾ ಗಂಭೀರತೆ ಇದ್ದಲ್ಲಿ ಅಂತಹ ವಿಷಯವನ್ನು ಸಭಾಧ್ಯಕ್ಷರ ಅಪ್ಪಣೆ ಮೇಲೆ ಚರ್ಚೆಗೆ ತೆಗೆದುಕೊಳ್ಳಬಹುದು (ಆದರೆ ಆರ್ಥಿಕ ಪರಿಣಾಮಗಳನ್ನುಳ್ಳ ಯಾವುದೇ ವಿಷಯವನ್ನು ಹೆಚ್ಚುವರಿ ವಿಷಯವನ್ನಾಗಿ ಚರ್ಚೆಗೆ ತೆಗೆದುಕೊಳ್ಳಲಾಗದು).

51.3 ಎಲ್ಲಾ ವಿಷಯಗಳನ್ನು ಬಹುಮತದಿಂದ ತೀರ್ಮಾನಿಸತಕ್ಕದ್ದು. ಯಾವುದೇ ವಿಚಾರದಲ್ಲಿ ಸಮಮತಬಂದಲ್ಲಿ ಅಧ್ಯಕ್ಷರು ತಮ್ಮ ಮತದ ಜೊತೆಗೆ ನಿರ್ಣಾಯಕ ಮತ ನೀಡಬಹುದು.

51.4 ಅಧ್ಯಕ್ಷರು ಅಥವಾ ಅವರ ಗೈರುಹಾಜರಿಯಲ್ಲಿ, ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇಬ್ಬರೂ ಗೈರುಹಾಜರಿದ್ದಲ್ಲಿ ಹಾಜರಿದ್ದ ಮಂಡಳಿಯ ಸದಸ್ಯರು ತಮ್ಮಲ್ಲಿ ಒಬ್ಬರನ್ನು ಆ ಸಭೆಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು.

51.5 ಮಂಡಳಿಯ ಯಾವ ಸದಸ್ಯರೇ ಆಗಲಿ ಸಭೆಯಲ್ಲಿ ಚರ್ಚಿಸತಕ್ಕ ವಿಷಯದಲ್ಲಿ ಯಾವುದೇ ವ್ಯಕ್ತಿಗತ ಆಸಕ್ತಿ ಇದ್ದರೆ ಅಂತಹ ಚರ್ಚೆಯ ಸಮಯದಲ್ಲಿ ಅವರು ಸಭೆಯಲ್ಲಿ ಹಾಜರಿರಕೂಡದು.

51.6 ಮಂಡಳಿಯ ಸಭಾವಶ್ಯಕ ಸಂಖ್ಯೆಯು (ಕೋರಂ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಮಂಡಳಿಯ ಬಲದ ಶೇ.50 ರ ನಂತರದ ಸಂಖ್ಯೆಯು ಆಗಿರತಕ್ಕದ್ದು. ಅಂದರೆ, ಅದು **11** ಇರತಕ್ಕದ್ದು. ಯಾವುದೇ ಸಭೆಯಲ್ಲಿ ಯಾವುದೇ ಕಲಾಪವನ್ನು ನಡೆಸುವಾಗ ಕೋರಂ ಇಲ್ಲದಿದ್ದ ಪಕ್ಷದಲ್ಲಿ ಕಲಾಪವನ್ನು ನಡೆಸತಕ್ಕದ್ದಲ್ಲ ಮತ್ತು ಮುಂದಿನವಾರದ ಅದೇ ದಿನ ಮತ್ತು ಕಾಲಕ್ಕೆ ಸಭೆಯನ್ನು ಮುಂದೂಡತಕ್ಕದ್ದು. ಗೈರುಹಾಜರಿದ್ದ ನಿರ್ದೇಶಕರಿಗೆ ಮಾತ್ರ ಮುಂದೂಡಿದ ಸಭೆಯ ಬಗ್ಗೆ ನೋಟೀಸು

ಕೊಡತಕ್ಕದ್ದು. ಅಂಥ ಮುಂದುವರಿದ ಸಭೆಯಲ್ಲಿ ಮುಂದೂಡಲ್ಪಟ್ಟ ಸಭೆಯ ಅಜೆಂಡಾದಲ್ಲಿನ ವಿಷಯಗಳನ್ನಲ್ಲದೆ ಯಾವುದೇ ಹೊಸ ವಿಷಯವನ್ನು ಚರ್ಚಿಸತಕ್ಕದ್ದಲ್ಲ.

51.7 ಪುಟ ಸಂಖ್ಯೆಗಳುಳ್ಳ ಮತ್ತು ಬ್ಯಾಂಕಿನ ಮುದ್ರೆ ಹೊಂದಿರುವ ಮತ್ತು ಅದೇ ಉದ್ದೇಶಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ಮಂಡಳಿ ಸಭೆಯ ಕಾರ್ಯಕಲಾಪಗಳನ್ನು ಮುಖ್ಯ ಕಾರ್ಯನಿರ್ವಾಹಕರು ದಾಖಲು ಮಾಡತಕ್ಕದ್ದು.ಸಭೆಯಲ್ಲಿ ಹಾಜರಿದ್ದ ನಿರ್ದೇಶಕರ ಹೆಸರುಗಳನ್ನು ನಮೂದಿಸತಕ್ಕದ್ದು.ಅಧ್ಯಕ್ಷರು ಮತ್ತು ಹಾಜರಿದ್ದ ನಿರ್ದೇಶಕರು ಆ ಪುಸ್ತಕದಲ್ಲಿ ರುಜು ಮಾಡತಕ್ಕದ್ದು.ಮಂಡಳಿಯ ತೀರ್ಮಾನದಂತೆ ಮುಖ್ಯ ಕಾರ್ಯನಿರ್ವಾಹಕರು ಪೂರ್ಣ ವಿವರಗಳೊಂದಿಗೆ ಸಭಾ ನಡವಳಿಕೆಗಳನ್ನು ಬರೆಯತಕ್ಕದ್ದು ಮತ್ತು ಸಭಾಧ್ಯಕ್ಷರು ಸಹಿ ಮಾಡತಕ್ಕದ್ದು.ಕಛೇರಿಯ ಕೆಲಸದ ವೇಳೆಯಲ್ಲಿ ಯಾವ ನಿರ್ದೇಶಕರೇ ಆಗಲಿ ಇದನ್ನು ಪರಿಶೀಲಿಸಲು ಅವಕಾಶವಿರತಕ್ಕದ್ದು.

51.8 ಈ ಉಪವಿಧಿಗಳ, ರೀತ್ಯಾ ಕಾರ್ಯನಿರ್ವಾಹಕರು ಮಂಡಳಿಯ ಸಭೆಯನ್ನು ಕರೆಯಲು ತಪ್ಪಿದರೆ ಮಂಡಳಿಯ ಬಹುಮತ ಸದಸ್ಯರು ತಾವು ಸೂಚಿಸಿದ ದಿನಾಂಕದಂದು ನಿರ್ದಿಷ್ಟ ವಿಷಯಗಳ ಚರ್ಚೆಗಾಗಿ ಸಭೆಯನ್ನು ಕರೆಯಬೇಕೆಂದು ಅಧ್ಯಕ್ಷರನ್ನು ಬರಹದ ಮೂಲಕ ಕೇಳಿಕೊಳ್ಳಬಹುದು. ಅದರ ಒಂದು ಪ್ರತಿಯನ್ನು ಮುಖ್ಯ ಕಾರ್ಯನಿರ್ವಾಹಕರು ಕಳುಹಿಸತಕ್ಕದ್ದು.

51.9 ಮಂಡಳಿ ಮತ್ತು ಉಪಸಮಿತಿಗಳ ಸಭೆಗಳನ್ನು ಬ್ಯಾಂಕಿನ ನೋಂದಾಯಿತ ಕಛೇರಿಯಲ್ಲಿ ನಡೆಸತಕ್ಕದ್ದು;

**52. ನಿರ್ದೇಶಕರ ಅರ್ಹತೆ:**

ಆಡಳಿತ ಮಂಡಳಿಯ ನಿರ್ದೇಶಕನಾಗಲು ಬ್ಯಾಂಕಿನ ಸದಸ್ಯನಾಗಿರಬೇಕು.ಸಹಕಾರ ಕಾಯ್ದೆ ಮತ್ತು ನಿಯಮಗಳ ಪ್ರಕಾರ ನಿರ್ದೇಶಕನಾಗಲು ಅನರ್ಹತೆಯನ್ನು ಹೊಂದಿದ್ದರೆ ಅಂತಹ ಯಾವ ಸದಸ್ಯನೂ ಮಂಡಳಿಗೆ ಚುನಾಯಿತನಾಗಲು ಅಥವಾ ನಿರ್ದೇಶಕನಾಗಿ ಮುಂದುವರೆಯಲು ಅರ್ಹನಲ್ಲ.

52 (ಅ). ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು ಅನರ್ಹತೆ:
ಆಡಳಿತ ಮಂಡಳಿಯ ನಿರ್ದೇಶಕನಾಗಲು ಬ್ಯಾಂಕಿನ ಸದಸ್ಯನಾಗಿರಬೇಕು. ಸಹಕಾರ ಕಾಯ್ದೆ ಮತ್ತು ನಿಯಮಗಳ ಪ್ರಕಾರ ನಿರ್ದೇಶಕನಾಗಲು ಅನರ್ಹತೆಯನ್ನು ಹೊಂದಿದ್ದರೆ ಹಾಗೂ ಕಾಯಿದೆಯ ಕಲಂ 27(ಎ)(ಬಿ) ರಲ್ಲಿ ವಿವರಿಸಿರುವ ಅವಕಾಶವನ್ನು ಉಪಯೋಗಿಸಿಕೊಳ್ಳಲು ವಿಫಲರಾದ ಅಂತಹ ಯಾವ ಸದಸ್ಯನೂ ಮಂಡಳಿಗೆ ಚುನಾಯಿತನಾಗಲು ಅರ್ಹನಲ್ಲ.

**53. ಮಂಡಲಿಯ ಸಭೆಗಳಿಗೆ ಗೈರು ಹಾಜರಿ :**
ಯಾವುದೇ ನಿರ್ದೇಶಕನು ಮಂಡಲಿಯ ಸಭೆಗಳಿಗೆ ಹಾಜರಾಗಲು ಸಾಧ್ಯವಿಲ್ಲದಿದ್ದಲ್ಲಿ ಹಾಗೆ ಗೈರುಹಾಜರು ಆಗುವ ಬಗ್ಗೆ ಲಿಖಿತ ಕೋರಿಕೆಯನ್ನು ಸಲ್ಲಿಸಿ ಮಂಡಲಿಯ ಅನುಮತಿಯನ್ನು ಪಡೆಯತಕ್ಕದ್ದು.ಮಂಡಲಿಯು ತನ್ನ ವಿವೇಚನೆಯ ಮೇರೆಗೆ ಅಂತಹ ಕೋರಿಕೆಯನ್ನು ಸಕಾರಣಗಳಿದ್ದರೆ ಪರಿಗಣಿಸಬಹುದು ಅಥವಾ ಸಕಾರಣಗಳಿಲ್ಲದಿದ್ದರೆ ತಿರಸ್ಕರಿಸಬಹುದು.ಮಂಡಲಿಯ ಅನುಮತಿ ಇಲ್ಲದೇ ಯಾವ ನಿರ್ದೇಶಕನಾದರೂ ಅನುಕ್ರಮವಾಗಿ ಮೂರು ಸಭೆಗಳಿಗೆಗೈರುಹಾಜರಾದಲ್ಲಿ, ಅವನ ನಿರ್ದೇಶಕತ್ವವು ಅಂತ್ಯಗೊಳ್ಳತಕ್ಕದ್ದು.

**54. ಮಂಡಳಿಯ ಸದಸ್ಯರ ಸೇವೆ :**
ನಿರ್ದೇಶಕರು ಸಭೆಗಳಿಗೆ ಹಾಜರಾದಾಗ ಅಥವಾ ನಿರ್ದೇಶಕರಾಗಿ ಬ್ಯಾಂಕಿನ ಯಾವುದೇ ಕೆಲಸಗಳನ್ನು ನಿರ್ವಹಿಸಿದಾಗ, ಅವರಿಗೆ ಕೊಡಬಹುದಾದ ಪ್ರಯಾಣಭತ್ಯೆ, ದಿನಭತ್ಯೆ ಮತ್ತು ಆಸೀನ ಶುಲ್ಕಗಳನ್ನು ಬ್ಯಾಂಕಿನ ಸಾಮಾನ್ಯ ನಿಕಾಯವು ಅದರ ಆರ್ಥಿಕ ಪರಿಸ್ಥಿತಿ ಮತ್ತು ಲಾಭದಾಯಕತೆಯನ್ನು ಪರಿಗಣಿಸಿ ನಿರ್ಧರಿಸಬಹುದಾಗಿದೆ.

**54.1 ಮಂಡಳಿಯ ಪದಾಧಿಕಾರಿಗಳ ಮತ್ತು ನಿರ್ದೇಶಕರ ವಿದೇಶ ಪ್ರವಾಸ:-**

1. ಮಂಡಳಿಯ ಪದಾಧಿಕಾರಿಗಳು ಮತ್ತು ನಿರ್ದೇಶಕರು ಅವರ ನಿರ್ದೇಶಕತ್ವದ ಕಾಲಾವಧಿಯಲ್ಲಿ ಸರ್ಕಾರದ ಪೂರ್ವಾನುಮತಿಯೊಂದಿಗೆ ಗರಿಷ್ಠ ಕೇವಲ 2 ಬಾರಿ ಮಾತ್ರ ವಿದೇಶ ಪ್ರವಾಸ ಕೈಗೊಳ್ಳಬಹುದು.

2. ಮಂಡಳಿಯ ನಿರ್ದೇಶಕರು ಒಂದೇ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಸಹಕಾರ ಸಂಘಗಳಲ್ಲಿ ನಿರ್ದೇಶಕರಾಗಿದ್ದರೆ, ಎರಡೂ ಸಹಕಾರ ಸಂಘಗಳಿಂದ ಒಂದೇ ಅವಧಿಯಲ್ಲಿ ವಿದೇಶ ಪ್ರವಾಸ ಕೈಗೊಳ್ಳುವಂತಿಲ್ಲ.

3. ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕರು ಮತ್ತು ಅಧಿಕಾರಿಗಳು 5 ವರ್ಷಗಳ ಅವಧಿಯಲ್ಲಿ ಸರ್ಕಾರದ ಪೂರ್ವಾನುಮತಿಯೊಂದಿಗೆ ಗರಿಷ್ಠ ಕೇವಲ 2 ಬಾರಿ ಮಾತ್ರ ವಿದೇಶ ಪ್ರವಾಸ ಕೈಗೊಳ್ಳಬಹುದು.

4. ಮಂಡಳಿಯ ನಿರ್ದೇಶಕರು 5 ವರ್ಷಗಳ ಅವಧಿಯಲ್ಲಿ ಸರ್ಕಾರದ ಪೂರ್ವಾನುಮತಿಯೊಂದಿಗೆ ಗರಿಷ್ಠ ಕೇವಲ 2 ಬಾರಿ ಮಾತ್ರ ವಿದೇಶ ಪ್ರವಾಸ ಕೈಗೊಳ್ಳಬಹುದು.

5. ವಿದೇಶದ ಪ್ರವಾಸ ಕೇವಲ ಅಧ್ಯಯನ ಪ್ರವಾಸವಾಗಿದ್ದು, ಬುದ್ಧಿ, ಕೌಶಲ್ಯಗಳ ಅಭಿವೃದ್ಧಿಗಾಗಿ ಮತ್ತು ಸಭೆ, ಸೆಮಿನಾರ್‌ಗಳಲ್ಲಿ ಭಾಗವಹಿಸಲು ಮಾತ್ರ ಕೈಗೊಳ್ಳತಕ್ಕದ್ದು.

ಪರಂತು ಹಿಂದಿನ ಮೂರು ವರ್ಷಗಳಲ್ಲಿ ನಿರಂತರವಾಗಿ ಲಾಭದಲ್ಲಿರುವ ಸಹಕಾರಿ ಸಂಘಗಳಿಗೆ ಅನ್ವಯವಾಗತಕ್ಕದ್ದು.

**55. ಮಂಡಳಿಯ ತೆರವಾದ ಸ್ಥಾನಗಳು :**

ಬ್ಯಾಂಕಿನ ಮಂಡಳಿಯ ನಿರ್ದೇಶಕರ ಪದದಲ್ಲಿ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅನರ್ಹತೆ ಅಥವಾ ಇನ್ನಾವುದೇ ಕಾರಣದಿಂದ ಮಂಡಳಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಕೆಳಗಿನಂತೆ ಭರ್ತಿಮಾಡತಕ್ಕದ್ದು.ಮಂಡಳಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಆಯೋಗವು ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು.ಮಂಡಳಿಯ ಉಳಿದಿರುವ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಕಡಿಮೆ ಇರುವಲ್ಲಿ ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹಮತದಿಂದ (co-option)ನಾಮನಿರ್ದೇಶನ ಮಾಡುವ ಮೂಲಕ ಮಂಡಳಿಯಲ್ಲಿನ ಖಾಲಿ ಸ್ಥಾನವನ್ನು ಮಂಡಳಿಯು ಭರ್ತಿ ಮಾಡಬಹುದು.

**56. ಮಂಡಳಿಯ ಸದಸ್ಯರ ರಾಜೀನಾಮೆ:**

ಬ್ಯಾಂಕಿನ ಮಂಡಳಿಯ ಯಾವುದೇ ನಿರ್ದೇಶಕನು ತನ್ನ ಸದಸ್ಯತ್ವಕ್ಕೆ ಲಿಖಿತವಾಗಿ ರಾಜೀನಾಮೆ ಪತ್ರವನ್ನು ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸಬಹುದು. ರಾಜೀನಾಮೆ ಕೊಟ್ಟ ತಾರೀಖಿನಿಂದ ಹದಿನೈದು ದಿವಸದ ಒಳಗೆ ರಾಜೀನಾಮೆಯನ್ನು ಹಿಂಪಡೆಯಲು ಅವಕಾಶವಿದ್ದು ಇದನ್ನು ಲಿಖಿತ ರೂಪದಲ್ಲಿ ಮುಖ್ಯಕಾರ್ಯನಿರ್ವಾಹಕರಿಗೆ ರಾಜೀನಾಮೆ ಹಿಂಪಡೆಯುವ ಪತ್ರ ಸಲ್ಲಿಸದಿದ್ದಲ್ಲಿ ಹದಿನೈದನೇ ದಿನದ ಮುಕ್ತಾಯದ ಕೂಡಲೇ ಆ ನಿರ್ದೇಶಕನ ರಾಜೀನಾಮೆಯು ಅಂಗೀಕರಿಸಲ್ಪಟ್ಟಿದೆ ಎಂದು ಭಾವಿಸತಕ್ಕದ್ದು ಹಾಗೂ ಆ ಸ್ಥಾನವು ತೆರವಾಗಿದೆ ಎಂದು ತಿಳಿಯತಕ್ಕದ್ದು.

**57. ಮಂಡಳಿ ರಚನೆಯ ಉರ್ಜಿತತ್ವ :**

ಮಂಡಳಿಯು ಅಥವಾ ಮಂಡಳಿಯ ಸದಸ್ಯರೊಬ್ಬರು ನಿರ್ಲಕ್ಷ್ಯವಿಲ್ಲದೆ ಸದ್ವಿಶ್ವಾಸದಿಂದ ಮಾಡಿದ ಎಲ್ಲಾ ಕಾರ್ಯಗಳೂ, ಅಂತಹ ಮಂಡಳಿಯ ಅಥವಾ ಸದಸ್ಯರ ನೇಮಕಾತಿಯು ದೋಷಪೂರ್ಣವಾಗಿದೆ ಎಂದು ಅನಂತರ ಕಂಡುಬಂದರೂ ಸಹ ಆ ಮಂಡಳಿಯ ಮತ್ತು ಆ ಸದಸ್ಯರ ನೇಮಕಾತಿಯು ಸಕ್ರಮವಾಗಿ ವಿಧಿಬದ್ಧವಾಗಿ ಆಗಿತ್ತೆಂದು ಭಾವಿಸಿ, ಕ್ರಮಬದ್ಧವಾಗಿ ಊರ್ಜಿತವಾಗಿವೆಯೆಂದು ಪರಿಗಣಿಸತಕ್ಕದ್ದು.

**58. ನಿರ್ದೇಶಕರ, ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದ ಜವಾಬ್ದಾರಿಗಳು:**

ಸಹಕಾರ ಕಾಯ್ದೆಗೆ, ನಿಯಮಗಳಿಗೆ, ಉಪವಿಧಿಗಳಿಗೆ ಮತ್ತು ವ್ಯವಹಾರ ನಿಯಮಗಳಿಗೆ ವಿರುದ್ಧವಾಗಿ ನಡೆಸಿದ ಎಲ್ಲಾ ವ್ಯವಹಾರಗಳಿಗೆ ನಿರ್ದೇಶಕ ಮಂಡಳಿ ಸದಸ್ಯರು, ಬ್ಯಾಂಕಿನ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ವೈಯಕ್ತಿಕವಾಗಿ

ಜವಾಬ್ದಾರರಾಗಿರುತ್ತಾರೆ. ನಿಯಮಗಳ ಉಲ್ಲಂಘನೆಯಿಂದ ಬ್ಯಾಂಕಿನ ಆಸ್ತಿಪಾಸ್ತಿಗಳಲ್ಲಿ ಏನಾದರೂ ಕೊರತೆಯಾದರೆ ಸಹಕಾರ ಸಂಘಗಳ ಕಾಯ್ದೆ ಕಲಂ 69 ರ ಮತ್ತು 70 ರ ಪ್ರಕಾರ ನಿರ್ದೇಶಕ ಮಂಡಳಿಯವರು ಕ್ರಮ ತೆಗೆದುಕೊಂಡು ತಪ್ಪಿತಸ್ಥ ನಿರ್ದೇಶಕರಿಂದ ಮತ್ತು ಅಥವಾ ಅಧಿಕಾರಿಗಳಿಂದ / ಸಿಬ್ಬಂದಿ ವರ್ಗದವರಿಂದ ಕೊರತೆಯಾದ ಹಣವನ್ನು ವಸೂಲಿ ಮಾಡಲು ಅಧಿಕಾರ ಪಡೆದಿರುತ್ತಾರೆ.

**59. ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:**

ಮಂಡಳಿಯು ಕಾಯ್ದೆ, ನಿಯಮಗಳಿಗೆ ಮತ್ತು ಉಪವಿಧಿಗಳಿಗೆ ಹಾಗೂ ಸಾಮಾನ್ಯ ಸಭೆಯಲ್ಲಿ ಕೈಗೊಂಡ ತೀರ್ಮಾನಗಳಿಗೆ ಒಳಪಟ್ಟು ಬ್ಯಾಂಕಿನ ವ್ಯವಹಾರಗಳನ್ನು ನಡೆಸಲು ಅಧಿಕಾರಗಳನ್ನು ಪಡೆದಿರುತ್ತದೆ. ಬ್ಯಾಂಕಿನ ಕಾರ್ಯ ಕಲಾಪಗಳನ್ನು ನೋಡಿಕೊಳ್ಳುವಲ್ಲಿ ಮಂಡಳಿಯ ಪ್ರತಿ ಸದಸ್ಯರೂ ವ್ಯವಹಾರದಲ್ಲಿ ತೊಡಗಿರುವ ಒಬ್ಬ ಸಾಮಾನ್ಯ ಮನುಷ್ಯನು ತೋರಿಸುವ ಯುಕ್ತಾ ಯುಕ್ತ ಪರಿಜ್ಞಾನ, ದೂರದೃಷ್ಟಿ ಹಾಗೂ ಕಾರ್ಯತತ್ಪರತೆಯನ್ನು ಬ್ಯಾಂಕಿನ ವ್ಯವಹಾರದಲ್ಲು ತೋರಿಸತಕ್ಕದ್ದು ಮತ್ತು ಕಾಯಿದೆ ಮತ್ತು ನಿಯಮಗಳಿಗೆ, ಉಪನಿಬಂಧನೆಗಳಿಗೆ, ವ್ಯವಹಾರ ನಿಯಮಗಳಿಗೆ ಹಾಗೂ ರಿಸರ್ವ್ ಬ್ಯಾಂಕ್ ನಿರ್ದೇಶನಗಳಿಗೆ ವಿರುದ್ಧವಾದದ್ದೇನನ್ನೂ ಮಾಡಬಾರದು.

ಮಂಡಳಿಯು ಬ್ಯಾಂಕಿನ ವ್ಯವಹಾರಗಳನ್ನು ನಡೆಸಲು ಈ ಕೆಳಕಂಡ ಅಧಿಕಾರಗಳನ್ನು ಹೊಂದಿರುತ್ತದೆ.

59.1 ಸದಸ್ಯರು, ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರನ್ನು ಸೇರಿಸಿಕೊಳ್ಳುವುದು.

59.2 ಷೇರುಗಳನ್ನು ವಿತರಣೆ ಮಾಡುವುದು ಮತ್ತು ಷೇರುಗಳ ವರ್ಗಾವಣೆ ಮಂಜೂರು ಮಾಡುವುದು.

59.3 ಸದಸ್ಯರು, ಸಹಸದಸ್ಯರು ಮತ್ತು ನಾಮಮಾತ್ರ ಸದಸ್ಯರಿಂದ ಬಂದಿರುವ ಸಾಲ ಮತ್ತು ಮುಂಗಡಗಳ ಅರ್ಜಿಗಳನ್ನು ಪರಿಶೀಲಿಸುವುದು ಮತ್ತು ಇತ್ಯರ್ಥಗೊಳಿಸುವುದು.

59.4 ಸ್ವಂತ ಜವಾಬ್ದಾರಿ ಮೇಲೆ ಅಥವಾ ಜಾಮೀನಿನ ಮೇಲೆ ಸಾಲ ಪಡೆಯುವ ಸದಸ್ಯರ, ಸಹಸದಸ್ಯರ ಮತ್ತು ನಾಮಮಾತ್ರ ಸದಸ್ಯರ ಸಾಲದ ಅರ್ಹತೆಯನ್ನು ನಿಶ್ಚಯಿಸುವುದು ಮತ್ತು ಅವರ ಸಾಲದ ಪರಿಮಿತಿಯನ್ನು ನಿರ್ಧರಿಸುವುದು.

59.5 ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ಮತ್ತು ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಅನುಗುಣವಾಗಿ ಅಂಗೀಕೃತ ಭದ್ರತಾಪತ್ರಗಳಲ್ಲಿ ಸರ್ಕಾರಿ ಮತ್ತು ಇತರ ವಿಶ್ವಸ್ಥ ಭದ್ರತಾಪತ್ರಗಳಲ್ಲಿ ಠೇವಣಿ ಮುಂತಾದವುಗಳಲ್ಲಿ ಬ್ಯಾಂಕಿನ ನಿಧಿಗಳನ್ನು ತೊಡಗಿಸುವುದು.

59.6 ದೂರುಗಳ ಸ್ವೀಕರಣೆ ಮತ್ತು ವಿಲೇವಾರಿ.

59.7 ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗಾಗಿ ಮಂಡಳಿಯು ಸಹಕಾರ ವರ್ಷದ ಕೊನೆಯಲ್ಲಿದ್ದಂತೆ ವಾರ್ಷಿಕ ಜಮೆಗಳ ಮತ್ತು ಸಂದಾಯಗಳ ಅಥವಾ ಆದಾಯಗಳ ಮತ್ತು ಖರ್ಚುಗಳ, ಲಾಭ ಮತ್ತು ನಷ್ಟಗಳ ಆರ್ಥಿಕ ತಃಖ್ತೆಗಳನ್ನು ಮತ್ತು ಆಸ್ತಿಹೊಣೆ ಪಟ್ಟಿಯನ್ನು ತತ್ಸಂಬಂಧದ ಷೆಡ್ಯೂಲುಗಳ ಮತ್ತು ಇತರ ತಃಖ್ತೆಗಳ ಸಹಿತ ಸಿದ್ಧಪಡಿಸಿ ಲೆಕ್ಕಪರಿಶೋಧಕನಿಗೆ ಒಪ್ಪಿಸಲು ವ್ಯವಸ್ಥೆ ಮಾಡತಕ್ಕದ್ದು;

59.8 ಸಹಕಾರ ಸಂಘಗಳ ಕಾಯ್ದೆ ನಿಯಮಗಳಲ್ಲಿ ನಿಗದಿ ಮಾಡಿದ ಗರಿಷ್ಠ ಮಿತಿಗೊಳಪಟ್ಟವು ಆಧಾರ ಅಥವಾ ಆಧಾರರಹಿತ ಸಾಲ ಮತ್ತು ಮುಂಗಡಗಳನ್ನು ನಗದುದ್ದರಿ ಸಾಲಗಳನ್ನು (ಕ್ಯಾಷ್ ಕ್ರೆಡಿಟ್) ಮತ್ತು ಮೀರಳೆತ (ಓವರ್ ಡ್ರಾಫ್ಟ್) ಸಾಲಗಳನ್ನು ಎತ್ತುವುದು, ಠೇವಣಿಗಳನ್ನು ಸ್ವೀಕರಿಸುವುದು ಮತ್ತು ಆ ಸಾಲಗಳಿಗೆ ಸಂಬಂಧಿಸಿದ ಷರತ್ತು ನಿಬಂಧನೆಗಳನ್ನು ಮಂಜೂರು ಮಾಡುವುದು.

59.9 ದಾವಾ ಅಥವಾ ಇತರೆ ಕಾನೂನು ಬದ್ಧ ಖಟ್ಲೆಗಳನ್ನು ಹೂಡುವುದು, ಪ್ರತಿಪಾದಿಸುವುದು ಅಥವಾ ರಾಜಿಯಿಂದ ಪರಿಹಾರ ಕಂಡುಕೊಳ್ಳುವುದು.

59.10 ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶಗಳಿಗೆ ಒಳಪಟ್ಟು ಕಾಲಕಾಲಕ್ಕೆ ಸಾಲಗಳ ಮತ್ತು ಠೇವಣಿಗಳ ಮೇಲಿನ ಬಡ್ಡಿದರವನ್ನು ನಿರ್ಧರಿಸುವುದು.

59.11 ಬ್ಯಾಂಕಿಗೆ ಒತ್ತೆಯಿಡುವ ಭದ್ರತೆಗಳನ್ನು ಮೌಲ್ಯಮಾಪನ ಮಾಡಲು ಬೆಲೆ ನಿರ್ಧಾರಕರನ್ನು ಮತ್ತು ಮೌಲ್ಯಮಾಪಕರನ್ನು ನೇಮಿಸುವುದು ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವುದು.

59.12 ಬ್ಯಾಂಕಿಗೆ ಆಧಾರ ಮಾಡುವ ಚರಸ್ಥಿರಾಸ್ತಿಗಳ ಹಕ್ಕು ಬಾಧ್ಯತೆ, ಹಕ್ಕುಪತ್ರ, ಇತ್ಯಾದಿ ಅಂಶಗಳನ್ನು ಪರಿಶೀಲಿಸಲು ಕಾನೂನು ಸಲಹೆಗಾರರನ್ನು ನೇಮಿಸಿ ಅವರ ಸಂಭಾವನೆಯನ್ನು ನಿಗದಿಪಡಿಸುವುದು.

59.13 ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರ 17 ಮತ್ತು 18 ನೇ ನಿಯಮಾನುಸಾರ ಸಾಮಾನ್ಯ ಸಭೆಯಲ್ಲಿ ಮಂಜೂರಾದ ಆರ್ಥಿಕ ಅಂದಾಜು ಆಯವ್ಯಯ ಪಟ್ಟಿಗೆ ಒಳಪಟ್ಟು ಬ್ಯಾಂಕಿನ ಸಿಬ್ಬಂದಿಯ ವೃಂದಬಲ, ವೇತನ ಶ್ರೇಣಿ ಮತ್ತು ಇತರೆ ಭತ್ಯೆಗಳಿಗೆ ನಿಬಂಧಕರ ಪೂರ್ವಭಾವಿ ಮಂಜೂರಾತಿ ಪಡೆದು ಸಿಬ್ಬಂದಿಯನ್ನು ನೇಮಿಸುವುದು.

59.14 ಸಹಕಾರ ಬ್ಯಾಂಕುಗಳ ಷೇರುಗಳಲ್ಲಿ, ಸರ್ಕಾರಿ ಹಾಗೂ ವಿಶ್ವಸ್ಥ ಭದ್ರತೆಗಳಲ್ಲಿ ಮತ್ತು ಇತರೇ ಅಂಗೀಕೃತ ಭದ್ರತೆಗಳಲ್ಲಿ ಹಣವನ್ನು ತೊಡಗಿಸುವುದು, ವರ್ಗಾವಣೆ ಮತ್ತು ನೆಗೋಷಿಯೇಟ್ ಮಾಡುವುದು.ಈ ಅಧಿಕಾರವನ್ನು ಮುಖ್ಯಕಾರ್ಯನಿರ್ವಾಹಕರವರಿಗೆ ಪ್ರತ್ಯಾಯೋಜಿಸಬಹುದು.

59.15 ಆಡಿಟ್ ವರದಿಯನ್ನು ಪರಿಶೀಲಿಸುವುದು ಮತ್ತು ಅದರಲ್ಲಿ ತೋರಿಸಿರುವ ಲೋಪದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ನೇರ್ಪಡಿಸಲು, ಸೂಕ್ತ ಸಲಹೆಗಳನ್ನು ಕಾರ್ಯಗತಗೊಳಿಸಲು ಕ್ರಮ ತೆಗೆದುಕೊಳ್ಳುವುದು ಹಾಗೂ ಆಡಿಟ್ ವರದಿಯನ್ನು ತತ್ಸಂಬಂಧದ ಅನುಪಾಲನಾ ವರದಿಯ ಸಹಿತ ಸಾಮಾನ್ಯ ಸಭೆಯ ಮುಂದೆ ಮಂಡಿಸುವುದು. ಸಾಮಾನ್ಯ ಸಭೆಯ ದಿನಾಂಕದಿಂದ 30 ದಿನಗಳೊಳಗಾಗಿ ಆಡಿಟ್ ವರದಿಯನ್ನು ಮತ್ತು ಅದರ ಮೇಲೆ ತೆಗೆದುಕೊಂಡ ಕ್ರಮಗಳ ವರದಿಯನ್ನು ಸಂಬಂಧಪಟ್ಟ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ರಿಜಿಸ್ಟ್ರಾರನಿಗೆ ಕಳುಹಿಸುವುದು;

59.16 ರಿಸರ್ವ್ ಬ್ಯಾಂಕಿನ ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳ ಪರಿವೀಕ್ಷಣಾ ವರದಿಯನ್ನು ಪರಿಶೀಲಿಸುವುದು ಮತ್ತು ಸಕಾಲದಲ್ಲಿ ಆ ವರದಿಗಳಂತೆ ಕ್ರಮ ತೆಗೆದುಕೊಳ್ಳುವುದು ಹಾಗೂ ತೆಗೆದುಕೊಂಡ ಕ್ರಮವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನವರಿಗೂ ಮತ್ತು ನಿಬಂಧಕರಿಗೂ ವರದಿ ಮಾಡುವುದು.

59.17 ಬ್ಯಾಂಕಿಗೆ ಸೇರಿದ ನಿರುಪಯೋಗಿ ವಸ್ತುಗಳನ್ನು ವಜಾ ಮಾಡಿ ದಾಸ್ತಾನುಪಟ್ಟಿಯಿಂದ ತೆಗೆದು ಹಾಕುವುದು ಅಥವಾ ಅವುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡುವುದು.

59.18 ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯೊಂದಿಗೆ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯೊಳಗೆ ಶಾಖೆಗಳನ್ನು, ಉಪಕಛೇರಿಗಳನ್ನು, ಪಾವತಿ ಕಛೇರಿಗಳನ್ನು, ಉಪಪಾವತಿ ಕಛೇರಿಗಳನ್ನು, ವಿಸ್ತರಣಾ ಕೌಂಟರುಗಳನ್ನು ಮತ್ತು ಎ.ಟಿ.ಎಂ. ಕೌಂಟರ್‌ಗಳನ್ನು ತೆರೆಯುವುದು;

59.19 ಬ್ಯಾಂಕಿನ ಸಾದಿಲ್ವಾರು ಮತ್ತು ಇತರೇ ಖರ್ಚುಗಳನ್ನು ಮಂಜೂರು ಮಾಡುವುದು.

59.20 ಆರು ತಿಂಗಳಿಗೆ ಮೀರದಂತೆ ಯೋಗ್ಯ ಸಂದರ್ಭದಲ್ಲಿ ಸಾಲ ಮರುಪಾವತಿ ಅವಧಿಯನ್ನು ನಿಯಮಗಳಿಗೆ ಅನುಸಾರವಾಗಿ ವಿಸ್ತರಿಸುವುದು. ಈಗಾಗಲೇ ನಿಗದಿಪಡಿಸಿರುವ ಅವಧಿ ಮುಗಿಯುವುದರೊಳಗಾಗಿ ಸಾಲ ಮರುಪಾವತಿ ಅವಧಿ ವಿಸ್ತರಣೆ ಮಾಡತಕ್ಕದ್ದು.

59.21 ಸಿಬ್ಬಂದಿಯ ನೇಮಕಾತಿ, ಪದೋನ್ನತಿ, ಶಿಸ್ತಿನ ಕ್ರಮ, ತರಬೇತಿ ಹಾಗೂ ಇತರೆ ಸೇವಾ ವಿಷಯಗಳ ಬಗ್ಗೆ ನಿಯಮಗಳನ್ನು ರಚಿಸಿ, ಸಾಮಾನ್ಯ ನಿಕಾಯದ ಅನುಮತಿ ಪಡೆಯುವುದು;

59.22 ಸೇವಾ ನಿಯಮಗಳ ಪ್ರಕಾರ ತಪ್ಪಿತಸ್ಥ ಸಿಬ್ಬಂದಿಯವರ ಮೇಲೆ ಶಿಸ್ತುಕ್ರಮ ಜರುಗಿಸುವುದು ಮತ್ತು ಸೂಕ್ತ ಶಿಕ್ಷೆ ವಿಧಿಸುವುದು.

59.23 ಸೇವಾ ನಿಯಮಗಳ ರೀತ್ಯಾ ಮುಖ್ಯ ಕಾರ್ಯನಿರ್ವಾಹಕರ ಮತ್ತು ಇತರ ಸಿಬ್ಬಂದಿಯವರಿಂದ ಅವಶ್ಯಕ ಭದ್ರತೆಗಳನ್ನು ಪಡೆಯುವುದು.

59.24 ಬ್ಯಾಂಕಿನ ಪರವಾಗಿ ಚರ ಮತ್ತು ಸ್ಥಿರ ಆಸ್ತಿಗಳನ್ನು ಅಡಮಾನ ಮಾಡುವುದು, ಖರೀದಿಸುವುದು, ಮಾರುವುದು, ಬಾಡಿಗೆಗೆ ಮತ್ತು ಗುತ್ತಿಗೆಗೆ ಕೊಡುವುದು ಮತ್ತು ಆಸ್ತಿಗಳ ನಿರ್ವಹಣೆ ನಡೆಸುವುದು.

59.25 ನೌಕರರ ಭವಿಷ್ಯನಿಧಿ (ಪ್ರಾವಿಡೆಂಟ್ ಫಂಡ್) ಮತ್ತು ಉಪದಾನ ನಿಧಿ (ಗ್ರಾಚ್ಯೂಟಿ) ಗಳಿಗೆ ಸಂಬಂಧಿಸಿರುವಂತೆ ನಿರ್ದೇಶಕ ಮಂಡಳಿ ರಚಿಸಿರುವ ಮತ್ತು ನಿಬಂಧಕರಿಂದ ಅಂಗೀಕೃತವಾಗಿರುವ ನಿಯಮಗಳನುಸಾರವಾಗಿ ಬ್ಯಾಂಕಿನ ಸಿಬ್ಬಂದಿ ವರ್ಗದವರ ಭವಿಷ್ಯನಿಧಿ ಮತ್ತು ಕ್ಷೇಮ ನಿಧಿಗಾಗಿ ವಂತಿಗೆ ತೆಗೆದಿಡುವುದು.

59.26 ನಿಯಮಗಳಿಗನುಸಾರವಾಗಿ ದಿನನಿತ್ಯ ಠೇವಣಿಗಳನ್ನು ಸಂಗ್ರಹಿಸಲು ಪಿಗ್ಮಿ ಏಜೆಂಟರನ್ನು ನೇಮಿಸುವುದು.

59.27 ಬ್ಯಾಂಕಿನಲ್ಲಿ ಕೆಳಗಿನ ಉಪಸಮಿತಿಗಳು ಇರಬಹುದಾದರೂ ಯಾವುದೇ ಕಾಲಕ್ಕೆ ಆಡಿಟ್ ಸಮಿತಿಯೂ ಒಳಗೊಂಡಂತೆ ಮೂರಕ್ಕಿಂತ ಹೆಚ್ಚಿನ ಉಪಸಮಿತಿಗಳು ಇರತಕ್ಕದ್ದಲ್ಲ;

(1) ಕಾರ್ಯನಿರ್ವಾಹಕ ಸಮಿತಿ:– ಈ ಸಮಿತಿಯಲ್ಲಿ ಬ್ಯಾಂಕಿನ ಅಧ್ಯಕರು ಅಥವಾ ಅಧ್ಯಕ್ಷರ ಅಧಿಕೃತ ಪ್ರತಿನಿಧಿ ಅಲ್ಲದೇ ಇತರ ಮೂರು ಜನ ಚುನಾಯಿತ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕನು ಇರತಕ್ಕದ್ದು. ಈ ಸಮಿತಿಯು ತಿಂಗಳಿಗೆ ಕನಿಷ್ಠ ಎರಡು ಬಾರಿ ಸಭೆ ಸೇರಬಹುದು ಮತ್ತು ಇದಕ್ಕೆ ಕೋರಂ ಮೂರು ಇರತಕ್ಕದ್ದು. ಈ ಸಮಿತಿಯು ಸಿಬ್ಬಂದಿ ವಿಷಯಗಳು, ನಿಧಿಗಳನ್ನು ತೊಡಗಿಸುವ ವಿಷಯಗಳು, ಆಡಳಿತಾತ್ಮಕ ವಿಷಯಗಳು, ಶಾಖೆಗಳ ಕಾರ್ಯನಿರ್ವಹಣೆಯ ಮೇಲುಸ್ತುವಾರಿ, ಶಾಖೆಗಳಲ್ಲಿ ಅಗತ್ಯ ಮೂಲ ಸೌಕರ್ಯ ಸೃಜನೆ ಮತ್ತು ಶಾಖೆಗಳ ಪರಿಣಾಮಕಾರಿ ಬೆಳವಣಿಗೆಗೆ ಸಂಬಂಧಪಟ್ಟ ವಿಷಯಗಳು ಮುಂತಾದವುಗಳನ್ನು ನೋಡಿಕೊಳ್ಳುವುದು ಈ ಸಮಿತಿಯ ಜವಾಬ್ದಾರಿಯಾಗಿರುತ್ತದೆ.

(2) ಲೆಕ್ಕಪರಿಶೋಧನಾ ಸಮಿತಿ:– ಈ ಸಮಿತಿಯಲ್ಲಿ ಬ್ಯಾಂಕಿನ ಅಧ್ಯಕರು ಅಥವಾ ಅಧ್ಯಕ್ಷರ ಅಧಿಕೃತ ಪ್ರತಿನಿಧಿ ಅಲ್ಲದೇ ಇತರ ಮೂರು ಜನ ಚುನಾಯಿತ ನಿರ್ದೇಶಕರು, ಒಬ್ಬ ವೃತ್ತಿಪರ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಇರತಕ್ಕದ್ದು. ಈ ಸಮಿತಿಯು ಅವಶ್ಯಕತೆ ಇದ್ದಾಗ ಸಭೆ ಸೇರಬಹುದು. ಆದರೆ, ಕನಿಷ್ಟ ಎರಡು ತಿಂಗಳಿಗೊಮ್ಮೆ ಸಭೆ ಸೇರುವುದು ಕಡ್ಡಾಯವಾಗಿರತಕ್ಕದ್ದು ಮತ್ತು ಇದಕ್ಕೆ ಕೋರಂ ಮೂರು ಇರತಕ್ಕದ್ದು. ಈ ಸಮಿತಿಯು ಲೆಕ್ಕಪರಿಶೋಧನಾ ವರದಿ, ಪರಿವೀಕ್ಷಣಾ ವರದಿ, ವಿಚಾರಣಾ ವರದಿಗಳಲ್ಲಿ ತೋರಿಸಲಾದ ಲೋಪದೋಷಗಳನ್ನು ಸರಿಪಡಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಅನುಸರಣಾ ವರದಿಗಳನ್ನು ಕಾಲ ಕಾಲಕ್ಕೆ ಕಳುಹಿಸತಕ್ಕದ್ದು.

(3) ಸಾಲ ಸಮಿತಿ :– ಈ ಸಮಿತಿಯಲ್ಲಿ ಬ್ಯಾಂಕಿನ ಅಧ್ಯಕರು ಅಥವಾ ಅಧ್ಯಕ್ಷರ ಅಧಿಕೃತ ಪ್ರತಿನಿಧಿ ಅಲ್ಲದೇ ಇತರ ಮೂರು ಜನ ಚುನಾಯಿತ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕನು ಇರತಕ್ಕದ್ದು. ಈ ಸಮಿತಿಯು ಕನಿಷ್ಠ ವಾರಕ್ಕೆ ಒಂದು ಬಾರಿ ಸಭೆ ಸೇರಬಹುದು ಮತ್ತು ಇದಕ್ಕೆ ಕೋರಂ ಮೂರು ಇರತಕ್ಕದ್ದು. ಈ ಸಮಿತಿಯು ಸದಸ್ಯರಿಂದ ಬಂದ ಸಾಲದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸಾಲಗಳನ್ನು ಮಂಜೂರು ಮಾಡತಕ್ಕದ್ದು. ಸದಸ್ಯ ಸಾಲಗಾರರು ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವಂತೆ ನೋಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಸಾಲ ವಸೂಲಾತಿಗೆ ಸಕಾಲದಲ್ಲಿ ಕ್ರಮ ಕೈಗೊಳ್ಳತಕ್ಕದ್ದು. ಈ ಸಮಿತಿಯಲ್ಲಿ ಬ್ಯಾಂಕಿನ ಅಧ್ಯಕ್ಷರಲ್ಲದೆ ಇತರ ಮೂರು ಜನ ಚುನಾಯಿತ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕನು ಇರತಕ್ಕದ್ದು. ಈ ಸಮಿತಿಯು ತಿಂಗಳಿಗೊಮ್ಮೆ ಸಭೆ ಸೇರಬಹುದು ಮತ್ತು ಇದಕ್ಕೆ ಕೋರಂ ಮೂರು ಇರತಕ್ಕದ್ದು.

59.28 ಮಂಡಳಿಯು ಈ ಉಪಸಮಿತಿಗಳಿಗೆ ದತ್ತವಾದ ಕೆಲಸಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಸೂಕ್ತ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸತಕ್ಕದ್ದು. ಈ ಉಪಸಮಿತಿಗಳಿಗೆ ಮುಖ್ಯಕಾರ್ಯನಿರ್ವಾಹಕನು ಸಂಚಾಲಕನಾಗಿ ಬ್ಯಾಂಕಿನ ಅಧ್ಯಕ್ಷನು ಸಭಾಪತಿಯಾಗಿ ಇರತಕ್ಕದ್ದು. ಈ ಉಪಸಮಿತಿಗಳ ನಿರ್ಣಯಗಳನ್ನು ಅವಕ್ಕಾಗಿಯೇ ಪ್ರತ್ಯೇಕವಾಗಿ ಇಟ್ಟಿರುವ

ಪುಸ್ತಕಗಳಲ್ಲಿ ಮುಖ್ಯಕಾರ್ಯನಿರ್ವಾಹಕನು ಬರೆದು ಅಧ್ಯಕ್ಷರ ಮತ್ತು ಹಾಜರಿದ್ದ ನಿರ್ದೇಶಕರ ಸಹಿ ಪಡೆಯತಕ್ಕದ್ದು. ಈ ಉಪಸಮಿತಿಗಳ ನಿರ್ಣಯಗಳನ್ನು ಮಂಡಲಿಯ ಮುಂದಿನ ಸಭೆಯಲ್ಲಿ ಮಂಡಿಸಿ ಸ್ಥಿರೀಕರಣ ಪಡೆಯತಕ್ಕದ್ದು. ಈ ಉಪಸಮಿತಿ ಸಭೆಗಳಿಗೆ ಸಭಾ ಅವಶ್ಯಕ ಸಂಖ್ಯೆ ಮೂರು ಇರತಕ್ಕದ್ದು. ಆದರೆ ಯಾವುದೇ ಕಾಲಕ್ಕೆ ಏಕಕಾಲದಲ್ಲಿ ಮೂರಕ್ಕಿಂತ ಹೆಚ್ಚಿನ ಉಪಸಮಿತಿಗಳನ್ನು ಹೊಂದಿರತಕ್ಕದ್ದಲ್ಲ ಮತ್ತು ಆ ಮೂರರ ಪೈಕಿ ಆಡಿಟ್ ಸಮಿತಿಯು ಇರತಕ್ಕದ್ದು;

59.29 ಬ್ಯಾಂಕಿನ ಕಛೇರಿಯ ಮತ್ತು ಶಾಖೆಗಳ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು.

59.30 ಬ್ಯಾಂಕಿನ ಸಮಂಜಸ ಮತ್ತು ಪರಿಣಾಮಕಾರಿಯಾದ ಕಾರ್ಯನಿರ್ವಹಣೆಗಾಗಿ ಬೇಕಾದ ನಮೂನೆಗಳನ್ನು, ಅರ್ಜಿಗಳನ್ನು, ಸಾಲಪತ್ರಗಳನ್ನು ಆಧಾರಪತ್ರಗಳನ್ನು ರಿಜಿಸ್ಟರ್ ಮೊದಲಾದವುಗಳನ್ನು ನಿಗದಿಪಡಿಸುವುದು.

59.31 ಕಾಯಿದೆಯ ಕಲಂ 58(ಇ) ಪ್ರಕಾರ ನಿಬಂಧಕರ ಅನುಮತಿ ಮೇರೆಗೆ ಇತರೆ ಬ್ಯಾಂಕುಗಳಲ್ಲಿ ಮತ್ತು ಹಣಕಾಸು ಸಂಸ್ಥೆಗಳಲ್ಲಿ ಖಾತೆಗಳನ್ನು ತೆರೆಯುವುದು.

59.32 ನಗದು ಹಣ, ಬೆಲೆ ಬಾಳುವ ವಸ್ತುಗಳ ಮತ್ತು ಇತರೆ ಆಸ್ತಿಗಳ ಸುರಕ್ಷತೆಗಾಗಿ ಏರ್ಪಾಟು ಮಾಡುವುದು.ನಗದು ಹಣವನ್ನು, ಗೋದಾಮುಗಳನ್ನು, ಒತ್ತೆ ಇಟ್ಟ ವಸ್ತುಗಳನ್ನು, ತೊಡಗಣೆಗಳನ್ನು ಮುಂತಾದವುಗಳನ್ನು ಕನಿಷ್ಠ ತಿಂಗಳಿಗೊಮ್ಮೆಯಾದರೂ ಪರಿಶೀಲನೆಯಾಗುವಂತೆ ವ್ಯವಸ್ಥೆ ಮಾಡಿಸುವುದು.

59.33 ಸುಸ್ಥಿ ಸಾಲ ವಸೂಲಾತಿಗಾಗಿ ಕಾನೂನು ಕ್ರಮ ಜರುಗಿಸುವುದು.

59.34 ಸಾಲಗಳಿಗಾಗಿ ಸದಸ್ಯರು ನೀಡಿದ ಭದ್ರತೆಗಳು ಸಾಕಷ್ಟು ಇವೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದು ಹಾಗೂ ವಸೂಲಾತಿ ಸಾಧ್ಯವಿಲ್ಲದ ಮತ್ತು ಸಂಶಯಾಸ್ಪದ ಸಾಲದ ಪಟ್ಟಿಯನ್ನು ತಯಾರಿಸುವುದು.

59.35 ಯಾವ ಉದ್ದೇಶಕ್ಕಾಗಿ ಸಾಲಗಳನ್ನು ಕೊಡಲಾಗಿದೆಯೋ ಆ ಉದ್ದೇಶಕ್ಕಾಗಿಯೇ ವಿನಿಯೋಗವಾಗಿದೆಯೇ ಎಂಬುದನ್ನು ಪರಿಶೀಲಿಸಲು ವ್ಯವಸ್ಥೆ ಮಾಡುವುದು.

59.36 ವಿದ್ಯುಚ್ಛಕ್ತಿ, ನೀರು ಸರಬರಾಜು, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಇಂತಹ ಇತರ ಬಿಲ್ಲುಗಳನ್ನು ಸಂಬಂಧಿತ ನಿಬಂಧನೆಗಳ ಮೇಲೆ ಸಂಗ್ರಹಿಸಲು ವ್ಯವಸ್ಥೆ ಮಾಡುವುದು.

59.37 ಕಾಯಿದೆ ನಿಯಮಗಳಲ್ಲಿ ಹಾಗೂ ಉಪವಿಧಿಗಳಲ್ಲಿರುವಂತೆ ವಾರ್ಷಿಕ ಸಾಮಾನ್ಯ ಸಭೆ ಮತ್ತು ವಿಶೇಷ ಸಾಮಾನ್ಯ ಸಭೆಯಗಳನ್ನು ಕರೆಯುವುದು.

59.38 ಸದಸ್ಯರ ಪತ್ತಿನ ವಿಶ್ವಾಸಾರ್ಹತೆ (ಕ್ರೆಡಿಟ್ ವರ್ದಿನೆಸ್) ನಿರೂಪಿಸುವ ರಿಜಿಸ್ಟರನ್ನು ಅಥವಾ ಪಟ್ಟಿಯನ್ನು ತಯಾರಿಸಲು ವ್ಯವಸ್ಥೆ ಮಾಡುವುದು.

59.39 ಬ್ಯಾಂಕಿನ ನಗದು ಹಣಕ್ಕೆ, ಒತ್ತೆ ಇಟ್ಟ ವಸ್ತುಗಳಿಗೆ, ಬ್ಯಾಂಕಿನ ವಸ್ತುಗಳಿಗೆ, ನಗದು ಮತ್ತು ಇತರೆ ಆಸ್ತಿಗಳಿಗೆ ಕಳ್ಳತನ, ಬೆಂಕಿ ಮುಂತಾದವುಗಳಿಂದ ಒದಗತಕ್ಕ ನಷ್ಟದಿಂದ ರಕ್ಷಣೆಗಾಗಿ ವಿಮೆ ಮಾಡುವ ವ್ಯವಸ್ಥೆ ಮಾಡುವುದು.

59.40 ನಿಬಂಧಕರು, ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿಗದಿಪಡಿಸಿರುವ ನಮೂನೆಯೇನಾದರೂ ಇದ್ದಲ್ಲಿ ಅದರಂತೆ ಎಲ್ಲಾ ಲೆಕ್ಕಪತ್ರಗಳನ್ನು ಮತ್ತು ರಿಜಿಸ್ಟರ್‌ಗಳನ್ನು ಇಡಲು ವ್ಯವಸ್ಥೆ ಮಾಡುವುದು.

59.41 ಅವಶ್ಯವಿದ್ದಾಗ ಬ್ಯಾಂಕಿಗೆ ಸೂಕ್ತವಾದ ಪ್ರಾತಿನಿಧ್ಯ, ಪಡೆಯುವ ಸಲುವಾಗಿ ಇತರ ಬ್ಯಾಂಕುಗಳಿಗೆ ಸಂಘ ಸಂಸ್ಥೆಗಳ ಸಮಿತಿಗಳಿಗೆ ಮತ್ತು ಸರ್ವಸದಸ್ಯರ ಸಭೆಗಳಿಗೆ, ಸಮ್ಮೇಳನಗಳಿಗೆ ಮತ್ತು ವಿಚಾರ ಗೋಷ್ಠಿಗಳಲ್ಲಿ ಭಾಗವಹಿಸಲು ಪ್ರತಿನಿಧಿಗಳನ್ನು ಕಳುಹಿಸುವುದು.

59.42 ಬ್ಯಾಂಕಿಗೆ ಸಂಬಂಧಪಟ್ಟ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆಯುವುದು ಮತ್ತು ಅವುಗಳ ಚಂದಾ ಪಾವತಿ ಮಾಡುವುದು.

59.43 ಅಡಮಾನ, ಒತ್ತೆ ಮತ್ತು ಆಧಾರ ಹಾಗೂ ಜಾಮೀನಿಗೆ ಈಡು ಮಾಡಿದ ವಸ್ತುಗಳ ಅಥವಾ ಆಸ್ತಿಗಳ ಮತ್ತು ಭದ್ರತೆಗಳ ರಿಜಿಸ್ಟರನ್ನು ಇಡಲು ವ್ಯವಸ್ಥೆ ಮಾಡುವುದು ಮತ್ತು ನಿಯತಕಾಲಿಕವಾಗಿ ಅವುಗಳ ಮೌಲ್ಯಮಾಪನೆ ಮತ್ತು ಪರಿಶೀಲನೆ ಮಾಡಲು ವ್ಯವಸ್ಥೆಗೊಳಿಸುವುದು.

59.44 ಭಾರತೀಯ ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ಹೊರಡಿಸಬಹುದಾದ ನಿರ್ದೇಶನಗಳಿಗನುಗುಣವಾಗಿ ಬ್ಯಾಂಕಿನ ಕಛೇರಿಗಾಗಿ ಗುತ್ತಿಗೆ ಅಥವಾ ಗೇಣಿ ಒಪ್ಪಂದದ ಮೇಲೆ ಕಟ್ಟಡವನ್ನು ಪಡೆಯುವುದು ಹಾಗೂ ಬಾಡಿಗೆ ಮತ್ತು ಬಾಡಿಗೆ ಮುಂಗಡ ನಿರ್ಧರಿಸುವುದು.

59.45 ಸಾಲ ಮತ್ತು ಮುಂಗಡಗಳನ್ನು ನೀಡುವ ಸಲುವಾಗಿ ಯಾವುದೇ ವಾಣಿಜ್ಯ ಅಥವಾ ಸಹಕಾರ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಯೊಂದಿಗೆ ಪಾಲುಗೊಳ್ಳುವ ಒಪ್ಪಂದಗಳನ್ನು (ಕನ್ಸಾರ್ಟಿಯಂ ವ್ಯವಸ್ಥೆಯನ್ನು) ಮಾಡಿಕೊಳ್ಳುವುದು ಮತ್ತು ಪಾಲುಗೊಳ್ಳುವ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ನಿರ್ಣಯಿಸುವುದು.ಈ ಅಧಿಕಾರವನ್ನು ಯಾವುದೇ ಸಮಿತಿಗೆ ಅಥವಾ ಅಧಿಕಾರಿಗಳಿಗೆ ವಹಿಸಿಕೊಡಲಾಗದು.

59.46 ಮಂಡಳಿಯಲ್ಲಿ ಆಕಸ್ಮಿಕವಾಗಿ ತೆರವಾಗುವ ಸ್ಥಾನಗಳನ್ನು ಅಭಿಮತದಿಂದ ಸೇರಿಸಿಕೊಳ್ಳುವ (ಕೋ-ಆಪ್ಟ್) ಮೂಲಕ ಭರ್ತಿ ಮಾಡುವುದು.

59.47 ಸದಸ್ಯರಿಂದ ಬಾಕಿಯಿರುವ ಸುಸ್ತಿ ಸಾಲಗಳ ಪ್ರಕರಣಗಳನ್ನು ಪರಿಶೀಲಿಸಿ ಸಾಲ ಮರುಪಾವತಿ ಷರತ್ತುಗಳಲ್ಲಿ ಮಾರ್ಪಾಟುಗಳು ಅವಶ್ಯವಿದ್ದಲ್ಲಿ ಆ ಬಗ್ಗೆ ನಿರ್ಧರಿಸುವುದು.

59.48 ಬ್ಯಾಂಕಿನ ಉತ್ತಮ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಮುಖ್ಯ ಕಾರ್ಯನಿರ್ವಾಹಕರು ಮಾಡಬಹುದಾದ ಖರ್ಚುವೆಚ್ಚಗಳ ಮಿತಿಯನ್ನು ಗೊತ್ತುಪಡಿಸುವುದು.

59.49 ಸಹಕಾರ ಸಂಘಗಳ ಕಾಯ್ದೆ ನಿಯಮ ಮತ್ತು ಉಪವಿಧಿಗಳನ್ವಯ ಮಂಡಳಿಯ ಸದಸ್ಯರ ಚುನಾವಣೆಗೆ ವ್ಯವಸ್ಥೆ ಮಾಡುವುದು.

59.50 ಸಾಮಾನ್ಯ ನಿಕಾಯದ ಒಪ್ಪಿಗೆಗೊಳಪಟ್ಟು ಈ ಕೆಳಕಂಡ ಪೂರಕನಿಯಮಗಳನ್ನು ರೂಪಿಸಲು, ಬದಲಾಯಿಸಲು, ಪುನರ್ ಪರಿಶೀಲಿಸಲು ಅಥವಾ ತೆಗೆದುಹಾಕಲು ಮಂಡಲಿಯು ಅಧಿಕಾರ ಹೊಂದಿರತಕ್ಕದ್ದು;
(ಅ) ಸಿಬ್ಬಂದಿ ಸೇವಾ ನಿಯಮಗಳು

(ಆ) ಆಡಳಿತ ಹಾಗೂ ವ್ಯವಹಾರ ನಿಯಮಗಳು (ಶಾಖೆಗಳ ಆಡಳಿತ ಹಾಗೂ ನಿಯಂತ್ರಣಗಳನ್ನು ಒಳಗೊಂಡಂತೆ)

(ಇ) ಮರಣೋತ್ತರ ಸಹಾಯ ನಿಧಿ, ಸದಸ್ಯರ ಕಲ್ಯಾಣ ನಿಧಿ ನಿಯಮಗಳು.

59.51 ಭಾರತೀಯ ರಿಸರ್ವ್ ಬ್ಯಾಂಕು ನೀಡುವ ಸೂಚನೆಗಳಿಗನುಸಾರವಾಗಿ ಬ್ಯಾಂಕಿಂಗ್ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಪೂರಕನಿಯಮಗಳನ್ನು ರೂಪಿಸಲು, ಬದಲಾಯಿಸಲು, ಪುನರ್‌ಪರಿಶೀಲಿಸಲು ಅಥವಾ ತೆಗೆದು ಹಾಕಲು ಮಂಡಳಿಯು ಅಧಿಕಾರ ಹೊಂದಿದೆ.

59.52 ಆಯಾ ತಿಂಗಳ ಆದಾಯ ಖರ್ಚುವೆಚ್ಚಗಳನ್ನು ಪರಿಶೀಲಿಸುವುದು ಹಾಗೂ ಒಪ್ಪಿಗೆ ನೀಡುವುದು.

59.53 ಬ್ಯಾಂಕಿನ ಸ್ಥಾಪನೆಯ ಉದ್ದೇಶಗಳನ್ನು ಸಾಧಿಸಲು ಅಗತ್ಯವಾದ / ಅನುಕೂಲವಾದ ಇತರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು

59.54 ಲೆಕ್ಕಪರಿಶೋಧಕನಿಗೆ ಅಗತ್ಯವಾದ ಎಲ್ಲಾ ಮಾಹಿತಿ, ಲೆಕ್ಕಗಳನ್ನು ಮತ್ತು ಪುಸ್ತಕಗಳನ್ನು ಒದಗಿಸಿ ಸಕಾಲದಲ್ಲಿ ಲೆಕ್ಕಪರಿಶೋಧನೆಯು ಮುಕ್ತಾಯಗೊಳಿಸಲು ಪೂರ್ಣ ಸಹಕಾರ ಮತ್ತು ನೆರವನ್ನು ನೀಡಿ, ಪ್ರತಿ ವರ್ಷ ಸೆಪ್ಟಂಬರ್ 1ನೇ ದಿನದೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪತ್ರಗಳ ಪರಿಶೋಧನಾ ವರದಿಯನ್ನು ಪಡೆಯತಕ್ಕದ್ದು;

59.55 ಮಂಡಳಿಯ ಉಳಿದ ಅವಧಿಯು ಅದರ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಇದ್ದಾಗ, ಮಂಡಳಿಯಲ್ಲಿ ಯಾವುದೇ ಕಾರಣದಿಂದ ಉದ್ಭವವಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಅಭಿಮತದಿಂದ ಸೇರಿಸಿಕೊಳ್ಳುವ (ಕೋ–ಆಪ್ಷನ್) ಮೂಲಕ ಭರ್ತಿ ಮಾಡುವುದು;

59.56 ಭಾರತೀಯ ರಿಸರ್ವ್ ಬ್ಯಾಂಕು ನೀಡುವ ಸೂಚನೆಗಳಿಗನುಸಾರವಾಗಿ–

(1) ನಿಧಿಗಳ ತೊಡಗಿಸುವಿಕೆಗೆ ಸಂಬಂಧಪಟ್ಟಂತೆ;
(2) 'ನಿಮ್ಮ ಗ್ರಾಹಕರನ್ನು ತಿಳಿಯಿರಿ (ಕೆ.ವೈ.ಸಿ)' ಸಂಬಂಧಪಟ್ಟಂತೆ;
ಪೂರಕನಿಯಮಗಳನ್ನು/ನೀತಿಗಳನ್ನು ರೂಪಿಸಲು, ಬದಲಾಯಿಸಲು, ಪುನರ್ ಪರಿಶೀಲಿಸಲು ಅಥವಾ ತೆಗೆದು ಹಾಕಲು ಮಂಡಳಿಯು ಅಧಿಕಾರ ಹೊಂದಿರತಕ್ಕದ್ದು;

59.57 ಬ್ಯಾಂಕಿನ ಹಣವನ್ನು ದುರ್ವಿನಿಯೋಗ ಅಥವಾ ಬ್ಯಾಂಕಿಗೆ ನಷ್ಟವುಂಟುಮಾಡುವ ಮೂಲಕ ಸಿವಿಲ್ ಮತ್ತು ಕ್ರಿಮಿನಲ್ ಹೊಣೆಗಾರಿಕೆಗೆ ಗುರಿಯಾಗಿರುವಂಥ ಯಾರೇ ವ್ಯಕ್ತಿಯ ವಿರುದ್ಧ ಸಂದರ್ಭಾನುಸಾರ ಸಿವಿಲ್, ಕ್ರಿಮಿನಲ್ ಮತ್ತು ಶಿಸ್ತುಕ್ರಮವನ್ನು ತೆಗೆದುಕೊಳ್ಳುವುದು;

59.58 ಕಾಯ್ದೆಯ ಕಲಂ 27ಬಿ ಮೇರೆಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಪ್ರತಿವರ್ಷ ಸೆಪ್ಟಂಬರ್ 30ನೇ ದಿನದೊಳಗಾಗಿ ರಿಜಿಸ್ಟಾರನಿಗೆ ಸಲ್ಲಿಸತಕ್ಕದ್ದು;

59.59 ಕಾಯ್ದೆ ಕಲಂ 39ಎಎ ಅಡಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಮಂಡಳಿಗೆ ಚುನಾವಣೆಗಳನ್ನು ನಡೆಸಲು ವ್ಯವಸ್ಥೆ ಮಾಡುವುದು ಹಾಗೂ ಅವಶ್ಯಕವಾದ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಸಕಾಲದಲ್ಲಿ ಒದಗಿಸಿ ನೆರವು ನೀಡತಕ್ಕದ್ದು;

59.60 ಕಾಯ್ದೆ, ನಿಯಮಗಳ ಮತ್ತು ಉಪವಿಧಿಗಳ ಮೇರೆಗೆ ಅಧ್ಯಕ್ಷ ಮತ್ತು ಇತರ ಪದಾಧಿಕಾರಿಗಳನ್ನು ಚುನಾಯಿಸುವುದು;

59.61 ಮುಖ್ಯಕಾರ್ಯನಿರ್ವಾಹಕನ ಹುದ್ದೆಯು ಖಾಲಿ ಇದ್ದಾಗ ಅಥವಾ ರಜೆಯ ಮೇಲೆ ಆತನ ಅನುಪಸ್ಥಿತಿ ಇರುವಾಗ, ಮುಖ್ಯಕಾರ್ಯನಿರ್ವಾಹಕನ ಪ್ರಚಲಿತ ದಿನನಿತ್ಯದ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಆತನ ನಿಕಟ ಕೆಳಗಿನ ಅಧಿಕಾರಿಯು ಅಥವಾ ಅಂಥ ನಿಕಟ ಕೆಳಗಿನ ಅಧಿಕಾರಿಯ ಮೇಲೆ ಗುರುತರವಾದ ಆರೋಪಗಳಿದ್ದು ಆ ಬಗ್ಗೆ ಶಿಸ್ತಿನ ವಿಚಾರಣೆ ಬಾಕಿ ಇದ್ದಲ್ಲಿ, ಅಂಥ ನಿಕಟ ಕೆಳಗಿನ ಅಧಿಕಾರಿಯ ನಿಕಟ ಕೆಳಗಿನ ಅಧಿಕಾರಿಯು ನಿರ್ವಹಿಸುವಂತೆ ವ್ಯವಸ್ಥೆ ಮಾಡತಕ್ಕದ್ದು;

59.62 ರಿಸರ್ವ್ ಬ್ಯಾಂಕು / ಸರ್ಕಾರ ಹೊರಡಿಸಿದ ಸುತ್ತೋಲೆಗಳನ್ನು ಮತ್ತು ನೀತಿಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಮಂಡಳಿಯ ಪ್ರತಿ ನಿರ್ದೇಶಕನು ಓದಿ ಅರ್ಥ ಮಾಡಿಕೊಳ್ಳುವಂತೆ ನೋಡಿಕೊಳ್ಳತಕ್ಕದ್ದು. ಹಾಗೂ ಸದರಿ ಸುತ್ತೋಲೆ ಮತ್ತು ಕಾಗದ ಪತ್ರಗಳನ್ನು ಮಂಡಳಿಯ ಸಭೆಯಲ್ಲಿ ಮಂಡಿಸತಕ್ಕದ್ದು;

59.63 ಬ್ಯಾಂಕಿನ ಉನ್ನತ ವ್ಯವಸ್ಥಾಪನೆಗಾಗಿ ತನ್ಮೂಲಕ ಬ್ಯಾಂಕು ನಿರ್ದಿಷ್ಟ ಕ್ಷೇತ್ರಗಳಲ್ಲಿ ಮೌಲಿಕ ಕೊಡುಗೆಯನ್ನು ನೀಡುವ ದೃಷ್ಟಿಯಿಂದ ಬ್ಯಾಂಕಿನ ಯಾವುದೇ ನಿರ್ದೇಶಕನು, ಮುಖ್ಯಕಾರ್ಯನಿರ್ವಾಹಕನು ಅಥವಾ ಸದಸ್ಯನು ನೀಡುವ ಧನಾತ್ಮಕ ಸಲಹೆಗಳನ್ನು ಒಪ್ಪಿಕೊಂಡು ಅನುಷ್ಠಾನಗೊಳಿಸುವುದು;

59.64 ಅವಶ್ಯಕತೆ ಇರುವಷ್ಟರ ಮಟ್ಟಿಗೆ ಸಹಕಾರ ಕಾಯ್ದೆ ಮತ್ತು ನಿಯಮಗಳ ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರ ಸಂಘಗಳಿಗೆ ಅನ್ವಯವಾಗುವಂತೆ) ರ ಉಪಬಂಧಗಳನ್ನು ಅರಿತುಕೊಳ್ಳುವುದು;

59.65 ಬ್ಯಾಂಕಿನ ವಿಸ್ತೃತವಾದ ಉದ್ದೇಶಗಳ, ಚಟುವಟಿಕೆಗಳ ಮತ್ತು ನೀತಿಗಳ ಬಗ್ಗೆ ಹಾಗೂ ಬ್ಯಾಂಕಿನ ಉಪವಿಧಿಗಳ, ನಿಯಮಗಳ ಮತ್ತು ನಿಬಂಧನೆಗಳ ಬಗ್ಗೆ ಅರಿತುಕೊಂಡಿರುವುದು;

59.66 ಮಂಡಳಿಯ ಸಭೆಗಳಿಗೆ ಸಂಬಂಧಪಟ್ಟ ಅಜೆಂಡಾ ಟಿಪ್ಪಣಿ ಕಾಗದ ಪತ್ರಗಳ ಗೌಪ್ಯತೆಯನ್ನು ಕಾಪಾಡುವುದು;

59.67 ಬ್ಯಾಂಕಿನ ಕಾರ್ಯನಿರ್ವಹಣೆಯ ಕೆಳಗಿನ ಸಂಗತಿಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುವುದು;

1) ರಿಸರ್ವ್ ಬ್ಯಾಂಕಿನ / ಸರ್ಕಾರದ ವಿತ್ತ ಮತ್ತು ಕ್ರೆಡಿಟ್ ನೀತಿಗಳನ್ನು ಪಾಲಿಸುವುದು;

2) ನಗದು ಮೀಸಲು ಅನುಪಾತ ಮತ್ತು ಶಾಸನಾತ್ಮಕ ದ್ರವಾಸ್ತಿ ಅನುಪಾತ (ಸಿಆರ್‌ಆರ್ ಮತ್ತು ಎಸ್‌ಎಲ್‌ಆರ್) ಗಳ ನಿರ್ವಹಣೆ;

3) ಬ್ಯಾಂಕಿನ ಸಿಆರ್‌ಎಆರ್ ಮಟ್ಟದ ನಿರ್ವಹಣೆಯ ಬಗ್ಗೆ ನಿಗಾ ಇಡುವುದು;

4) ನಿಧಿಗಳ ಸಮರ್ಥ ನಿರ್ವಹಣೆ ಮತ್ತು ಲಾಭದಾಯಕತೆಯ ಸುಧಾರಣೆ;

5) ನಿಷ್ಕ್ರಿಯ ಆಸ್ತಿಗಳ ಬಗ್ಗೆ ಆದಾಯ ಗುರುತಿಸುವಿಕೆ, ಆಸ್ತಿಗಳ ವರ್ಗೀಕರಣ ಮತ್ತು ನಿಷ್ಕ್ರಿಯ ಆಸ್ತಿಗಳ ಮೇಲೆಪ್ರವಿಶನಿಂಗ್ ಮಾನದಂಡಗಳ ಪಾಲನೆ;

6) ಆದ್ಯತಾ ವಲಯ ಮತ್ತು ದುರ್ಬಲ ವರ್ಗದವರಿಗೆ ಸಾಲ ನೀಡಿಕೆ;

7) ಮೋಸ ಮತ್ತು ಹಣ ದುರುಪಯೋಗದ ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ತೆಗೆದುಕೊಂಡ ಕ್ರಮ ಮತ್ತು ಅಂಥ ಮೋಸ ಮತ್ತು ಹಣ ದುರುಪಯೋಗ ನಡೆಯದಂತಿರಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ನಿಗಾ ಇಡುವುದು;

8) ಆಂತರಿಕ ನಿಯಂತ್ರಣ ವ್ಯವಸ್ಥೆ ಮತ್ತು ಹೌಸ್‌ಕೀಪಿಂಗ್ (ಲೆಕ್ಕಪತ್ರಗಳ ಸಮರ್ಪಕ ನಿರ್ವಹಣೆ ಮತ್ತು ನಿಯತಕಾಲಿಕ ಹೊಂದಾಣಿಕೆ) ಗಳ ಬಲವರ್ಧನೆ;

9) ಎಲ್ಲ ಕಾಲಗಳಲ್ಲಿಯೂ ಉನ್ನತ ಗ್ರಾಹಕ ಸೇವೆಯನ್ನು ಒದಗಿಸುವಂತೆ ಮತ್ತು ಗ್ರಾಹಕರಿಗೆ ಬದ್ಧತೆಯ ಸಂಹಿತೆಯನ್ನು ಅಳವಡಿಸುವಂತೆ ನೋಡಿಕೊಳ್ಳುವುದು;

10) ಉತ್ತಮ ವ್ಯವಸ್ಥಾಪನಾ ಮಾಹಿತಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು;

11) ಗಣಕೀಕರಣ ಮತ್ತು ವಿದ್ಯುನ್ಮಾನ ಪಾವತಿ ವ್ಯವಸ್ಥೆಯಲ್ಲಿ ಭಾಗವಹಿಸುವಿಕೆ;

12) ಬ್ಯಾಂಕಿನ ಸ್ಥಾಪನೆಯ ಉದ್ದೇಶಗಳನ್ನು ಸಾಧಿಸಲು ಅಗತ್ಯವಾದ / ಅನುಕೂಲವಾದ ಇತರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು;

**60. ಮುಖ್ಯಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು :**

ಮುಖ್ಯ ಕಾರ್ಯನಿರ್ವಾಹಕರು ಕಾಯ್ದೆಯ ಕಲಂ 29(ಜಿ) ಪ್ರಕಾರ ನೇಮಕವಾದ ಪೂರ್ಣಾವಧಿಯ ವೇತನ ಪಡೆಯುವ ಬ್ಯಾಂಕಿನ ಅಧಿಕಾರಿಯಾಗಿರುತ್ತಾರೆ.ಮಂಡಳಿಯು ಆಗಿಂದಾಗ್ಗೆ ವಹಿಸುವ ಕರ್ತವ್ಯಗಳ ಜೊತೆಗೆ ಅವರ ಕರ್ತವ್ಯ ಮತ್ತು ಅಧಿಕಾರವು ಈ ಕೆಳಗಿನಂತೆ ಇರತಕ್ಕದ್ದು.

60.1 ಕಾಯ್ದೆಯ ಕಲಂ 29 ಎಫ್ (4) ರ ಪ್ರಕಾರ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಇತರೆ ಪದಾಧಿಕಾರಿಗಳ ಚುನಾವಣೆಗಾಗಿ ಮಂಡಳಿಯ ಸಭೆಯನ್ನು ಕರೆದು ಸಭೆಯಲ್ಲಿ ಹಾಜರಿದ್ದು ನಡವಳಿಕೆಗಳನ್ನು ದಾಖಲು ಮಾಡುವುದು.

60.2 ಬ್ಯಾಂಕಿನ ಸಾಮಾನ್ಯ ಸಭೆ, ಮಂಡಳಿಯ ಸಭೆ ಮತ್ತು ಉಪಸಮಿತಿಗಳ ಸಭೆಗಳನ್ನು ಸಮಾವೇಶಗೊಳಿಸಿ ಹಾಜರಾಗುವುದು ಹಾಗೂ ಎಲ್ಲಾ ಸಭೆಗಳ ನಿರ್ಣಯಗಳನ್ನು ನಡವಳಿಕೆಯ ಪುಸ್ತಕದಲ್ಲಿ ದಾಖಲು ಮಾಡಿ ಅದರಲ್ಲಿ ಸಭೆಯ ಅಧ್ಯಕ್ಷರೊಂದಿಗೆ ಸಹಿ ಮಾಡುವುದು.ಈ ನಿರ್ಣಯಗಳನ್ನು ಶೀಘ್ರವಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳುವುದು.

60.3 ಬ್ಯಾಂಕಿನ ಮುದ್ರೆ, ಭದ್ರತೆಗಳು, ದಸ್ತಾವೇಜು ಮತ್ತು ಇತರೆ ಮುಖ್ಯ ಕಾಗದ ಪತ್ರಗಳನ್ನು ಸುರಕ್ಷೆ / ಅಭಿರಕ್ಷೆ (ಸೇಫ್ ಕಸ್ಟಡಿ) ಯಲ್ಲಿಡಲು ವ್ಯವಸ್ಥೆ ಮಾಡುವುದು.

60.4 ಬ್ಯಾಂಕಿನ ಪರವಾಗಿ ಪತ್ರ ವ್ಯವಹಾರ ನಡೆಸುವುದು ಮತ್ತು ಮೇಲ್ವಿಚಾರಕನಾಗಿರುವುದು (ಕಸ್ಟೋಡಿಯನ್)

60.5 ಬ್ಯಾಂಕಿನ ಪರವಾಗಿ ದಾವ ಹಾಕುವುದು, ಬ್ಯಾಂಕಿನ ವಿರುದ್ಧ ಹಾಕಲ್ಪಡುವ ದಾವೆಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವುದು ಹಾಗೂ ಬ್ಯಾಂಕಿನ ಎಲ್ಲಾ ಕಾನೂನು ವ್ಯವಹರಣೆಗಳಲ್ಲಿ ಪ್ರತಿನಿಧಿಸುವುದು.

60.6 ಸಾಲ ಭದ್ರತೆಗಾಗಿ ಬಂದಿರುವ ಚರ ಮತ್ತು ಸ್ಥಿರ ಆಸ್ತಿಗಳ ಬೆಲೆಯನ್ನು ನಿರ್ಧರಿಸಲು ವ್ಯವಸ್ಥೆ ಮಾಡುವುದು.

60.7 ವೇತನ ಸಿಬ್ಬಂದಿ ವರ್ಗದವರಿಗೆ ಕೆಲಸ ಹಂಚಿ ಮಾರ್ಗದರ್ಶನ ನೀಡುವುದು, ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಣದಲ್ಲಿಟ್ಟುಕೊಳ್ಳುವುದಲ್ಲದೆ, ಕರ್ತವ್ಯ ನಿರ್ಲಕ್ಷ್ಯದ ಪ್ರಕರಣಗಳಲ್ಲಿ ಅಗತ್ಯ ಶಿಸ್ತಿನ ಕ್ರಮ ಜರುಗಿಸುವುದು/ ಮಂಡಳಿಯಿಂದ ನಿಯೋಜಿಸಲ್ಪಟ್ಟ ಅಧಿಕಾರಕ್ಕೆ ಮೀರಿದ ಶಿಸ್ತಿನ ಕ್ರಮಗಳ ಬಗ್ಗೆ ಮಂಡಳಿಗೆ ತಿಳಿಸುವುದು.

60.8 ಸಿಬ್ಬಂದಿ ವರ್ಗದವರ ರಜೆ ಮಂಜೂರು ಮಾಡುವುದು ಹಾಗೂ ಅವರ ಪ್ರವಾಸಭತ್ಯೆ ಬಿಲ್ಲುಗಳ, ವೈದ್ಯಕೀಯ ಭತ್ಯೆ ಬಿಲ್ಲುಗಳ ಮತ್ತು ಇತರೆ ಬಿಲ್ಲುಗಳ ಪಾವತಿಗೆ ಮಂಜೂರಾತಿ ನೀಡುವುದು.

60.9 ಸಿಬ್ಬಂದಿ ವರ್ಗದವರ ವೇತನ ಪಾವತಿ, ಅಂಚೆ ವೆಚ್ಚ, ಬಾಡಿಗೆ, ವಿದ್ಯುತ್ ಬಿಲ್ಲುಗಳನ್ನು ಮಂಜೂರು ಮಾಡುವುದು, ಸಾದಿಲ್ವಾರು ಖರ್ಚು ಮತ್ತು ಇತರೇ ಬಿಲ್ಲುಗಳನ್ನು ವಾರ್ಷಿಕ ಅಂದಾಜು ವೆಚ್ಚಕ್ಕೆ ಒಳಪಟ್ಟಂತೆ ಮಂಜೂರು ಮಾಡುವುದು.

60.10 ಬ್ಯಾಂಕಿನ ದಿನನಿತ್ಯದ ಆಡಳಿತದಲ್ಲಿ ಜಾಗರೂಕರಾಗಿರುವುದರ ಜೊತೆಗೆ ಬ್ಯಾಂಕಿನ ಹಿತದೃಷ್ಟಿಯಿಂದ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಶ್ರಮಿಸುವುದು.

60.11 ಬ್ಯಾಂಕಿನ ಕಛೇರಿ ಮತ್ತು ಶಾಖೆಗಳಿಗೆ ಭೇಟಿ ನೀಡಿ ಪರಿವೀಕ್ಷಿಸಿ ಮಂಡಳಿಗೆ ವರದಿ ನೀಡುವುದು.

60.12 ನಗದು ಶಿಲ್ಕು, ಭದ್ರತೆಗಳನ್ನು ಮತ್ತು ಬೆಲೆ ಬಾಳುವ ವಸ್ತುಗಳನ್ನು ತಿಂಗಳಿಗೆ ಒಮ್ಮೆಯಾದರೂ ಪರೀಕ್ಷಿಸಿ ತಾಳೆ ನೋಡುವುದು.

60.13 ನೌಕರರ ಸೇವಾ ನಿಯಮಾವಳಿಗೊಳಪಟ್ಟು ಕೆಳಹಂತದ ಸಿಬ್ಬಂದಿಯವರಿಗೆ (ಸಬ್‌ಸ್ಟಾಫ್) ದಂಡದ ರೂಪದಲ್ಲಿ ಶಿಕ್ಷೆ ವಿಧಿಸುವುದು. ಹಾಗೆ ಶಿಕ್ಷೆಗೆ ಒಳಗಾದವರು ಮಂಡಲಿಗೆ ಮೇಲ್ಮನವಿ ಸಲ್ಲಿಸಲು ಹಕ್ಕು ಇರುತ್ತದೆ.

60.14 ಕಾಯ್ದೆ ಮತ್ತು ನಿಯಮಗಳಲ್ಲಿ, ಉಪವಿಧಿಗಳಲ್ಲಿ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಆರ್ಥಿಕ ನೆರವು ನೀಡುವ ಹಣಕಾಸು ಸಂಸ್ಥೆಗಳು ನಿಗದಿ ಪಡಿಸಿದ ಎಲ್ಲಾ ಖಾತೆ ಪುಸ್ತಕಗಳನ್ನು, ರಿಜಿಸ್ಟರುಗಳನ್ನು ಹಾಗೂ ದಸ್ತಾವೇಜುಗಳನ್ನು ಕ್ರಮಬದ್ಧವಾಗಿ ಇಡುವುದು.

60.15 ಸಾಲಗಳ ಮತ್ತು ಮುಂಗಡಗಳ ಮಂಜೂರಾತಿಗಾಗಿ ಬರುವ ಅರ್ಜಿಗಳನ್ನು ಸ್ವೀಕರಿಸುವುದು.ಮತ್ತು ಅವುಗಳನ್ನು ಪರಿಶೀಲಿಸಿದ ನಂತರ ತನ್ನ ಸ್ಪಷ್ಟ ಅಭಿಪ್ರಾಯದೊಡನೆ ವಿವರವಾದ ಶಿಫಾರಸಿನೊಂದಿಗೆ ವರದಿ ಸಹಿತ ಮಂಡಳಿಯ ಅಥವಾ ಉಪಸಮಿತಿಯ ತೀರ್ಮಾನಕ್ಕೆ ಮಂಡಿಸುವುದು.

60.16 ಸದಸ್ಯತ್ವಕ್ಕಾಗಿ ಹೆಚ್ಚುವರಿ ಷೇರುಗಳಿಗಾಗಿ ಮತ್ತು ಷೇರುವರ್ಗಾವಣೆಗಾಗಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಿ ತಮ್ಮ ವರದಿ ಹಾಗೂ ಶಿಫಾರಸ್ಸಿನೊಂದಿಗೆ ಮಂಡಳಿಯ ಸಭೆಯಲ್ಲಿ ಮಂಡಿಸುವುದು.

60.17 ನಾಮಮಾತ್ರ ಸದಸ್ಯತ್ವಕ್ಕಾಗಿ ಸಲ್ಲಿಸಲಾದ / ಸ್ವೀಕೃತವಾದ ಅರ್ಜಿಗಳನ್ನು ಪುರಸ್ಕರಿಸಿ ಸದಸ್ಯತ್ವ ನೀಡಿ ನಂತರ ಅವುಗಳನ್ನು ಮಂಡಳಿಯ ಸ್ಥಿರೀಕರಣಕ್ಕೆ ಮಂಡಿಸುವುದು.

60.18 ಚೆಕ್ಕುಗಳನ್ನು, ಹಣಸಂದಾಯಗಳನ್ನು, ಮನಿಆರ್ಡರ್‌ಗಳನ್ನು ಮತ್ತು ವಿಮಾ ಮಾಡಿದ ಮಾಹಿತಿಗಳನ್ನು ಒಳಗೊಂಡ ಪತ್ರಗಳನ್ನು ಮತ್ತು ಇತರೆ ದಾಖಲಾತಿಗಳನ್ನು ಸ್ವೀಕರಿಸುವುದು ಮತ್ತು ಅವುಗಳನ್ನು ಕ್ರಮವಾಗಿ ದಾಖಲಿಸಲು ಏರ್ಪಾಡು ಮಾಡುವುದು.

60.19 ಬ್ಯಾಂಕಿನ ಸದಸ್ಯರುಗಳಿಗೆ ಮತ್ತು ಗ್ರಾಹಕರಿಗೆ ಅಗತ್ಯವಾದ ಮತ್ತು ಸಮಂಜಸವಾದ ಆದರೆ ರಹಸ್ಯವಲ್ಲದ ಮಾಹಿತಿಯನ್ನು ಒದಗಿಸುವುದು ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದ ರಹಸ್ಯವನ್ನು ಕಾಪಾಡಲು ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಯವರು ಬದ್ಧರಾಗಿರುತ್ತಾರೆ.

60.20 ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಂತೆ ಮತ್ತು ಮಂಡಳಿಯ ನಿರ್ಣಯಗಳಂತೆ ಠೇವಣಿಯನ್ನು ಸ್ವೀಕರಿಸುವುದು ಹಾಗೂ ರಸೀದಿಗಳನ್ನು ಪಾಸುಪುಸ್ತಕಗಳನ್ನು ಮತ್ತು ಖಾತೆ ಪಟ್ಟಿಗಳನ್ನು ನೀಡುವ ವ್ಯವಸ್ಥೆ ಮಾಡುವುದು.

60.21 ತಾನು ಸ್ವೀಕರಿಸುವ ಅಥವಾ ಮಂಡಳಿಯವರು ವಹಿಸುವ ಬ್ಯಾಂಕಿನ ನಗದು ಶಿಲ್ಕು , ಚರಸ್ಥಿರಸ್ವತ್ತುಗಳು, ಭದ್ರತಾ ಪತ್ರಗಳು ದಾಖಲೆಗಳು, ಪೀಠೋಪಕರಣಗಳು, ಜಡವಸ್ತುಗಳು ಮತ್ತು ಬ್ಯಾಂಕಿನ ಇತರೆ ಆಸ್ತಿಗಳನ್ನು ರಕ್ಷಿಸುವ ಪಾಲಕನಾಗಿರುವುದು.

60.22 ನಗದು ಶಿಲ್ಕು ಸರಿಯಾಗಿದೆ ಎಂಬ ಕುರುಹಾಗಿ ನಗದು ಪುಸ್ತಕದಲ್ಲಿ ಮೇಲುರುಜು ಮಾಡುವುದು (ಕೌಂಟರ್ ಸೈನ್) ಮತ್ತು ಅಧಿಕಾರ ಹೊಂದಿದ ಯಾವುದೇ ವ್ಯಕ್ತಿಯ ಎದುರು ನಗದು ತಪಾಸಣೆಗಾಗಿ ಹಾಜರು ಪಡಿಸುವುದು.

60.23 ಬ್ಯಾಂಕಿನ ಪರವಾಗಿ ಹಣವನ್ನು ವಿತರಣೆ ಮಾಡಲು ವ್ಯವಸ್ಥೆಗೊಳಿಸುವುದು.

60.24 ಮಂಡಳಿಯವರು ನಿಗದಿಪಡಿಸಿದ ಮಿತಿಯವರೆಗೆ ಬ್ಯಾಂಕಿನ ಸಾವಧಿಯ ಠೇವಣಿ ಮತ್ತು ಇತರೇ ಠೇವುಗಳ ಮೇಲೆ ಚಿನ್ನಾಭರಣಗಳ ಮೇಲೆ ಸಾಲವನ್ನು ಮಂಜೂರು ಮಾಡುವುದು ಮತ್ತು ಚರಸ್ಥಿರಾಸ್ತಿಗಳನ್ನು ಹೊರತುಪಡಿಸಿ ಮಂಡಳಿಯಿಂದ ಅಂಗೀಕೃತವಾದ ಭದ್ರತೆಗಳ ಮೇಲೆ ಸಾಲಗಳನ್ನು ಮಂಜೂರು ಮಾಡುವುದು.ಈ ಅಧಿಕಾರವನ್ನು ಮುಖ್ಯ ಕಾರ್ಯನಿರ್ವಾಹಕರು ಮಂಡಳಿಯವರ ಪೂರ್ವಾನುಮತಿಯೊಂದಿಗೆ ಶಾಖಾ ವ್ಯವಸ್ಥಾಪಕರಿಗೂ ವಹಿಸಬಹುದು.ಹೀಗೆ ಮಂಜೂರು ಮಾಡಿ ನೀಡಿದ ಸಾಲಗಳ ಪಟ್ಟಿಯನ್ನು ಮಂಡಳಿಯವರ ಮುಂದಿನ ಸಭೆಯಲ್ಲಿ ಸ್ಥಿರೀಕರಣಕ್ಕಾಗಿ ಮಂಡಿಸತಕ್ಕದ್ದು.

60.25 ಮಂಡಳಿಯವರು ಕಾಲಕಾಲಕ್ಕೆ ನಿಬಂಧಕರ ಒಪ್ಪಿಗೆ ಮೇರೆಗೆ ನಿಗದಿಪಡಿಸಿದ ಸಿಬ್ಬಂದಿ ವೃಂದಬಲ ಮತ್ತು ಅವುಗಳಿಗೆ ಅನ್ವಯವಾಗುವ ವೇತನ ಮತ್ತು ಭತ್ಯೆಗಳ ಬಗ್ಗೆ ಹೊರಡಿಸುವ ಆದೇಶಗಳನ್ನು ಆಚರಣೆಗೆ ತರುವುದು.

60.26 ಅವಶ್ಯವಿದ್ದಲ್ಲಿ, ಅಧ್ಯಕ್ಷರ ಒಪ್ಪಿಗೆಯನ್ನು ಪಡೆದು ಸಿಬ್ಬಂದಿಯವರ ವರ್ಗಾವಣೆಗೆ ಆದೇಶಗಳನ್ನು ಹೊರಡಿಸುವುದು.

60.27 ಮಂಡಳಿಯವರ ನೀತಿ ನಿರೂಪಣೆಗಳಿಗನುಸಾರವಾಗಿ ಬ್ಯಾಂಕಿನ ಹಣವನ್ನು ತೊಡಗಿಸಲು ವ್ಯವಸ್ಥೆಗೊಳಿಸುವುದು ಮತ್ತು ಈ ಬಗ್ಗೆ ಮಂಡಳಿಗೆ ವರದಿ ಸಲ್ಲಿಸುವುದು.

60.28 ಆಗಿಂದಾಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆಯಿಂದ ಬಂದ ಆದೇಶ, ನಿರ್ದೇಶನಗಳು ಮತ್ತು ಸೂಚನೆಗಳನ್ನೊಳಗೊಂಡ ಮುಖ್ಯ ಪತ್ರ ವ್ಯವಹಾರಗಳನ್ನು ಮಂಡಳಿಯ ಗಮನಕ್ಕೆ ತರುವುದು.

60.29 ಮುಖ್ಯ ಕಾರ್ಯನಿರ್ವಾಹಕರ ಗೈರುಹಾಜರಿಯಲ್ಲಿ ಅವರ ಕರ್ತವ್ಯ ಪಾಲನೆಗಾಗಿ ಅಧ್ಯಕ್ಷರು ನೇಮಿಸಿದ ಬೇರೆ ಯಾವುದೇ ಹಿರಿಯ ಅಧಿಕಾರಿಗೆ ತಾತ್ಕಾಲಿಕವಾಗಿ ಪ್ರಭಾರವನ್ನು ವಹಿಸಿಕೊಡುವುದು.

60.30 ಅಧ್ಯಕ್ಷರ ಜೊತೆ ಷೇರು ಪ್ರಮಾಣ ಪತ್ರಗಳಿಗೆ ರುಜು ಮಾಡುವುದು.

60.31 ಬ್ಯಾಂಕಿನ ವ್ಯವಹಾರದ ಸುಗಮ ಕಾರ್ಯನಿರ್ವಹಣೆಗಾಗಿ ಹಣ ಸಂದಾಯದ ರಶೀದಿಗಳನ್ನು, ಓಚರುಗಳನ್ನು ಮತ್ತು ಇತರೇ ದಾಖಲೆಗಳನ್ನು ಪಾರಣೆ ಮಾಡುವ ವ್ಯವಸ್ಥೆ ಮಾಡುವುದು.

60.32 ಸಿಬ್ಬಂದಿ ತರಬೇತಿ ಮತ್ತು ಸಿಬ್ಬಂದಿ ಕಾರ್ಯನಿರ್ವಹಣೆಯ ಅನುಕ್ರಮ ಬದಲಾವಣೆಗೆ ವ್ಯವಸ್ಥೆ ಮಾಡುವುದು.

60.33 ಬ್ಯಾಂಕಿನ ಉಪವಿಧಿಗಳ, ವ್ಯವಹಾರ ನಿಯಮಗಳ ಮತ್ತು ಮಂಡಳಿಯ ನಿರ್ದೇಶನದ ಪ್ರಕಾರ ಇವರಿಗೆ ಪ್ರದತ್ತವಾಗಿರುವ / ವಹಿಸಲ್ಪಡುವ ವಿವಿಧ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ಅಧಿಕಾರಗಳನ್ನು ಚಲಾಯಿಸುವುದು.

60.34 ಕಾಯ್ದೆ, ನಿಯಮಗಳ ಮತ್ತು ಉಪವಿಧಿಗಳ ಅನ್ವಯ ಮತ್ತು ರಿಜಿಸ್ಟ್ರಾರನು ಅಗತ್ಯಪಡಿಸಿದಂತೆ ನಿಖರವಾದ ನಿಯತಕಾಲಿಕ ತಃಖ್ತೆಗಳನ್ನು, ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ತಯಾರಿಸಿ ಸಕಾಲದಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸಲು ಜವಾಬ್ದಾರನಾಗಿರತಕ್ಕದ್ದು;

60.35 ಅಜೆಂಡಾ ಮತ್ತು ಅದರಲ್ಲಿನ ಪ್ರತಿಯೊಂದು ವಿಷಯದಲ್ಲಿನ ಟಿಪ್ಪಣಿ ಸಹಿತ ಸಾಮಾನ್ಯ ಸಭೆ, ಮಂಡಳಿ ಮತ್ತು ಉಪಸಮಿತಿಗಳ ಸಭೆಗಳಿಗೆ ನೋಟಿಸು ನೀಡತಕ್ಕದ್ದು;

60.36 ಸಭೆಯ ನಡವಳಿಗಳನ್ನು ಚರ್ಚೆಗನುಸಾರ ಸತ್ಯವಾಗಿ ಮತ್ತು ನಿಖರವಾಗಿ ಅದೇ ಉದ್ದೇಶಕ್ಕಾಗಿ ಇಡಲ್ಪಟ್ಟ ಮತ್ತು ಅದರ ಪುಟಗಳನ್ನು ಅನುಕ್ರಮವಾಗಿ ಸಂಖ್ಯೀಕರಿಸಿದ ಪುಸ್ತಕದಲ್ಲಿ ದಾಖಲಿಸತಕ್ಕದ್ದು.ಸದರಿ ಪುಸ್ತಕದ ಪ್ರತಿ ಪುಟದಲ್ಲಿ ಸಣ್ಣ ರುಜು ಅಥವಾ ಸಹಿ ಮಾಡತಕ್ಕದ್ದು ಮತ್ತು ಪ್ರತಿ ಸಭೆಯ ನಡವಳಿಗಳನ್ನು ದಾಖಲಿಸಿದ ಕೊನೆಯ ಪುಟದಲ್ಲಿ ದಿನಾಂಕವನ್ನು ನಮೂದಿಸಿ ಸಭಾಪತಿಯೊಡನೆ ಸಹಿ ಮಾಡತಕ್ಕದ್ದು. ಸಭೆಯ ನಡವಳಿಗಳು ಸಭೆಯಲ್ಲಿನ ಚರ್ಚೆಗಳ ನಿಖರವಾದ ಮತ್ತು ಯುಕ್ತವಾದ ಸಂಗ್ರಹಗಳನ್ನು ಒಳಗೊಂಡಿರತಕ್ಕದ್ದು;

60.37 ಸಾಮಾನ್ಯ ಸಭೆ ಮತ್ತು ಮಂಡಳಿಯ ಸಭೆಗಳ ನಡವಳಿಗಳನ್ನು ಸಂಬಂಧಪಟ್ಟವರಿಗೆ ಸಕಾಲದಲ್ಲಿ ಕಳುಹಿಸಿ ಬ್ಯಾಂಕಿನ ಮತ್ತು ಅದರ ಶಾಖೆಗಳ ಸೂಚನಾ ಫಲಕಗಳ ಮೇಲೆ ಅವುಗಳ ಪ್ರತಿಗಳನ್ನು ಅಂಟಿಸತಕ್ಕದ್ದು; ಸದರಿ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಸಕಾಲಿಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಮುಂದಿನ ಮಂಡಳಿಯ ಸಭೆಯಲ್ಲಿ ಅನುಸರಣಾ ವರದಿಯನ್ನು ಮಂಡಿಸತಕ್ಕದ್ದು.

60.38 ಸಾಮಾನ್ಯ ಚುನಾವಣೆ ಆಗಿ ಮಂಡಳಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗೆ, ಸಹಕಾರ ಚುನಾವಣಾ ಆಯೋಗವು ನಿಗದಿಪಡಿಸಿದಂತೆ, ಪದಾಧಿಕಾರಿಗಳ ಚುನಾವಣೆಗಾಗಿ ಮಂಡಳಿಯ ಸಭೆಯನ್ನು ಕರೆಯತಕ್ಕದ್ದು;

60.39 ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಹಿಂದಿನ ವರ್ಷದ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು, ತತ್ಸಂಬಂಧದ ಷೆಡ್ಯೂಲುಗಳ, ಅಧಿಕೃತ ವರದಿಗಳ ಮತ್ತು ಇತರ ತಃಖ್ತೆಗಳ ಸಹಿತ ತಯಾರಿಸಿ ಮಂಡಳಿಯ ಅನುಮೋದನೆ ಪಡೆದು ಲೆಕ್ಕಪರಿಶೋಧಕರ ಮುಂದೆ ಮಂಡಿಸತಕ್ಕದ್ದು;

60.40 ಕಾಯ್ದೆಯ ಕಲಂ 63ರ ಲೆಕ್ಕಪರಿಶೋಧನಾ ವರದಿಗಳನ್ನು, ಕಲಂ 64ರ ವಿಚಾರಣಾ ವರದಿಗಳನ್ನು ಮತ್ತು ಕಲಂ 65ರ ಪರಿವೀಕ್ಷಣಾ ವರದಿಗಳನ್ನು(ಇದ್ದಲ್ಲಿ) ಅವುಗಳಲ್ಲಿ ಉಕ್ತವಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಸಹಿತ ಮಂಡಳಿಯ ಮುಂದೆ ಮಂಡಿಸತಕ್ಕದ್ದು;

60.41 ಲೆಕ್ಕಪರಿಶೋಧನಾ, ವಿಚಾರಣಾ ಅಥವಾ ಪರಿವೀಕ್ಷಣಾ ವರದಿಗಳಲ್ಲಿ ತಿಳಿಸಲಾದ ಲೋಪದೋಷಗಳನ್ನು ಸರಿಪಡಿಸಲುಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಂಡು ಕ್ರಮಗಳನ್ನುಳ್ಳ ಅನುಪಾಲನಾ ವರದಿಗೆ ಮಂಡಳಿಯ ಅನುಮೋದನೆಪಡೆದು ಅನುಪಾಲನಾ ವರದಿ ಕಳುಹಿಸತಕ್ಕದ್ದು. ಸದರಿ ಲೋಪದೋಷಗಳು ಸರಿಪಡಿಸಲ್ಪಡುವವರೆಗೆ ಮತ್ತು ಅಂತಹಅಕ್ರಮಗಳು ನೇರ್ಪಡಿಸಲ್ಪಡುವವರೆಗೆ, ಅಂಥ ಅನುಪಾಲನಾ ವರದಿಗಳನ್ನು ನಿಯತಕಾಲಿಕವಾಗಿ ರಿಜಿಸ್ಟ್ರಾರನಿಗೆ ಅಥವಾಲೆಕ್ಕಪರಿಶೋಧನಾ ನಿರ್ದೇಶಕನಿಗೆ ಸಲ್ಲಿಸುವುದನ್ನು ಮುಂದುವರೆಸತಕ್ಕದ್ದು;

60.42 ಸಿಬ್ಬಂದಿಯವರ ಪ್ರೊಬೇಷನರಿ ಅವಧಿಯು ಸಮರ್ಪಕವಾಗಿ ಪೂರ್ಣಗೊಳಿಸಿರುವುದನ್ನು ಪ್ರಮಾಣೀಕರಿಸುವುದು, ಎಲ್ಲಾ ಸಿಬ್ಬಂದಿಯವರಿಗೆ ವಾರ್ಷಿಕ ವೇತನ ಹೆಚ್ಚಳಗಳನ್ನು ಮತ್ತು ಇತರ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡಲು ಸಕ್ಷಮನಾಗಿರತಕ್ಕದ್ದು;

60.43 ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ರಾಜೀನಾಮೆ ಕೊಟ್ಟ, ಸ್ವಯಿಚ್ಛಾ ನಿವೃತ್ತಿ ಪಡೆದ ಮತ್ತು ವಯೋನಿವೃತ್ತಿ ಪಡೆದ ನೌಕರರಿಗೆ ಗ್ರ್ಯಾಚುಯಿಟಿ ಮತ್ತು ಇತರ ಸೇವಾ ಮುಕ್ತಾಯದ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡುವುದು;

60.44 ಮಂಡಳಿಯ ನೀತಿಗನುಸಾರ ಮತ್ತು ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಒಳಪಟ್ಟು ಬ್ಯಾಂಕಿನ ಹಣವನ್ನು ವಿವಿಧ ಭದ್ರತೆಗಳಲ್ಲಿ, ಠೇವಣಿಗಳಲ್ಲಿ, ನಿಧಿಗಳಲ್ಲಿ, ಬಾಂಡುಗಳಲ್ಲಿ, ಡಿಬೆಂಚರು ಮುಂತಾದವುಗಳಲ್ಲಿ ತೊಡಗಿಸುವುದು ಮತ್ತು ಈ ಬಗ್ಗೆ ಕಾರ್ಯನಿರ್ವಾಹಕ ಸಮಿತಿಗೆ ಮತ್ತು ಮಂಡಳಿಗೆ ವರದಿ ಮಾಡುವುದು;

60.45 ಇತರೆ ಬ್ಯಾಂಕುಗಳಲ್ಲಿರುವ ಬ್ಯಾಂಕಿನ ಖಾತೆಗಳನ್ನು ನಿರ್ವಹಿಸುವುದು;

60.46 ನಿಧಿಗಳನ್ನು ತೊಡಗಿಸುವ ನೀತಿಯಲ್ಲಿ ನಿಗದಿಪಡಿಸಿದಂತೆ ಪ್ರಕಾರ್ಯಗಳನ್ನು ನಿರ್ವಹಿಸಲು ಜವಾಬ್ದಾರನಾಗಿರತಕ್ಕದ್ದು;

60.47 ದೈನಂದಿನ ಆಧಾರದ ಮೇಲೆ ನಗದು ಮೀಸಲು ಅನುಪಾತ(ಸಿ.ಆರ್.ಆರ್) ಮತ್ತು ದ್ರವಾಸ್ತಿ ಅನುಪಾತ(ಎಸ್.ಎಲ್.ಆರ್) ಗಳನ್ನು ಪರಿಶೀಲಿಸಿ ವಿಮರ್ಶಿಸುವುದು;

60.48 ಸಂದರ್ಭಾನುಸಾರ ಸದಸ್ಯರಿಗೆ ಅಥವಾ ಪ್ರತಿನಿಧಿಗಳಿಗೆ ಗುರುತಿನ ಕಾರ್ಡುಗಳನ್ನು ನೀಡುವುದು;

60.49 ಮಂಡಳಿಯ ಪದಾವಧಿ ಮುಕ್ತಾಯವಾಗುವ ದಿನಾಂಕದ ಪೂರ್ವದ ಆರು ತಿಂಗಳ ಮೊದಲು ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸುವುದು, ಅಲ್ಲದೇ ಯಾವುದೇ ಕಾರಣದಿಂದ ನಿರ್ದೇಶಕನ ಅಥವಾ ಪದಾಧಿಕಾರಿಯ ಪದದಲ್ಲಿ ಆಕಸ್ಮಿಕ ಖಾಲಿ ಸ್ಥಾನ ಉಂಟಾದಲ್ಲಿ, ಅದನ್ನು ತಕ್ಷಣ ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸುವುದು.ಕರಡು ಅರ್ಹ ಮತದಾರರ ಪಟ್ಟಿಯ ತಯಾರಿಕೆಯೂ ಸೇರಿದಂತೆ ಚುನಾವಣಾ ಆಯೋಗಕ್ಕೆ ಚುನಾವಣೆ ನಡೆಸಲು ಅಗತ್ಯವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡುವುದು. ಅಗತ್ಯವಾದ ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಚುನಾವಣಾ ಆಯೋಗದ ಸೂಚನೆ ಅನುಸಾರ ಆಯೋಗಕ್ಕೆ ಅಥವಾ ಆಯೋಗವು ಪ್ರಾಧಿಕೃತಗೊಳಿಸುವ ಅಧಿಕಾರಿಗೆ ಒದಗಿಸುವುದು;

60.50 ಬ್ಯಾಂಕಿನ ನೀತಿಗಳ, ಉದ್ದೇಶಗಳ ಮತ್ತು ಯೋಜನೆಯ ರಚನೆಯಲ್ಲಿ ಮಂಡಳಿಗೆ ಅಗತ್ಯ ನೆರವು ನೀಡುವುದು;

60.51 ಬ್ಯಾಂಕಿನ ಉಪವಿಧಿಗಳ, ವ್ಯವಹಾರ ನಿಯಮಗಳ ಮತ್ತು ಮಂಡಳಿಯ ನಿರ್ದೇಶನದ ಪ್ರಕಾರ ಇವರಿಗೆ ಪ್ರದತ್ತವಾಗಿರುವ / ವಹಿಸಲ್ಪಡುವ ವಿವಿಧ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ಅಧಿಕಾರಗಳನ್ನು ಚಲಾಯಿಸುವುದು;

## ಅಧ್ಯಾಯ – 11

## ಸಾಲ ಮತ್ತು ಮುಂಗಡಗಳು

**61 ಸಾಲ ಮತ್ತು ಮುಂಗಡಗಳಿಗಾಗಿ ಅರ್ಜಿ:**

ಮಂಡಳಿಯವರು ನಿಗದಿಪಡಿಸಿದ ನಮೂನೆಯಲ್ಲಿ ಸಾಲದ ಅರ್ಜಿಯನ್ನು ಸದಸ್ಯರು ಸಲ್ಲಿಸಬೇಕು ಮತ್ತು ಅರ್ಜಿದಾರರ ಜೊತೆಗೆ ಜಾಮೀನುದಾರರೂ ಆ ಅರ್ಜಿಯಲ್ಲಿ ಬ್ಯಾಂಕು ಬಯಸಿದ ಎಲ್ಲಾ ಮಾಹಿತಿಗಳನ್ನು ನಿಖರವಾಗಿ ನಮೂದಿಸಿ ಸಹಿ ಮಾಡಬೇಕು. ಅರ್ಜಿದಾರರು ಅರ್ಜಿಯಲ್ಲಿ ನೀಡಿರುವ ಮಾಹಿತಿಗಳಿಗೆ ನಿರ್ದೇಶಕ ಮಂಡಳಿಯವರು ಪುರಾವೆಯನ್ನು ಬಯಸಿದಲ್ಲಿ ಅವುಗಳನ್ನು ಒದಗಿಸಲು ಅರ್ಜಿದಾರರು ಬದ್ಧರಾಗಿರುತ್ತಾರೆ.

**62 ಸಾಲ ಮತ್ತು ಮುಂಗಡಗಳ ಮಂಜೂರಾತಿ:**

ಸಾಲದ ಅರ್ಜಿಗಳನ್ನು ಪರಿಶೀಲಿಸಿ ಮಂಜೂರು ಮಾಡುವಾಗ ಮಂಡಳಿಯವರು ಪೂರ್ತಿ ಸಾಲವನ್ನು ಮಂಜೂರು ಮಾಡಬಹುದು ಅಥವಾ ಕೋರಿರುವ ಸಾಲದ ಹಣವನ್ನು ಅಥವಾ ತೀರುವಳಿ ಕಾಲಾವಧಿಯನ್ನು ಕಡಿಮೆಗೊಳಿಸಬಹುದು. ಹಾಗೂ ಭದ್ರತೆಯ ಬಗೆಗಿನ ಷರತ್ತುಗಳನ್ನು ಬದಲಾಯಿಸಬಹುದು ಅಥವಾ ಸಾಲದ ಅರ್ಜಿಗಳನ್ನು ತಿರಸ್ಕರಿಸಬಹುದು. ಮಂಡಳಿಯ ತೀರ್ಮಾನದ ನಿಲುವಿನ ಬಗ್ಗೆ ಕಾರಣಗಳನ್ನು ಅರ್ಜಿದಾರನಿಗೆ ತಿಳಿಸಲು ಅದು ಬದ್ಧವಾಗಿಲ್ಲ. ಆದರೆ ಅರ್ಜಿದಾರನಿಗೆ ಸಾಲದ ಅರ್ಜಿ ತಿರಸ್ಕೃತವಾದ ಬಗ್ಗೆ ತಿಳಿಸಬೇಕು.ಸಾಲದ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಮಂಡಳಿಯವರು ಕೈಗೊಂಡ ತೀರ್ಮಾನವೇ ಅಂತಿಮ ತೀರ್ಮಾನವಾಗಿರತಕ್ಕದ್ದು.

**63. ಸಾಲ ಮತ್ತು ಮುಂಗಡಗಳನ್ನು ನೀಡಲು ನಿಯಮಗಳು:**

ಭಾರತೀಯ ರಿಸರ್ವ್ ಬ್ಯಾಂಕಿನವರು, ಸಹಕಾರ ಸಂಘಗಳ ನಿಬಂಧಕರು ಹಾಗೂ ಹಣಕಾಸು ನೆರವು ಸಂಸ್ಥೆಗಳು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳಿಗನುಗುಣವಾಗಿ ಮಂಡಳಿಯವರು ಸಾಲ ಮತ್ತು ಮುಂಗಡಗಳನ್ನು ಮಂಜೂರು ಮಾಡಲು ಅನುಸರಿಸಬೇಕಾದ ಕ್ರಮ, ನಿರ್ವಹಿಸಬೇಕಾದ ಮಾರ್ಜಿನ್‌ಗಳು, ಸಾಲ ತೀರುವಳಿ ಕಾಲಾವಧಿ, ಭದ್ರತೆ ರಹಿತ ಸಾಲಗಳನ್ನು ನೀಡುವ ಪ್ರಮಾಣ, ವಿವಿಧ ಉದ್ದೇಶಗಳಿಗೆ ಸಾಲಗಳನ್ನು ನೀಡಲು ಸ್ವೀಕರಿಸಬಹುದಾದ ಭದ್ರತೆಯ ಸ್ವರೂಪಗಳ ಬಗ್ಗೆ ಷರತ್ತು ಮತ್ತು ನಿಬಂಧನೆಗಳು ಇವೇ ಮುಂತಾದವುಗಳಿಗೆ ಸಂಬಂಧಿಸಿದ ನಿಯಮಾವಳಿಗಳನ್ನು ರೂಪಿಸತಕ್ಕದ್ದು.

**64. ವಿವಿಧ ಸಾಲಗಳ ವಿವರಣೆ:**

ಭಾರತೀಯ ರಿಸರ್ವ್ ಬ್ಯಾಂಕಿನವರು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳ ಅನುಸಾರವಾಗಿ ಮಂಡಳಿಯವರು ಅಂಗೀಕರಿಸಿದ ಭದ್ರತೆಗಳ ಮೇಲೆ ಅಥವಾ ಈ ಕೆಳಕಂಡ ಆಧಾರಗಳನ್ನು ಪಡೆದು ಸದಸ್ಯರಿಗೆ ಸಾಲ ಮತ್ತು ಮುಂಗಡಗಳನ್ನು ನಗದುದ್ದರಿ ಮತ್ತು ಮೀರೆಳೆತೆ ಸಾಲಗಳನ್ನು ಮಂಜೂರು ಮಾಡಬಹುದು.

ಅ. ವೈಯಕ್ತಿಕ ಜವಾಬ್ದಾರಿ ಮತ್ತು ಅಥವಾ ಜಾಮೀನುದಾರರ ಅಥವಾ ಇತರ ಸದಸ್ಯರುಗಳ ಜವಾಬ್ದಾರಿ ಮತ್ತು ಅಥವಾ ನಾಮಮಾತ್ರ ಸದಸ್ಯರ ಜಾಮೀನು.

ಆ. ಚರ ಮತ್ತು ಅಥವಾ ಸ್ಥಿರ ಸ್ವತ್ತುಗಳ ಆಧಾರ

ಇ. ಯಂತ್ರೋಪಕರಣಗಳ ಮತ್ತು ದಾಸ್ತಾನುಗಳ ತೋರಾಧಾರದ ಮೇಲೆ

ಈ. ಸರ್ಕಾರಿ ಮತ್ತು ಇತರ ವಿಶ್ವಸ್ಥ ಭದ್ರತಾ ಪತ್ರಗಳ, ಅನುಮೋದಿತವಾದ ಕಂಪನಿಗಳ ಷೇರುಗಳ ಮತ್ತು ಡಿಬೆಂಚರುಗಳ ಹಾಗೂ ಬ್ಯಾಂಕಿನ ಖಾಯಂ ಠೇವಣಿಗಳ ಒತ್ತೆ ಮೇಲೆ.

ಉ. ಬ್ಯಾಂಕಿಗೆ ಪರಭಾರೆ ಮಾಡಿದ ವಿಮಾಪಾಲಿಸಿಗಳ ಅಧ್ಯರ್ಪಣ ಮೊಬಲಗಿಗೆ ಮೀರದಂತೆ.

ಊ. ಉಗ್ರಾಣ ರಸೀತಿಗಳು

ಋ.ಚಿನ್ನಾಭರಣಗಳು

ಎ. ಮಂಡಳಿಯ ತೀರ್ಮಾನದಂತೆ ಇತರೆ ಬೆಲೆಬಾಳುವ ವಸ್ತುಗಳು.

**65. ಸದಸ್ಯೇತರರಿಗೆ ಕೊಡುವ ಸಾಲ:**

ಸದಸ್ಯೇತರರಿಗೆ ಅವರು ಹೊಂದಿರುವ ಬ್ಯಾಂಕಿನ ಸಾವಧಿ ಠೇವಣಾತಿಗಳ ಆಧಾರದ ಮೇಲೆ ಸಾಲ ಮತ್ತು ಮುಂಗಡಗಳನ್ನು ಕೊಡಬಹುದು.

**66. ಸಾಲಗಳ ಅವಧಿ:**

ಅಲ್ಪಾವಧಿ ಸಾಲಗಳನ್ನು 15 ತಿಂಗಳವರೆಗೂ, ಮಧ್ಯಮಾವಧಿ ಸಾಲಗಳನ್ನು 15 ತಿಂಗಳಿಂದ 5 ವರ್ಷಗಳವರೆಗೂ ದೀರ್ಘಾವಧಿ ಸಾಲಗಳನ್ನು 5 ವರ್ಷಗಳಿಗೂ ಹೆಚ್ಚಿನ ಅವಧಿಗೆ ಮಂಜೂರು ಮಾಡಬಹುದು.

**67. ಸದಸ್ಯನ ಸಾಲದ ಪರಿಮಿತಿ:**

67.1 ಭಾರತೀಯ ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೊಳಪಟ್ಟು ಪ್ರತಿ ಸದಸ್ಯರಿಗೆ ಎಲ್ಲಾ ವಿಧವಾದ ಸಾಲಗಳನ್ನು ಒಳಗೊಂಡಂತೆ ನೀಡಬಹುದಾದ ಗರಿಷ್ಟ ಮಿತಿಯನ್ನು ನಿರ್ದೇಶಕ ಮಂಡಳಿಯವರು ನಿಗದಿ ಪಡಿಸತಕ್ಕದ್ದು.

67.2 ಒಬ್ಬ ಸದಸ್ಯನು ಇನ್ನೊಬ್ಬ ಸದಸ್ಯನಿಗೆ ಜಾಮೀನುದಾರನಾಗಬಹುದು.

**68. ಸಾಲವಿತರಣೆಯ ಷರತ್ತುಗಳು:**

ಸಾಲ ಮಂಜೂರಾದ ನಂತರ ನಿಯಮಿತವಾದ ನಮೂನೆಯಲ್ಲಿ ಅರ್ಜಿದಾರರು ಸಾಲದ ಕರಾರು ಪತ್ರಗಳನ್ನು ಮತ್ತು ಇತರ ಸಂಬಂಧಪಟ್ಟ ಪತ್ರಗಳನ್ನು ಪೂರ್ಣವಾಗಿ ಬರೆದುಕೊಟ್ಟ ನಂತರವೇ ಸಾಲದ ಹಣವನ್ನು ಬಟವಾಡೆ ಮಾಡತಕ್ಕದ್ದು.

**69. ತಪ್ಪು ಅಥವಾ ಸುಳ್ಳು ಮಾಹಿತಿಯನ್ನು ಒದಗಿಸುವಿಕೆ:**

ಅರ್ಜಿದಾರನು ಅಥವಾ ಜಾಮೀನುದಾರನು ವಾಸ್ತವಿಕ ವಿಷಯಗಳ ಬಗ್ಗೆ ಅರ್ಜಿಯಲ್ಲಿ ಯಾವುದಾದರೂ ತಪ್ಪು ಅಥವಾ ಸುಳ್ಳು ಮಾಹಿತಿಯನ್ನು ಒದಗಿಸಿದಲ್ಲಿ ಮಂಜೂರಾದ ಸಾಲವನ್ನು ಸದಸ್ಯನಿಂದ ವಾಪಸ್ಸು ಪಡೆಯಲು ನಿರ್ದೇಶಕ ಮಂಡಳಿಯವರು ಪೂರ್ಣ ಅಧಿಕಾರ ಹೊಂದಿರುತ್ತಾರೆ ಮತ್ತು ಅಂತಹ ಸುಳ್ಳು / ತಪ್ಪು ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಆ ಸದಸ್ಯನು ಅಂತಹ ಸಾಲವನ್ನು ಪೂರ್ಣವಾಗಿ ಮರುಪಾವತಿ ಮಾಡಿದ ತಾರೀಖಿನಿಂದ ಮುಂದಿನ ಐದು ವರ್ಷಗಳವರೆಗೆ ಯಾವುದೇ ತರಹದ ಸಾಲವನ್ನು ಪಡೆಯಲು ಅನರ್ಹನಾಗಿರುತ್ತಾನೆ.

**70. ಸಾಲದ ಉಪಯೋಗ ಮತ್ತು ಮರುಪಾವತಿ :**

70.1 ಸದಸ್ಯನು ಮಂಜೂರಾದ ಸಾಲದ ಮೊಬಲಗಳನ್ನು ಮಂಜೂರಾದ ಉದ್ದೇಶಕ್ಕಾಗಿಯೇ ಬಳಸಿಕೊಳ್ಳತಕ್ಕದ್ದು.ಒಂದು ವೇಳೆ ಮಂಜೂರಾದ ಉದ್ದೇಶವನ್ನು ಬಿಟ್ಟು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡಲ್ಲಿ ಅಂತಹ ಸಾಲವನ್ನು ತಹಲ್‌ವರೆವಿಗೂ ಬಡ್ಡಿ ಸಹಿತ ವಾಪಸ್ಸು ಪಡೆಯಲು ಮಂಡಳಿಯವರು ಪೂರ್ಣ ಅಧಿಕಾರ ಹೊಂದಿರುತ್ತಾರೆ.

70.2 ಸಾಲ ಮತ್ತು ಮುಂಗಡಗಳನ್ನು ಮಂಜೂರು ಮಾಡುವಾಗ ಇದ್ದ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಸಾಲದ ಬಡ್ಡಿ ಮತ್ತು ಕಂತುಗಳನ್ನು ಸಕಾಲದಲ್ಲಿ ಬ್ಯಾಂಕಿಗೆ ಮರುಪಾವತಿಸುವುದು ಪ್ರತಿ ಸಾಲಗಾರನ ಕರ್ತವ್ಯವಾಗಿರುತ್ತದೆ.

70.3 ಸಾಲ ಮತ್ತು ಮುಂಗಡಗಳನ್ನು ಸಾಲಗಾರನು ಮರುಪಾವತಿ ಮಾಡಿದಾಗ ಆಧಾರ ರಹಿತ ಸಾಲದ ಸುಸ್ತಿ ಕಂತುಗಳ ಬಾಕಿ, ಬಡ್ಡಿ ಮತ್ತು ಸುಸ್ತಿ ಬಡ್ಡಿ ಇವುಗಳನ್ನು ಮೊದಲು ವಸೂಲಿಮಾಡಿಕೊಂಡು ಉಳಿದುದನ್ನು ಭದ್ರತಾ ಸಾಲಕ್ಕೆ ಜಮಾ ಮಾಡಿಕೊಳ್ಳತಕ್ಕದ್ದು.

**71. ಸಾಲಗಾರರ ಮರಣ ಅಥವಾ ದಿವಾಳಿತನ:**

ಸಾಲಗಾರನು ಮೃತನಾದರೆ / ಅಥವಾ ದಿವಾಳಿಯಾದರೆ ಅಥವಾ ಕಾನೂನು ರೀತ್ಯ ಅಸಹಾಯಕನೆಂದು ಘೋಷಿಸಲ್ಪಟ್ಟರೆ ಅಂತಹ ಸಾಲಗಾರನಿಗೆ ಜಾಮೀನುದಾರರಾಗಿದ್ದವರು ತಮಗೆ ಈ ವಿಷಯ ತಿಳಿದ ಹದಿನೈದು ದಿವಸಗಳೊಳಗಾಗಿ ಮಂಡಳಿಗೆ ಲಿಖಿತವಾಗಿ ತಿಳಿಸಬೇಕು.ಮಂಡಳಿಯವರು ಈ ವಿಷಯದಲ್ಲಿ ಸಾಲ ವಸೂಲಾತಿಗಾಗಿ ಅಗತ್ಯವಾದ ಕ್ರಮವನ್ನು ಕೂಡಲೇ ಕೈಗೊಳ್ಳಬೇಕು.

**72. ಜಾಮೀನುದಾರನ ಮರಣ ಅಥವಾ ದಿವಾಳಿತನ:**

ಜಾಮೀನುದಾರನು ಮರಣ ಹೊಂದಿದರೆ ಅಥವಾ ದಿವಾಳಿಯಾದರೆ ಅಥವಾ ಕಾನೂನು ರೀತ್ಯಾ ಅಸಹಾಯಕನಾದರೆ ಸಾಲಗಾರನು ತನಗೆ ವಿಷಯ ತಿಳಿದ ಹದಿನೈದು ದಿವಸದೊಳಗಾಗಿ ಮಂಡಳಿಗೆ ಲಿಖಿತವಾಗಿ ತಿಳಿಸಬೇಕು. ಮುಖ್ಯ ಕಾರ್ಯನಿರ್ವಾಹಕರು ಸಾಲಗಾರನಿಗೆ 15 ದಿವಸಗಳೊಳಗಾಗಿ ಬೇರೆ ಯೋಗ್ಯ ಜಾಮೀನುದಾರರನ್ನು ಒದಗಿಸುವಂತೆ ಕೇಳಬೇಕು.ಸಾಲಗಾರನು ಬೇರೆ ಜಾಮೀನುದಾರರನ್ನು ಒದಗಿಸಲು ವಿಫಲನಾದರೆ ಸಾಲದ ಒಪ್ಪಂದ ಪತ್ರದಲ್ಲಿ ಏನೇ ಹೇಳಿದ್ದರೂ ಸಹ ಅಂತಹ ಸಾಲವನ್ನು ತಹಲ್‌ವರೆಗೂ ಬಡ್ಡಿಸಮೇತ ಕೂಡಲೇ ವಸೂಲಿ ಮಾಡಿಕೊಳ್ಳುವ ಅಧಿಕಾರವನ್ನು ಬ್ಯಾಂಕು ಹೊಂದಿರುತ್ತದೆ.

**73. ಸಾಲ ಮತ್ತು ಮುಂಗಡಗಳ ಉದ್ದೇಶ:**

73.1 ಉದ್ಯೋಗ ಮತ್ತು ಸ್ವಂತ ಉದ್ಯೋಗದ ಬೆಳವಣಿಗೆಗೆ ಪ್ರೋತ್ಸಾಹ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ, ಸಾರಿಗೆ, ವ್ಯಾಪಾರ ಮತ್ತು ವಾಣಿಜ್ಯಾಭಿವೃದ್ಧಿ, ವಿದ್ಯಾಭ್ಯಾಸ, ಕಟ್ಟಡ ಮತ್ತು ಮನೆಗಳ ನಿರ್ಮಾಣಕ್ಕಾಗಿ ಮಂಡಳಿಯವರು ಸಾಲಗಳನ್ನು ಕೊಡಬಹುದಾಗಿದೆ.

73.2 ಭಾರತೀಯ ರಿಸರ್ವ್ ಬ್ಯಾಂಕು, ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕು ಮತ್ತು ಎಸ್.ಐ.ಡಿ.ಬಿ.ಐ ಗಳ ಪುನರ್ಧನ ಯೋಜನೆಗಳ ಅನ್ವಯ ಅಪೆಕ್ಸ್ ಬ್ಯಾಂಕು ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಪಡೆಯುವ ಸಾಲಗಳ ಗರಿಷ್ಟ ಪರಿಮಿತಿ, ಬಡ್ಡಿದರ ಮತ್ತು ಮರುಪಾವತಿ ಅವಧಿ ಇವೆಲ್ಲ ಸದರೀ ಸಂಸ್ಥೆಗಳು ಆಗಿಂದಾಗ್ಗೆ ವಿಧಿಸಬಹುದಾದ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

**74. ಸಿಬ್ಬಂದಿವರ್ಗದವರಿಗೆ ಸಾಲ ಮತ್ತು ಮುಂಗಡಗಳು:**

ಯಾವುದೇ ಖಾಯಂ ಆದ ಮತ್ತು 5 ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದಂತ ಬ್ಯಾಂಕಿನ ನೌಕರರಿಗೆ ಮಂಡಳಿಯವರು ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮಗಳಲ್ಲಿರುವ ವಿಧಿಗೊಳಪಟ್ಟು ಸಾಲ ಮತ್ತು ಮುಂಗಡಗಳನ್ನು ಮಂಜೂರು ಮಾಡಬಹುದು.

**75. ಸಾಲ ಮತ್ತು ಮುಂಗಡಗಳ ಮರುಪಾವತಿ ಅವಧಿ:**

ಸಾಲಗಳ, ಮುಂಗಡಗಳ ಮತ್ತು ನಗದುದ್ದರಿ ಸಾಲಗಳ ಮರುಪಾವತಿ ಅವಧಿಯು ಬ್ಯಾಂಕು ಸ್ವೀಕರಿಸುವ ಠೇವಣಿಗಳು ಪಕ್ವವಾಗುವ ಅವಧಿಗೆ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಅಥವಾ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್‌ನಿಂದ ಪಡೆಯುವ ಸಾಲಗಳ ಮರುಪಾವತಿಗೆ ನಿಗದಿ ಮಾಡಿರುವ ಅವಧಿಗೆ ಅನುಸಾರವಾಗಿರತಕ್ಕದ್ದು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್, ಕೈಗಾರಿಕಾ ಅಭಿವೃದ್ಧಿ ಬ್ಯಾಂಕು ಮತ್ತು ಎಸ್.ಐ.ಡಿ.ಬಿ.ಐ ನಿಗದಿಪಡಿಸಿರುವ ಷರತ್ತುಗಳಿಗೆ ಒಳಪಟ್ಟಿರಬೇಕು.

**76. ಆಧಾರ ರಹಿತ ಮುಂಗಡಗಳು:**

ಸದಸ್ಯರಿಗೆ ನೀಡುವ ಆಧಾರರಹಿತ ಸಾಲ ಮುಂಗಡಗಳ, ನಗದುದ್ದರಿ ಸಾಲ ಹಾಗೂ ಮೀರಳೆತ ಸಾಲಗಳ ಒಟ್ಟು ಮೊತ್ತವು ಯಾವ ಕಾಲದಲ್ಲೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ) 1949 ರ ಕಲಂ 18 ಮತ್ತು 24 ರಲ್ಲಿ ಸ್ಪಷ್ಟೀಕರಿಸಿರುವಂತೆ ಒಟ್ಟಾರೆ ಬೇಡಿಕೆ ಮತ್ತು ವಾಯಿದೆ ಜವಾಬ್ದಾರಿಗಳ ಶೆಕಡಾ 33.33 ಕ್ಕಿಂತ ಹೆಚ್ಚಿಗೆ ಅಥವಾ ಭಾರತೀಯ ರಿಸರ್ವ್ ಬ್ಯಾಂಕು ಆಗಿಂದಾಗ್ಗೆ ನಿರ್ದೇಶಿಸುವುದರ ಮೂಲಕ ನಿಗದಿಪಡಿಸುವ ಮಿತಿಗಿಂತ ಜಾಸ್ತಿ ಆಗಕೂಡದು.

**77. ಬಡ್ಡಿಯ ದರ:**

77.1 ಎಲ್ಲಾ ಬಗೆಯ ಸಾಲ ಮತ್ತು ಮುಂಗಡಗಳ ಮೇಲೆ ಬ್ಯಾಂಕು ವಿಧಿಸುವ, ಬಡ್ಡಿಯದರವು ಭಾರತೀಯ ರಿಸರ್ವ್ ಬ್ಯಾಂಕಿನವರು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳಿಗೊಳಪಟ್ಟಿರತಕ್ಕದ್ದು.

77.2 ಸಾಲಗಳ ಮೇಲೆ ವಿಧಿಸುವ ಸಾಮಾನ್ಯ ಬಡ್ಡಿ ದರಕ್ಕಿಂತ ಶೇಕಡಾ 2 ರಷ್ಟು ಸುಸ್ತಿಬಡ್ಡಿಯನ್ನು ಸುಸ್ತಿಸಾಲಗಳ ಮೇಲೆ ವಿಧಿಸತಕ್ಕದ್ದು ಮತ್ತು ಅಂತಹ ಬಡ್ಡಿಯನ್ನು ಆದಾಯವೆಂದು ಪರಿಗಣಿಸತಕ್ಕದ್ದು.

77.3 ಸಾಲ ಮತ್ತು ಮುಂಗಡಗಳ ಮೇಲಣ ಬಡ್ಡಿ ಮೊಬಲಗನ್ನು ದಿನಗಳ ಗುಣಲಬ್ದದ ಆಧಾರದ ಮೇಲೆ ಆಸ್ತಿ ಅಡಮಾನ ಸಾಲ / ವಾಹನ ಸಾಲ ಹೊರತುಪಡಿಸಿ ತ್ರೈಮಾಸಿಕವಾಗಿ ಲೆಕ್ಕಾಚಾರ ಮಾಡತಕ್ಕದ್ದು. ಹಾಗೆ ಲೆಕ್ಕಾಚಾರ ಹಾಕಿದ ಜೂನ್ 30 ಸೆಪ್ಟೆಂಬರ್ 30 ಡಿಸೆಂಬರ್ 31 ಮತ್ತು ಮಾರ್ಚ್ 31 ತ್ರೈಮಾಸಿಕಗಳ ಕೊನೇ ತಾರೀಖಿನ ದಿನಕ್ಕೆ ಬಾಕಿಯಾಗುವ ನಗದುದ್ದರಿ ಹಾಗೂ ಮೀರಳೆತ ಸಾಲದ ಖಾತೆಗಳಿಗೆ ಬಡ್ಡಿಯನ್ನು ಮಂಜೂರಾದ ಮಿತಿಗೊಳಪಟ್ಟು ಖರ್ಚು ಹಾಕತಕ್ಕದ್ದು. ಯಾವುದೇ ಸಾಲದ ಖಾತೆಯಲ್ಲಿ ಬಡ್ಡಿ ಬಾಕಿ ಇದ್ದಲ್ಲಿ ಸಾಲಗಾರನಿಂದ ಬೇರಾವುದೇ ಸೂಚನೆ ಇದ್ದಾಗ್ಯೂ ವಸೂಲಾದ ಹಣದಲ್ಲಿ ಮೊದಲು ಅಂತಹ ಬಡ್ಡಿ ಖಾತೆಗೆ ಜಮಾ ತೆಗೆದುಕೊಳ್ಳತಕ್ಕದ್ದು.

77.4 ಸದಸ್ಯನಿಂದ ಯಾವುದೇ ಸಾಲದ ಮೇಲೆ ಬಡ್ಡಿ ಬಾಕಿಯಿದ್ದರೆ ಸದಸ್ಯನ ಬೇರೆ ಏನೇ ಸೂಚನೆ ಇದ್ದರೂ ಆ ಸದಸ್ಯನ ಪರವಾಗಿ ಬ್ಯಾಂಕಿಗೆ ಪಾವತಿ ಮಾಡುವ ಯಾವುದೇ ಹಣದಿಂದ ಮೊದಲು ಅಂತಹ ಬಡ್ಡಿ ಹಣವನ್ನು ವಸೂಲಿ ಮಾಡತಕ್ಕದ್ದು.

77.5 ಭಾಗಶಃ ತಿಂಗಳಿಗೆ ಬಡ್ಡಿ, ಸುಸ್ತಿ ಬಡ್ಡಿ, ಲೆಕ್ಕಾಚಾರ ಮಾಡುವಾಗ್ಗೆ ವಾಸ್ತವಿಕ ದಿನಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

77.6 ಎಲ್ಲಾ ವಿಧವಾದ ಸಾಲ ಮತ್ತು ಮುಂಗಡಗಳಿಗೆ ಕ್ಯಾಲೆಂಡರಿನ ಪ್ರತಿ ತ್ರೈಮಾಸಿಕ ಕೊನೆಯಲ್ಲಿ ಬಡ್ಡಿ ವಿಧಿಸಿ ಬಂಡವಾಳೀಕೃತ ಮಾಡತಕ್ಕದ್ದು. ಆದರೆ ಕೂಡಿಬಂದ ಬಡ್ಡಿಯಲ್ಲಿ ವಸೂಲಾಗದಿರುವ ಭಾಗವನ್ನು ಅದು ವಾಸ್ತವವಾಗಿ ವಸೂಲಾಗುವವರೆಗೂ ಲಾಭ ನಷ್ಟದ ವರಮಾನದ ಬಾಬ್ತಿಗೆ ತೆಗೆದುಕೊಳ್ಳತಕ್ಕದ್ದಲ್ಲ.

**78. ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣ :**

ಸದಸ್ಯನಾದವನು ಸಾಲವನ್ನು ಪಡೆಯುವಲ್ಲಿ ಈ ಕೆಳಗೆ ಕಂಡಂತೆ ಷೇರುಗಳನ್ನು ಅಗತ್ಯವಾಗಿ ಪಡೆದಿರಲೇಬೇಕು.

78.1 ಆಧಾರರಹಿತ ಸಾಲಗಳಾದ ಮೀರೆಳೆತ ಸಾಲ, ನಗದುದ್ದರಿ ಸಾಲ, ಜಾಮೀನಿನ ಮೇಲೆ ಪಡೆದ ಸಾಲ, ಬಿಲ್ಲುಗಳ ಮತ್ತು ಚೆಕ್ಕುಗಳ ಖರೀದಿ ಅಥವಾ ವಟಾವಣೆ ಮಾಡಿ ಸಾಲವನ್ನು ಪಡೆಯುವವರು ಸಾಲದ ಮೊಬಲಗಿನ ಶೇಕಡಾ 5 ರಷ್ಟು ಷೇರುಗಳನ್ನು ಪಡೆದಿರಬೇಕು.

78.2 ವಾಸ್ತವಿಕ ಭದ್ರತೆಯ ಮೇಲೆ ಸಾಲ ಪಡೆಯುವವರು ಆ ಸಾಲದ ಶೇಕಡಾ ಎರಡೂವರೆಯಷ್ಟು ಷೇರುಗಳನ್ನು ಪಡೆದಿರಬೇಕು.

(*ಟಿಪ್ಪಣಿ* : ಸಾಲಗಳ ಮೇಲೆ ಷೇರು ಜೋಡಣೆ ಹೊಂದಬೇಕೆಂಬ ಈ ನಿರ್ಬಂಧವು ನಾಮಮಾತ್ರ ಸದಸ್ಯರಿಗೆ ಅನ್ವಯಿಸುವುದಿಲ್ಲ)

**79. ಮೌಲ್ಯಮಾಪನ ಮತ್ತು ಬೆಲೆ ನಿರ್ಣಯ:**

ಬ್ಯಾಂಕಿಗೆ ಈಡು ಮಾಡಲಿರುವ ಅಮೂಲ್ಯ ವಸ್ತುಗಳ, ಯಂತ್ರಗಳ ಚರ ಮತ್ತು ಸ್ಥಿರ ಆಸ್ತಿಗಳ ವ್ಯಾಪಾರದ ಸರಕು ಮೊದಲಾದವುಗಳ ಬೆಲೆ ಕಟ್ಟಲು/ ಮೌಲ್ಯ ನಿರ್ಣಯಿಸಲು ಮಂಡಳಿಯವರು ಬೆಲೆ ನಿರ್ಣಾಯಕರನ್ನು / ಮೌಲ್ಯಮಾಪಕರನ್ನು ನೇಮಿಸಬಹುದು.ನಿರ್ಣಾಯಕರ / ಮೌಲ್ಯಮಾಪಕರ ಖರ್ಚುಗಳೆಲ್ಲವನ್ನು ಸಾಲ ಪಡೆಯುವ ಸದಸ್ಯನೇ ಭರಿಸಬೇಕು.ಅಂಗೀಕೃತ : ಮೌಲ್ಯಮಾಪಕರು / ನಿರ್ಣಾಯಕರು ಮಂಡಳಿಯ ಸಮಾಧಾನಕ್ಕೆ ಅಗತ್ಯ (ನಗದುಹಣದ) ಭದ್ರತೆಯನ್ನು ಒದಗಿಸತಕ್ಕದ್ದು ಮತ್ತು ಮಂಡಳಿಯು ಈ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಖಾತರಿ ಪತ್ರಗಳನ್ನು (ಗ್ಯಾರಂಟಿ ಬಾಂಡ್) ಬರೆದುಕೊಡತಕ್ಕದ್ದು.

**80. ವಿಮೆ :**

ಸಾಲ ಪಡೆಯುವವರು ಬ್ಯಾಂಕಿಗೆ ಅಡವು ಮಾಡಿದ ವಸ್ತುಗಳು ಮತ್ತು ಈಡು ಮಾಡಿದ ಆಸ್ತಿ, ಕಟ್ಟಡಗಳು, ಯಂತ್ರಗಳು ಮುಂತಾದವುಗಳಿಗೆ ಬೆಂಕಿ, ಕಳವು, ದೊಂಬಿ ಮತ್ತು ಇತರ ನಾಗರೀಕ ಗಲಭೆ ಮೊದಲಾದ ಕಾರಣಗಳಿಂದ ಸಂಭವಿಸಬಹುದಾದ ಯಾವುದೇ ತರಹದ ನಷ್ಟದ ಪರಿಹಾರಕ್ಕಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಮೇಲ್ಕಂಡ ಬಾಬ್ತುಗಳಿಗೆ ಬ್ಯಾಂಕಿನ ಹೆಸರಿನಲ್ಲಿ ವಿಮೆ ಮಾಡಿಸತಕ್ಕದ್ದು ಹಾಗೂ ಸಂಬಂಧಪಟ್ಟ ವಿಮಾ ಪಾಲಿಸಿಗಳನ್ನು ಬ್ಯಾಂಕಿಗೆ ಪರಭಾರೆ ಮಾಡಿಸತಕ್ಕದ್ದು. ಅಂತಹ ವಿಮಾ ಪಾಲಿಸಿಯು ಸಾಲ ಮರುಪಾವತಿಯಾಗುವವರೆಗೂ ಚಾಲ್ತಿಯಲ್ಲಿರತಕ್ಕದ್ದು.ಸಾಲಗಾರನು/ರು ವಿಮೆಗೆ ಸಂಬಂಧಪಟ್ಟಂತೆ ವಿಮೆಯ ಕಂತುಗಳನ್ನು ಕೊಡದಿದ್ದ ಸಂದರ್ಭಗಳಲ್ಲಿ, ಬ್ಯಾಂಕು ಆ ವಿಮಾ ಕಂತುಗಳನ್ನು ಪಾವತಿಸಿ ಸಾಲಗಾರನ ಖಾತೆಗೆ ಖರ್ಚಾಗಿರುವಂತೆ ತೋರಿಸುವ ಹಕ್ಕನ್ನು ಹೊಂದಿರುತ್ತದೆ.

**81. ಪ್ರಾಸಂಗಿಕ ವೆಚ್ಚಗಳು :**

ಮಂಡಳಿಯು ನಿಗದಿಪಡಿಸಿದಂತೆ ನೋಂದಣಿ, ಮೌಲ್ಯಮಾಪನ, ವಿಮೆ ಉಗ್ರಾಣದ ಬಾಡಿಗೆ, ಸೇವಾಖರ್ಚು ಮೊದಲಾದವುಗಳಿಗೆ ತಗಲಬಹುದಾದ ಪ್ರಾಸಂಗಿಕ ವೆಚ್ಚವನ್ನು ಸಾಲಪಡೆಯುವವರೇ ಭರಿಸತಕ್ಕದ್ದು.ಇಂತಹ ವೆಚ್ಚಗಳನ್ನು ಸಾಲಗಾರರ ಖಾತೆಗೆ ಖರ್ಚು ಹಾಕಬಹುದು ಮತ್ತು ಅಥವಾ ಆಗಿಂದ್ದಾಗ್ಗೆ ವಸೂಲಿ ಮಾಡಿಕೊಳ್ಳಬಹುದು.

**82. ನಿರ್ದೇಶಕರು ಸಾಲ ಪಡೆಯುವ ಅರ್ಹತೆ :**

1960 ರ ಸಹಕಾರ ನಿಯಮಗಳ 27 ನೇ ನಿಯಮದಲ್ಲಿ ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ ಕಲಂ 20 ರಲ್ಲಿ ನಿಗದಿ ಪಡಿಸಿದ ಮಿತಿಗೊಳಪಟ್ಟು ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನವರು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳಿಗೊಳಪಟ್ಟು ಮಂಡಳಿಯ ಸದಸ್ಯರೂ ಸಹ ಇತರೇ ಸದಸ್ಯರಂತೆ ಎಲ್ಲಾ ಬಗೆಯ ಸಾಲ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

**83. ಹೋಕು ಬಾಕಿ ಸಾಲಗಳನ್ನು ಮನ್ನಾ ಮಾಡುವುದು :**

83.1 ಬಡ್ಡಿ ಮತ್ತು ವಸೂಲಾತಿ ವೆಚ್ಚಗಳನ್ನು ಒಳಗೊಂಡ ವಸೂಲಾಗದ ಬಾಕಿ ಎಂದು ಗುರುತಿಸಲ್ಪಟ್ಟು ಪ್ರಮಾಣೀಕರಿಸಲ್ಪಟ್ಟ ಎಲ್ಲಾ ಸಾಲಗಳನ್ನು ಹಾಗೂ ವಸೂಲಾತಿ ಸಾಧ್ಯವಿಲ್ಲ ಎಂದು ಪ್ರಮಾಣೀಕರಿಸಲ್ಪಟ್ಟ ಇತರೇ ಎಲ್ಲಾ ಬಾಕಿಗಳನ್ನು ಹೋಕು ಬಾಕಿ ಸಾಲದ ನಿಧಿಯಿಂದ ವಜಾ ಮಾಡಬಹುದು.ಅಂತಹ ಪ್ರಮಾಣೀಕರಣವನ್ನು ವಸೂಲಾತಿ ಅಧಿಕಾರಿಯವರು ಮಾಡತಕ್ಕದ್ದು.

83.2(ಅ)ಸಾಮಾನ್ಯ ಸಭೆಯಲ್ಲಿ ಹಾಜರಿದ್ದ ಮತದಾನದ ಹಕ್ಕುಳ್ಳ ಸದಸ್ಯರ ಮೂರನೇ ಎರಡಷ್ಟು ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ಮಂಜೂರಾತಿ ಪಡೆಯದೇ ಅಂತಹ ಹೋಕುಬಾಕಿ ಸಾಲ ಅಥವಾ ಇತರ ಬಾಕಿಗಳನ್ನು ಮನ್ನಾ ಮಾಡತಕ್ಕದ್ದಲ್ಲ;

(ಆ) ಬ್ಯಾಂಕು ಅಂತಹ ಯಾವುದೇ ಹೋಕು ಬಾಕಿ ಸಾಲಗಳನ್ನು ವಜಾ ಮಾಡುವ ಮೊದಲು ನಿಬಂಧಕರಿಂದ ಲಿಖಿತ ಮೂಲಕ ಒಪ್ಪಿಗೆಯನ್ನು ಪಡೆಯತಕ್ಕದ್ದು. ನಿಬಂಧಕರು ಒಪ್ಪಿಗೆ ನೀಡುವಾಗ ವಜಾ ಮಾಡುವ ಹೋಕುಬಾಕಿ ಸಾಲದ ಮೊಬಲಗನ್ನು ಭಾಗಶಃ ಅಥವಾ ಪೂರ್ಣ ಪುನರ್‌ಭರ್ತಿ/ ಪುನಃ ಸ್ಥಾಪನೆಗೊಳಿಸುವ ಬಗ್ಗೆ ಷರತ್ತುಗಳನ್ನು ವಿಧಿಸಬಹುದು.

(ಇ) ಹಾಗೆ ಮಂಜೂರಾತಿ ನೀಡುವಾಗ ಸಾಮಾನ್ಯ ನಿಕಾಯವು ಮನ್ನಾ ಮಾಡುವ ಹೋಕುಬಾಕಿ ಸಾಲದ ಮೊಬಲಗನ್ನು ಭಾಗಶ: ಅಥವಾ ಪೂರ್ಣ ಪುನಭರ್ತಿ/ ಪುನ: ಸ್ಥಾಪನೆಗೊಳಿಸುವ ಬಗ್ಗೆ ಷರತ್ತುಗಳನ್ನು ವಿಧಿಸಬಹುದು.

83.3 ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಭಾವಿ ಲಿಖಿತ ಮಂಜೂರಾತಿ ಪಡೆಯದೆ ಬ್ಯಾಂಕು ಭಾಗಶಃ ಅಥವಾ ಪೂರ್ಣವಾಗಿ ಈ ಕೆಳಕಂಡ ಸಾಲಗಳನ್ನು ವಜಾ ಮಾಡಕೂಡದು.

(ಅ) ಯಾವುದೇ ನಿರ್ದೇಶಕರಿಂದ ಅಥವಾ ಮಾಜಿ ನಿರ್ದೇಶಕರಿಂದ ಬರತಕ್ಕ ಸಾಲಗಳು ಅಥವಾ

(ಆ) ಬ್ಯಾಂಕಿನ ನಿರ್ದೇಶಕರು ಯಾವುದೇ ಪಾಲುಗಾರಿಕೆ ಸಂಸ್ಥೆ ಅಥವಾ ಕಂಪನಿ ಅಥವಾ ನೋಂದಾಯಿತ ಸಂಘದಲ್ಲಿ ಪಾಲುಗಾರರಾಗಿ ವ್ಯವಸ್ಥಾಪಕ ಪ್ರತಿನಿಧಿಯಾಗಿ, ನಿರ್ದೇಶಕರಾಗಿ ಅಥವಾ ಜಾಮೀನುದಾರರಾಗಿ ಆಸಕ್ತಿ ಇದ್ದಲ್ಲಿ ಅಂತಹ ಯಾವುದೇ ಸಂಸ್ಥೆ ಅಥವಾ ನೋಂದಾಯಿತ ಸಂಘಗಳಿಂದ ಬರತಕ್ಕ ಸಾಲಗಳು ಅಥವಾ

(ಇ) ಬ್ಯಾಂಕಿನ ನಿರ್ದೇಶಕರು ಯಾವುದೇ ಒಬ್ಬ ಸದಸ್ಯನ ಪಾಲುದಾರ ಅಥವಾ ಜಾಮೀನುದಾರನಾಗಿದ್ದರೆ ಅಂತಹ ಸದಸ್ಯನಿಂದ ಬರತಕ್ಕ ಸಾಲಗಳು.

83.4 ಮೇಲಿನ ನಿಯಮಗಳನ್ನು ಪಾಲಿಸದೆ ಮಾಡಲ್ಪಟ್ಟ ಯಾವುದೇ ಸಾಲದ ವಜಾ ಕಾನೂನು ಬಾಹಿರ ಹಾಗೂ ಜಾರಿಗೆ ಬರತಕ್ಕದ್ದಲ್ಲ.

**84. ಸುಸ್ತಿ ಸಾಲದ ಮೇಲೆ ಕಾನೂನು ಬದ್ಧ ಕ್ರಮ :**

ಸಾಲದ ಕರಾರು ಪತ್ರದಲ್ಲಿನ ಷರತ್ತುಗಳ ಪ್ರಕಾರ ಸಾಲಗಾರನು/ರು ಅಥವಾ ಜಾಮೀನುದಾರನು/ರು ತಾನು ಬ್ಯಾಂಕಿಗೆ ಸಲ್ಲಿಸಬೇಕಾದ ಬಾಕಿಯನ್ನು ಮರುಪಾವತಿ ಮಾಡಲು ತಪ್ಪಿದಲ್ಲಿ ಮಂಡಳಿಯವರು ಕಾನೂನು ಪ್ರಕಾರ ವಸೂಲಾತಿ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.ಸುಸ್ತಿ ಬಿದ್ದ ತಾರೀಖಿನಿಂದ 6 ತಿಂಗಳ ಅವದಿಯೊಳಗೆ ಬ್ಯಾಂಕಿನವರು ಕಾನೂನು ಬದ್ಧವಾಗಿ ವಸೂಲಾತಿ ಕ್ರಮವನ್ನು ತೆಗೆದುಕೊಳ್ಳುವುದು.

**85. ಖಾತರಿಗಳು ಮತ್ತು ಇತರೆ ನಷ್ಟ ಪರಿಹಾರಗಳು:**

ಮಂಡಳಿಯವರು ಅನುಮೋದಿಸಿದ ಖಾತೆದಾರರಿಗೆ ಬ್ಯಾಂಕಿನಲ್ಲಿ ಅವರು ಮೀಸಲಿತ್ತ ಠೇವಣಿ ಆಧಾರದ ಮೇಲೆ ಬ್ಯಾಂಕ್ ಖಾತೆದಾರರ ಪರವಾಗಿ ಖಾತರಿಗಳನ್ನು ಮತ್ತು ಇತರೆ ನಷ್ಟ ಪರಿಹಾರಗಳನ್ನು ಕೊಡಬಹುದು ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನವರು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಒಳಪಟ್ಟು ಖಾತರಿ ಅಥವಾ ನಷ್ಟ ಪರಿಹಾರದಲ್ಲಿ ನಮೂದಿಸಿರುವ ಅವಧಿ ಕೊನೆಗೊಳ್ಳವವರೆಗೂ ಹಾಗೆ ಮೀಸಲಿತ್ತ ಠೇವಣಿಗಳನ್ನು ವಾಪಸ್ಸು ಪಡೆಯಲು ಠೇವಣಿದಾರನಿಗೆ ಅವಕಾಶ ಕೊಡಕೂಡದು.

**86. ಸುಸ್ತಿದಾರರ ಅನರ್ಹತೆ :**

86.1 ಯಾವ ಸದಸ್ಯನ ವಿರುದ್ಧ ಪ್ರಮುಖ ಬಾಕಿದಾರನೆಂದು ಅವಾರ್ಡ್ / ಡಿಕ್ರಿ ನೀಡಲಾಗುತ್ತದೋ ಅಂತಹ ಸದಸ್ಯನು ಬ್ಯಾಂಕಿಗೆ ಸಲ್ಲಿಸಬೇಕಾದ ತೀರ್ಪಿಟ್ಟಮೊಬಲಗನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದ ತಾರೀಖಿನಿಂದ ಕನಿಷ್ಟ ಆರು ತಿಂಗಳವರೆಗೂ ಮತ್ತು ಯಾವ ಸದಸ್ಯನು ಮತ್ತೊಬ್ಬ ಬಾಕಿದಾರನಿಗೆ ಜಾಮೀನುದಾರನೆಂದು ಅವಾರ್ಡ್/ಡಿಕ್ರಿ ನೀಡಲಾಗುತ್ತದೋ ಅಂತಹ ಸದಸ್ಯನು ಬ್ಯಾಂಕಿಗೆ ಸಲ್ಲಿಸಬೇಕಾದ ತೀರ್ಪಿಟ್ಟ ಮೊಬಲಗನ್ನು ಮರುಪಾವತಿ ಮಾಡುವ ತಾರೀಖಿನವರೆಗೆ ಸಾಲ ಪಡೆಯಲು ಮತ್ತು ಜಾಮೀನುದಾರನಾಗಲು ಹಕ್ಕು ಇರುವುದಿಲ್ಲ.

86.2 ಸಾಲದ ಮೊತ್ತವನ್ನು ಪೂರ್ಣಮರುಪಾವತಿ ಮಾಡಿದ ತಾರೀಖಿನಿಂದ 3 ವರ್ಷಗಳ ನಂತರ ಪ್ರಮುಖ ಬಾಕಿದಾರನು ಸಾಲಕ್ಕಾಗಿ ಅರ್ಜಿಸಲ್ಲಿಸಿಕೊಂಡಲ್ಲಿ ಮಂಡಳಿಯವರು ಅಂತಹ ಸದಸ್ಯನಿಗೆ ಪುನಃ ಸಾಲ ಪಡೆಯುವ ಹಕ್ಕನ್ನು ಕೊಡಬಹುದು.ಆದರೆ ಜಾಮೀನುದಾರರು ಪೂರ್ಣವಾಗಿ ಸಾಲತೀರಿಸಿದ ನಂತರ ಎಲ್ಲಾ ಹಕ್ಕುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

**87. ಸಾಲ ತೀರುವಳಿ ಅವಧಿಯ ವಿಸ್ತರಣೆ:**

87.1 ಸಾಲಗಾರರು ಅವಧಿಗೆ ಮುಂಚೆಯೇ ಮಂಡಳಿಗೆ ಮನವಿಯನ್ನು ಲಿಖಿತವಾಗಿ ಸಲ್ಲಿಸಿದರೆ ಮಂಡಳಿಯವರು ಸಾಲದ ಮೂಲ ಷರತ್ತುಗಳನ್ನು ಬದಲಾಯಿಸಬಹುದು.ಅಂತಹ ತೀರುವಳಿ ವಿಸ್ತರಣಾ ಅವಧಿಯು ಸಾಲದ ಅಥವಾ ಸಾಲದ ಕಂತಿನ ಮರುಪಾವತಿಯ ಅಂತಿಮ ತಾರೀಖಿನಿಂದ 6 ತಿಂಗಳಿಗೆ ಮೀರಿರಕೂಡದು.

87.2 ಕಾಯಂ ಠೇವಣಿಗಳು ಸರ್ಕಾರದ ಭದ್ರತೆಗಳ ಇತರೆ ಅಂಗೀಕೃತ ವಿಶ್ವಸ್ಥ ಭದ್ರತೆಗಳ (ಟ್ರಸ್ಟೀ ಸೆಕ್ಯುರಿಟೀಸ್) ಪಕ್ವಕಾಲದ ಮೌಲ್ಯವು ಅಂತಹ ಭದ್ರತೆಗಳ ಆಧಾರದ ಮೇಲೆ ಪಡೆದ ಸಾಲಗಳ (ಅಸಲು ಬಡ್ಡಿ ಸೇರಿ) ಮೊಬಲಗಿಗಿಂತ ಶೇಕಡಾ 25 ರಷ್ಟು ಹೆಚ್ಚಿಗೆ ಇದ್ದಲ್ಲಿ ಮಂಡಳಿಯು ಸದರಿ ಸಾಲಗಳ ಮರುಪಾವತಿಗೆ ಅಂತಹ ಭದ್ರತೆಗಳ ಪಕ್ವಕಾಲದ (ಡೇಟ್ ಆಫ್ ಮೆಚ್ಯುರಿಟಿ) ವರೆವಿಗೂ ಕಾಲಾವಕಾಶ ನೀಡಬಹುದು.

87.3 ಸಾಲಗಾರರ ಕೋರಿಕೆಯ ಮೇಲೆ ವಿಶೇಷ ಸಂದರ್ಭಗಳಲ್ಲಿ ಸಣ್ಣ ಕೈಗಾರಿಕೆ ಉದ್ಯಮ ಮತ್ತು ಘಟಕಗಳಿಗೆ ಮತ್ತು ಇತರರಿಗೆ ನೀಡಿದ ಸಾಲಗಳನ್ನು ಮುಂಗಡಗಳನ್ನು ಮಂಡಳಿಯು ಮರು ನಿಗದಿಪಡಿಸಬಹುದು.

## ಅಧ್ಯಾಯ – 12

## ನಗದು ಹಣ, ಅಮೂಲ್ಯ ವಸ್ತುಗಳ ಮತ್ತು ತೊಡಗಣೆಗಳ ಅಭಿರಕ್ಷೆ

### 88. ನಗದು ಹಣದ ಅಭಿರಕ್ಷೆ

ಬ್ಯಾಂಕಿನ ನಗದು ಹಣ ಮತ್ತು ಬೀಗದ ಕೈಗಳು ಕಾರ್ಯದರ್ಶಿಯವರು / ಪ್ರಧಾನ ವ್ಯವಸ್ಥಾಪಕರ / ಸಹಾಯಕ ವ್ಯವಸ್ಥಾಪಕರ / ಲೆಕ್ಕಿಗರ / ಅಥವಾ ಮಂಡಳಿಯಿಂದ ಅಧಿಕಾರ ಪಡೆದ ಯಾವುದೇ ಅಧಿಕಾರಿ ಮತ್ತು ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲಿ ಜೋಡಿ ಬೀಗ ಹೊಂದಿರುವ ವ್ಯವಸ್ಥೆಯಲ್ಲಿರತಕ್ಕದ್ದು. ಜಂಟಿ ಭದ್ರತೆಯಲ್ಲಿರುವ ಹಣದ ಮಿತಿಯನ್ನು ಮಂಡಳಿಯವರು ಕಾಲಕಾಲಕ್ಕೆ ನಿಗದಿ ಪಡಿಸತಕ್ಕದ್ದು.

### 89. ಈಡು ಮಾಡುವ ಅಮೂಲ್ಯ ವಸ್ತುಗಳ ಮತ್ತು ಒಡವೆಗಳ ಅಭಿರಕ್ಷೆ :

ಬ್ಯಾಂಕಿಗೆ ಈಡು ಮಾಡುವ ಅಮೂಲ್ಯವಸ್ತುಗಳು ಮತ್ತು ಒಡವೆ ಮೊದಲಾದವುಗಳನ್ನು ಕಾರ್ಯದರ್ಶಿಯವರ / ಪ್ರಧಾನ ವ್ಯವಸ್ಥಾಪಕರ / ವ್ಯವಸ್ಥಾಪಕರ / ಶಾಖಾವ್ಯವಸ್ಥಾಪಕರ / ಸಹಾಯಕ ವ್ಯವಸ್ಥಾಪಕರ / ಲೆಕ್ಕಿಗರ / ಅಥವಾ ಮಂಡಳಿಯಿಂದ ನಿಯೋಜಿಸಲ್ಪಟ್ಟ ಯಾವುದೇ ಅಧಿಕಾರಿಗಳ ಜಂಟಿ ಅಭಿರಕ್ಷೆಯಲ್ಲಿ ಜಂಟಿಯಾಗಿ ವ್ಯವಹರಿಸುವ ಜೋಡಿ ಬೀಗ ವ್ಯವಸ್ಥೆಯಲ್ಲಿ ಇಡತಕ್ಕದ್ದು.

### 90. ದಸ್ತಾವೇಜು ಇತ್ಯಾದಿಗಳ ಅಭಿರಕ್ಷೆ:

ಬ್ಯಾಂಕಿನ ಎಲ್ಲಾ ವಿಧವಾದ ದಸ್ತಾವೇಜುಗಳನ್ನು, ಆಧಾರ ಪತ್ರಗಳನ್ನು, ಸಾಲ ಪತ್ರಗಳನ್ನು ಮತ್ತು ಅಮೂಲ್ಯ ಸುಲೇಖಗಳನ್ನು ಕಾರ್ಯದರ್ಶಿ / ಪ್ರಧಾನ ವ್ಯವಸ್ಥಾಪಕರ / ವ್ಯವಸ್ಥಾಪಕರ / ಶಾಖಾ ವ್ಯವಸ್ಥಾಪಕರ / ಸಹಾಯಕ ವ್ಯವಸ್ಥಾಪಕರ/ ಲೆಕ್ಕಿಗರ ಅಥವಾ ಮಂಡಳಿಯಿಂದ ನಿಯೋಜಿಸಲ್ಪಟ್ಟಿರುವ ಯಾವುದೇ ಅಧಿಕಾರಿಗಳ ಜಂಟಿ ಅಭಿರಕ್ಷೆಯಲ್ಲಿ ಜಂಟಿಯಾಗಿ ವ್ಯವಹರಿಸುವಜೋಡಿ ಬೀಗವುಳ್ಳ ವ್ಯವಸ್ಥೆಯಲ್ಲಿ ಇಡತಕ್ಕದ್ದು.

## ಅಧ್ಯಾಯ – 13

## ಲೆಕ್ಕಗಳು ಮತ್ತು ಆಸ್ತಿ ಜವಾಬ್ದಾರಿ ಪಟ್ಟ

**91. ಲೆಕ್ಕಗಳು :**

ಲೆಕ್ಕ ಪುಸ್ತಕಗಳನ್ನು, ಖಾತೆ ಪುಸ್ತಕಗಳನ್ನು ಮತ್ತು ರಿಜಿಸ್ಟರುಗಳನ್ನು ಮಂಡಳಿಯ ನಿರ್ದೇಶನದ ಮೇಲೆ ಮತ್ತು ಮೇಲ್ವಿಚಾರಣೆಯಲ್ಲಿ ಇಡತಕ್ಕ ಜವಾಬ್ದಾರಿಯು ಕಾರ್ಯದರ್ಶಿ / ಪ್ರಧಾನ ವ್ಯವಸ್ಥಾಪಕ / ವ್ಯವಸ್ಥಾಪಕ / ಶಾಖಾ ವ್ಯವಸ್ಥಾಪಕ / ಸಹಾಯಕ ವ್ಯವಸ್ಥಾಪಕರುಗಳಿಗೆ ಇರತಕ್ಕದ್ದು. ಭಾರತೀಯ ರಿಸರ್ವ್ ಬ್ಯಾಂಕಿನ, ನಿಬಂಧಕರ ಯಾವುದೇ ಅಧಿಕಾರಿಗಳಿಗೂ ಮತ್ತು ಲೆಕ್ಕಪರಿಶೋಧಕರಿಗೂ ಅವಶ್ಯವಿದ್ದು ಅವರು ಬಯಸಿದಾಗ ಲೆಕ್ಕ ಪುಸ್ತಕಗಳು, ಪಟ್ಟಿಗಳು, ದಾಖಲೆಗಳು ಮೊದಲಾದವುಗಳನ್ನು ಮಂಡಿಸುವ ಜವಾಬ್ದಾರಿಯು ಬ್ಯಾಂಕಿನ ಅಧಿಕಾರಿಗಳಿಗೆ ಇರತಕ್ಕದ್ದು. ದಾಖಲೆಗಳು, ಪುಸ್ತಕಗಳು, ಖಾತೆ ಪುಸ್ತಕಗಳು ರಿಜಿಸ್ಟರುಗಳು, ದಸ್ತಾವೇಜು ಪತ್ರಗಳು, ರಶೀತಿಗಳು ಮೊದಲಾದವುಗಳನ್ನು ಯಥಾರ್ಥವಾಗಿ ಮತ್ತು ಪರಿಪೂರ್ಣವಾಗಿ ನಿರ್ವಹಿಸಲು ಮತ್ತು ಅಭಿರಕ್ಷೆಯಲ್ಲಿಡಲು ಸೂಕ್ತವಾದ ವ್ಯವಸ್ಥೆ ಮಾಡುವುದಕ್ಕೆ ಕಾರ್ಯದರ್ಶಿ / ಪ್ರಧಾನ ವ್ಯವಸ್ಥಾಪಕ / ವ್ಯವಸ್ಥಾಪಕ / ಶಾಖಾ ವ್ಯವಸ್ಥಾಪಕ / ಸಹಾಯಕ ವ್ಯವಸ್ಥಾಪಕರು ಜವಾಬ್ದಾರರಾಗಿರುವರು ಮತ್ತು ಮಂಡಳಿಯವರು ಅವಶ್ಯವೆಂದು ಬಯಸಿದಾಗ ಅವುಗಳನ್ನು ಮಂಡಳಿಯ ಮುಂದೆ ಮಂಡಿಸತಕ್ಕದ್ದು. ಎಲ್ಲಾ ಬಗೆಯ ಲೆಕ್ಕಗಳನ್ನು ಕಾಲಕಾಲಕ್ಕೆ ನಿರ್ಧರಿಸುವಂತೆ ಮುಗಿಸತಕ್ಕದ್ದು ಮತ್ತು ಅಂತಿಮ ಲೆಕ್ಕಗಳನ್ನು ನಿಗದಿಯಾದ ನಮೂನೆಯಲ್ಲಿ ತಯಾರಿಸಿ ಸಕಾಲದಲ್ಲಿ ಶಾಸನಬದ್ಧ ಪ್ರತ್ಯರ್ಪಣೆಗಳನ್ನು ಸಲ್ಲಿಸತಕ್ಕದ್ದು.ಮಂಡಳಿಯು ರೂಪಿಸಿದ ನಿಯಮಗಳ ಪ್ರಕಾರ ಲೆಕ್ಕ ಪತ್ರಗಳನ್ನು ಮತ್ತು ರಿಜಿಸ್ಟರ್‌ಗಳನ್ನು ಸುವ್ಯವಸ್ಥೆಯಲ್ಲಿಡತಕ್ಕದ್ದು.

**92. ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳು:**

92.1 1949 ನೇ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ (ಸಹಕಾರ ಸಂಘಗಳಿಗೆ ಅನ್ವಯಿಸುವ) ಪರಿಶಿಷ್ಟ 111 ರಲ್ಲಿ ನಮೂದಿಸಿರುವ ನಮೂನೆಗಳಲ್ಲಿ ಅಥವಾ ಅವುಗಳಲ್ಲಿ ಆದಷ್ಟು ಹತ್ತಿರವಿರುವ ರೂಪದಲ್ಲಿ ಪ್ರತಿವರ್ಷ ಮಾರ್ಚ್ ತಿಂಗಳು ಅಂತ್ಯಗೊಳ್ಳುವ ವರ್ಷದಲ್ಲಿ ಬ್ಯಾಂಕು ತಾನು ವ್ಯವಹಾರ ಮಾಡಿರುವ ಬಗ್ಗೆ ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಲಾಭ ನಷ್ಟದ ಪಟ್ಟಿಗಳನ್ನು ತಯಾರಿಸತಕ್ಕದ್ದು.

92.2 ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಲಾಭ ನಷ್ಟದ ಪಟ್ಟಿಗಳನ್ನು ಬ್ಯಾಂಕಿನ ಅಧ್ಯಕ್ಷರು ಮುಖ್ಯ ಕಾರ್ಯನಿರ್ವಾಹಕರು, ಲೆಕ್ಕಿಗರು ಮತ್ತು ಕನಿಷ್ಟ ಇಬ್ಬರು ನಿರ್ದೇಶಕರು ಸಹಿ ಮಾಡತಕ್ಕದ್ದು.

92.3 ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಲಾಭ ನಷ್ಟದ ಪಟ್ಟಿಯನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಸಾಲಾಖೈರಿನ 6 ತಿಂಗಳೊಳಗಾಗಿ ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಹಾಗೆ ಆರು ತಿಂಗಳೊಳಗಾಗಿ ಪ್ರಕಟಿಸಲು ಸಾಧ್ಯವಾಗದಿದ್ದಲ್ಲಿ 3 ತಿಂಗಳ ಕಾಲಾವಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪಡೆಯಬೇಕು.

ಆದಾಗ್ಯೂ ಈ ಮೇಲೆ ತಿಳಿಸಿದ ಪಟ್ಟಿಗಳನ್ನು ಲೆಕ್ಕಪತ್ರಗಳ ಪೂರೈಕೆಯ ದಿನದಿಂದ ಎರಡು ತಿಂಗಳೊಳಗಾಗಿ ಕಾಯಿದೆಯ ಪ್ರಕಾರ ನಿಬಂಧಕರಿಗೆ ಮತ್ತು ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಒಪ್ಪಿಸತಕ್ಕದ್ದು.

## ಅಧ್ಯಾಯ – 14

## ಆಂತರಿಕ ಲೆಕ್ಕ ತಪಾಸಿಗರು

**93. ಆಂತರಿಕ ಲೆಕ್ಕ ತಪಾಸಿಗರ ನೇಮಕ:**

ಮಂಡಳಿಯವರು ನಿಗದಿಪಡಿಸಿದ ಸಂಭಾವನೆಯ ಮೇಲೆ ಪ್ರತಿ ವರ್ಷ ಆಂತರಿಕ ಲೆಕ್ಕ ತಪಾಸಿಗರನ್ನು ನೇಮಕ ಮಾಡಿಕೊಳ್ಳಬಹುದು.

**94. ಆಂತರಿಕ ಲೆಕ್ಕ ತಪಾಸಿಗರ ಅರ್ಹತೆಗಳು:**

ಉಪವಿಧಿ 93 ರಡಿಯಲ್ಲಿ ನೇಮಕ ಮಾಡಿಕೊಳ್ಳುವ ಆಂತರಿಕ ಲೆಕ್ಕ ತಪಾಸಿಗರು ಕನಿಷ್ಟ ಪಕ್ಷ ಈ ಕೆಳಗಿನ ಅರ್ಹತೆಗಳಲ್ಲಿ ಒಂದನ್ನಾದರೂ ಹೊಂದಿರತಕ್ಕದ್ದು.

(ಅ) ಸಹಕಾರ ಉನ್ನತ ಡಿಪ್ಲೋಮೊ

(ಆ) ಚಾರ್ಟರ್ಡ್ ಅಕೌಂಟೆಂಟ್

(ಇ) ಬ್ಯಾಂಕಿನ ಪರಿವೀಕ್ಷಣೆಯಲ್ಲಿ ಅನುಭವ ಪಡೆದ ರಿಸರ್ವ್ ಬ್ಯಾಂಕಿನ : ವಾಣಿಜ್ಯ ಬ್ಯಾಂಕಿನ ನಿವೃತ್ತ ಅಧಿಕಾರಿಗಳು.

**95. ಆಂತರಿಕ ಲೆಕ್ಕ ತಪಾಸಿಗರ ಕರ್ತವ್ಯಗಳು:**

95.1 ಬ್ಯಾಂಕಿನ ಜಮಾ ಮತ್ತು ಖರ್ಚುಗಳ ಹಾಗೂ ಆದಾಯ ಮತ್ತು ವೆಚ್ಚಗಳ ಪ್ರತಿಯೊಂದು ವ್ಯವಹಾರವನ್ನು ಪರಿಶೀಲಿಸಿ ಸರಿಯಾಗಿದೆ ಎಂಬ ಬಗ್ಗೆ ಪ್ರಮಾಣೀಕರಿಸುವುದು / ಖಾತ್ರಿ ಪಡಿಸುವುದು.

95.2 ಪ್ರತಿ ತ್ರೈಮಾಸಿಕ ಅವಧಿಗೆ ಬ್ಯಾಂಕಿನ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡುವುದು ಮತ್ತು ಮಂಡಳಿಯವರು ನಿಗದಿಪಡಿಸಿದ ನಮೂನೆಯಲ್ಲಿ ತಮ್ಮ ಅಭಿಪ್ರಾಯಗಳೊಂದಿಗೆ ತಪಾಸಣೆ ವರದಿಯನ್ನು ಮಂಡಳಿಯ ಅವಗಾಹನೆಗಾಗಿ ಕಳುಹಿಸಿಕೊಡುವುದು.

95.3 ಭಾರತೀಯ ರಿಸರ್ವ್ ಬ್ಯಾಂಕಿನವರು ಆಗಿಂದಾಗ್ಗೆ ನಿಗದಿಗೊಳಿಸುವ ಸೂಚನೆಯಂತೆ ಬ್ಯಾಂಕಿನ ಹೋಕುಬಾಕಿ ಮತ್ತು ಸಂಶಯಾತ್ಮಕ ಸಾಲಗಳನ್ನು ಗೊತ್ತುಪಡಿಸುವುದು.

95.4 ಪ್ರತಿ ವರ್ಷ ಮಾರ್ಚ್ 31 ನೇ ತಾರೀಖಿಗೆ ಅಂತ್ಯವಾಗುವ ಹಿಂದಿನ ವರ್ಷದ ಬ್ಯಾಂಕಿನ ಕಾರ್ಯವೈಖರಿ ಬಗ್ಗೆ ಮತ್ತು ಆ ಸಾಲಿನ ಆಸ್ತಿ ಜವಾಬ್ದಾರಿ ಪಟ್ಟಿಯ ಮೇಲೆ ಒಂದು ಸಂಕ್ಷಿಪ್ತ ವರದಿಯನ್ನು ಪ್ರತಿ ವರ್ಷವೂ ಮೇ ತಿಂಗಳ 31 ನೇ ತಾರೀಖು ಅಥವಾ ಅದಕ್ಕೂ ಮುಂಚೆ ಸಿದ್ಧಪಡಿಸಿ ಅವುಗಳನ್ನು ಮಂಡಳಿಗೆ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಡೆಸಲು ಅನುಕೂಲವಾಗುವಂತೆ ಮಂಡಿಸಲು ಮತ್ತು ಸಹಕಾರಿ ನಿಬಂಧಕರಿಗೆ / ಲೆಕ್ಕತಪಾಸಣಾ ನಿರ್ದೇಶಕರಿಗೆ ಸಲ್ಲಿಸುವುದು.

**96. ಆಂತರಿಕ ಲೆಕ್ಕ ತಪಾಸಿಗರನ್ನು ತೆಗೆದುಹಾಕುವುದು:**

ಲೆಕ್ಕ ತಪಾಸಿಗರು ತಮ್ಮ ನೇಮಕವಾದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಬ್ಯಾಂಕಿನ ಲೆಕ್ಕಗಳನ್ನು ತಪಾಸಣೆ ಮಾಡಿ ತಮ್ಮ ಪ್ರಥಮ ತಪಾಸಣಾ ವರದಿಯನ್ನು ಮತ್ತು ಮುಂದಿನ ತಪಾಸಣಾ ವರದಿಗಳನ್ನು ಸಂಬಂಧಪಟ್ಟ ತ್ರೈಮಾಸಿಕದಂತ್ಯದ 30 ದಿವಸಗಳೊಳಗಾಗಿ ಮಂಡಳಿಗೆ ನೀಡದೆ ಇದ್ದಲ್ಲಿ ನಿರ್ದೇಶಕ ಮಂಡಳಿಯವರು ಆ ಲೆಕ್ಕ ತಪಾಸಿಗರಿಗೆ ಸೂಕ್ತ ಸೂಚನೆ ನೀಡಿದ ನಂತರ ಅವರನ್ನು ಆ ಸ್ಥಾನದಿಂದ ತೆಗೆದುಹಾಕಬಹುದು ಮತ್ತು ಉಳಿದ ಅವಧಿಗೆ ಅವರ ಸ್ಥಾನದಲ್ಲಿ ಅವಶ್ಯವಾದ ಅರ್ಹತೆಯುಳ್ಳ ಹೊಸ ಲೆಕ್ಕ ತಪಾಸಿಗರನ್ನು ಸೂಕ್ತ ಸಂಭಾವನೆಯ ಮೇರೆಗೆ ನೇಮಕ ಮಾಡಿಕೊಳ್ಳಬಹುದು.

**97. ಮಧ್ಯಂತರದಲ್ಲಿ ತೆರವಾದ ಸ್ಥಾನಗಳು:**

ಲೆಕ್ಕ ತಪಾಸಿಗರ ಮರಣ, ರಾಜೀನಾಮೆ ಅಥವಾ ಇನ್ನಾವುದೇ ಕಾರಣದಿಂದ ಆ ಸಾಲಿನಲ್ಲಿ ತೆರವಾಗುವ ಸ್ಥಾನಗಳಿಗೆ ಮಂಡಳಿಯು ನೇಮಕ ಮಾಡಬೇಕು.ಯಾವುದೇ ಲೆಕ್ಕ ತಪಾಸಿಗರು ಅವರ ಅವಧಿ ಮುಗಿಯುವುದಕ್ಕೆ ಮೊದಲೇ ತಮ್ಮ ರಾಜೀನಾಮೆ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕರಿಗೆ ಸಲ್ಲಿಸಿ ಅದು ಮಂಡಳಿಯಿಂದ ಅಂಗೀಕೃತವಾದರೆ ಅವರ ಸ್ಥಾನವು ತೆರವಾಗಿದೆಯೆಂದು ಭಾವಿಸತಕ್ಕದ್ದು.

**98. ದಾಖಲೆ ಪುಸ್ತಕಗಳಿಗೆ ಪ್ರವೇಶಾಧಿಕಾರ:**

ಲೆಕ್ಕ ತಪಾಸಿಗರು ಬ್ಯಾಂಕಿನ ಎಲ್ಲಾ ದಾಖಲುಗಳು, ಪುಸ್ತಕಗಳು, ಖಾತೆಗಳು, ಓಚರುಗಳು ಮೊದಲಾದವುಗಳನ್ನು ಬೇಕಾದಾಗ ಪಡೆಯಲು ಮತ್ತು ನಗದು ಶಿಲ್ಕು ಹಾಗೂ ಭದ್ರತೆಗಳನ್ನು ಪರಿಶೀಲಿಸಲು ಅಧಿಕಾರ ಹೊಂದಿರತಕ್ಕದ್ದು.ಲೆಕ್ಕ ತಪಾಸಿಗರು ಬ್ಯಾಂಕಿನ ಲೆಕ್ಕಗಳಿಗೆ ಸಂಬಂಧಪಟ್ಟ ಪತ್ರಗಳನ್ನು ಅಥವಾ ದಾಖಲೆಗಳನ್ನು ತರಿಸಿಕೊಳ್ಳಲು ಅಧಿಕಾರ ಹೊಂದಿದ್ದು ಲೆಕ್ಕಪತ್ರಗಳ ತಪಾಸಣೆಗೆ ಸಂಬಂಧಿಸಿದಂತೆ ಯಾವುದೇ ಕ್ರಮ / ವ್ಯವಹಾರದ ಬಗ್ಗೆ ವಿಶೇಷ ವರದಿ ತಯಾರಿಸಿ ಸೂಕ್ತ ಕ್ರಮಕ್ಕಾಗಿ ಮಂಡಲಿಗೆ ನೀಡತಕ್ಕದ್ದು.ಬ್ಯಾಂಕಿನ ಕಾರ್ಯ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದಂತೆ ತಪಾಸಿಗರು ಅಪೇಕ್ಷಿಸುವ ಎಲ್ಲಾ ಮಾಹಿತಿಗಳನ್ನು ಒದಗಿಸಲು ಮಂಡಳಿ ಮುಖ್ಯ ಕಾರ್ಯನಿರ್ವಾಹಕರು / ವ್ಯವಸ್ಥಾಪಕರ / ಶಾಖಾ ವ್ಯವಸ್ಥಾಪಕರ ಮತ್ತು ಸಿಬ್ಬಂದಿವರ್ಗದ ಯಾವ ಸದಸ್ಯರೇ ಆಗಲೀ ಬದ್ಧರಾಗಿರುತ್ತಾರೆ.

## ಅಧ್ಯಾಯ – 15

## ಲಾಭದ ವಿಂಗಡಣೆ

**99. ನಿವ್ವಳ ಲಾಭ ವಿಭಜನಾ ಕ್ರಮ:**

ಕರ್ನಾಟಕ ಸಹಕಾರ ಸಂಘಗಳ ನಿಯಮಗಳ 22 ನೇ ನಿಯಮದಲ್ಲಿ ನಮೂದಿಸಿರುವಂತೆ ಆಯಾ ವರ್ಷದಲ್ಲಿ ಬ್ಯಾಂಕು ಗಳಿಸಿದ ನಿವ್ವಳ ಲಾಭವನ್ನು ಸಾಮಾನ್ಯಸಭೆಯಲ್ಲಿ ಘೋಷಿಸತಕ್ಕದ್ದು.ಮತ್ತು ಈ ಕೆಳಕಂಡಂತೆ ವಿಂಗಡಣೆ ಮಾಡತಕ್ಕದ್ದು.ನಿವ್ವಳ ಲಾಭವನ್ನು ಈ ಕೆಳಗಿನಂತೆ ವಿಂಗಡಣೆ ಮಾಡುವುದಕ್ಕೆ ಮುಂಚೆ ಹಿಂದಿನ ವರ್ಷ ಅಥವಾ ವರ್ಷಗಳಲ್ಲಿ ಕ್ರೋಢೀಕೃತವಾದ ನಷ್ಟಗಳನ್ನು ಈ ನಿವ್ವಳ ಲಾಭದಲ್ಲಿ ವಜಾ ಮಾಡಿ ಉಳಿದ ಲಾಭವನ್ನು ಮಾತ್ರ ವಿಭಜನೆ ಮಾಡತಕ್ಕದ್ದು.

99.1 ನಿವ್ವಳ ಲಾಭದ ಕನಿಷ್ಟ ಶೇಕಡ 25 ರಷ್ಟನ್ನು ಮೀಸಲು ನಿಧಿಗೆ ಸೇರಿಸತಕ್ಕದ್ದು (ರಿಸರ್ವ್ ಫಂಡ್)

99.2 ಅ) ಉಳಿದ ಲಾಭದಲ್ಲಿ ಶೇಕಡಾ 2ರಷ್ಟನ್ನು ಸಹಕಾರ ಶಿಕ್ಷಣ ನಿಧಿಗೆ ತೆಗೆದಿರಿಸತಕ್ಕದ್ದು ಮತ್ತು ಅದನ್ನು ಸಾಮಾನ್ಯ ಸಭೆಯು ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ಕಳುಹಿಸತಕ್ಕದ್ದು.

ಆ) (ಕೈಬಿಡಲಾಗಿದೆ).

99.3 ಉಳಿದ ಲಾಭಾಂಶವನ್ನು ಈ ಕೆಳಕಂಡಂತೆ ವಿನಿಯೋಗಿಸುವುದು.

99.4 ಅ) ಶೇ. 40 ಕ್ಕೆ ಮೀರದ ಮೊಬಲಗನ್ನು ಕರಡು ಸಾಲದ (ಹೋಕುಬಾಕಿ) ನಿಧಿಗೆ ಸೇರಿಸಬಹುದು.

ಆ) ಶೇ. 10 ಕ್ಕೆ ಮೀರದ ಮೊಬಲಗನ್ನು ಕಟ್ಟಡದ ನಿಧಿಗೆ ಸೇರಿಸಬಹುದು.

ಇ) ಶೇ. 3 ಕ್ಕೆ ಮೀರದ ಮೊಬಲಗನ್ನು ಸಿಬ್ಬಂದಿ ಉಪದಾನ ನಿಧಿ (ಗ್ರಾಚುಯಿಟಿ) ನಿಧಿಗೆ ಸೇರಿಸಬಹುದು.

ಈ) ಶೇಕಡ 5 ಕ್ಕೆ ಮೀರದಂತೆ ಮೊಬಲಗನ್ನು ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರ ಕ್ಷೇಮ ನಿಧಿಗೆ ವರ್ಗಾಯಿಸುವುದು.

ಉ) ಶೇ. 3 ಕ್ಕೆ ಮೀರದ ಮೊಬಲಗನ್ನು (ಸಾಮಾನ್ಯ ಸಭೆಯು ನಿರ್ಧರಿಸಬಹುದಾದ) ಧಾರ್ಮಿಕ ಉದ್ದೇಶಗಳಿಗೆ ವಿನಿಯೋಗಿಸುವ ಧರ್ಮದ ನಿಧಿಗೆ ಸೇರಿಸಬಹುದು.

ಊ) ಶೇ. 4 ಕ್ಕೆ ಮೀರದ ಮೊಬಲಗನ್ನು ಪ್ರಚಾರ ನಿಧಿಗೆ ಸೇರಿಸಬಹುದು.

ಋ) (ಕೈಬಿಡಲಾಗಿದೆ)

(ಎ) ಶೇ. 10ಕ್ಕೆ ಮೀರದ ಮೊಬಲಗನ್ನು ಹೂಡಿಕೆಗಳ ಏರಿಳಿತದ ನಿಧಿಗೆ ಸೇರಿಸಬಹುದು

(ೠ)ಸಹಕಾರ ಕಾಯಿದೆ ಮತ್ತು ಬೋನಸ್ ಕಾಯಿದೆ ಪ್ರಕಾರ ಸಿಬ್ಬಂದಿಗೆ ಬೋನಸ್ ಅಥವಾ ಎಕ್ಸ್‌ಗ್ರೇಷಿಯಾ ಕೊಡಬಹುದು.

ಎ) ಉಳಿಕೆಯ ಮೊಬಲಗಿನಲ್ಲಿ ಸಾಮಾನ್ಯ ಸಭೆಯ ತೀರ್ಮಾನದಂತೆ, ಸದಸ್ಯರ ಷೇರಿನ ಮೇಲೆ ಸಹಕಾರ ಕಾಯಿದೆ ಮತ್ತು ಕಾನೂನಿಗೊಳಪಟ್ಟು ಅಪೇಕ್ಷಿತ ಲಾಭಾಂಶ (ಡಿವಿಡೆಂಡ್) ಘೋಷಿಸತಕ್ಕದ್ದು.

ಏ) ಉಳಿದ ಲಾಭವನ್ನು ಸಾಮಾನ್ಯ ಸಭೆಯವರ ಫೈಸಲಾತಿ ಮೇರೆಗೆ,

1. ಶೇ.3 ಕ್ಕೆ ಮೀರದ ಮೊಬಲಗನ್ನು ಗೋಲ್ಡನ್ ಜ್ಯೂಬಿಲಿ ಫಂಡ್‌ಗೆ ಸೇರಿಸಬಹುದು.

2. ಶೇ.7 ಕ್ಕೆ ಮೀರದ ಮೊಬಲಗನ್ನು ಲಾಭಾಂಶ ಸಮತೋಲನ ನಿಧಿಗೆ ಸೇರಿಸಬಹುದು.

3. ಸದಸ್ಯರ ವಿಮಾ ನಿಧಿ.

4. ಸಾರ್ವಜನಿಕ ವಿದ್ಯಾ ನಿಧಿ.

5. ಸದಸ್ಯರ ವೈದ್ಯಕೀಯ ಸೌಲಭ್ಯ ನಿಧಿ.

ಇತ್ಯಾದಿಗಳಿಗೆ ವಿನಿಯೋಗಿಸಲು ಅವಕಾಶವಿರತಕ್ಕದ್ದು.ಇವೆಲ್ಲ ಆಗಿ ಮಿಕ್ಕ ಮೊಬಲಗನ್ನು ಬ್ಯಾಂಕಿನ ಮೀಸಲು ನಿಧಿ (ರಿಸರ್ವ್ ಫಂಡ್) ಗೆ ಸೇರಿಸತಕ್ಕದ್ದು.

**100. ಲಾಭಾಂಶ ಲೆಕ್ಕಹಾಕುವುದು:**

100.1 ಸಹಕಾರ ವರ್ಷದ ಒಂದು ತ್ರೈಮಾಸಿಕದಲ್ಲಿ ಸದಸ್ಯರಾಗಿ ಸೇರಿಸಲ್ಪಟ್ಟ ಎಲ್ಲಾ ವ್ಯಕ್ತಿಗಳು ಆ ವರ್ಷದ ಉಳಿಕೆ ತ್ರೈಮಾಸಿಕಗಳಿಗೆ ಹೊಂದಿಕೆಯಾದ ಪ್ರಮಾಣದಲ್ಲಿ ಲಾಭಾಂಶವನ್ನು ಪಡೆಯಲು ಅರ್ಹರಾಗಿರುತ್ತಾರೆ.

100.2 ತನ್ನ ಷೇರುಗಳನ್ನುಬೇರೆಯವರಿಗೆ ವರ್ಗಾಯಿಸಿದ ಸದಸ್ಯನು ಆ ಷೇರುಗಳ ಮೇಲೆ ವರ್ಗಾವಣೆ ಜಾರಿಯಾದ ಸಾಲಿಗೆ ಲಾಭಾಂಶ ಪಡೆಯಲು ಅರ್ಹನಲ್ಲ. ಬ್ಯಾಂಕು ಸದಸ್ಯನ ಷೇರುಗಳನ್ನು ಸಾಲ ಬಾಕಿಗಾಗಿ ಕಲಂ 35 ರ ಅನ್ವಯ ಸರಿಹೊಂದಿಸಿಕೊಂಡಿದ್ದರೆ ಅಂತಹ ಷೇರುಗಳ ಮೇಲೆ ಸರಿಹೊಂದಿಸಿಕೊಂಡ ಸಾಲಿನಲ್ಲಿ ಲಾಭಾಂಶವನ್ನು ಪಾವತಿ ಮಾಡಕೂಡದು.

**101. ಗತಿಸಿದ ಲಾಭಾಂಶ:**

ಲಾಭಾಂಶವನ್ನು ಘೋಷಿಸಿದ ತಾರೀಖಿನಿಂದ 3 ವರ್ಷದ ಒಳಗಾಗಿ ಸದಸ್ಯರು ಡಿವಿಡೆಂಡ್‌ನ್ನು ಪಡೆಯದೆ ಇದ್ದರೆ ಅಂತಹ ಸದಸ್ಯರಿಗೆ 3 ತಿಂಗಳ ಒಳಗಾಗಿ ಡಿವಿಡೆಂಡ್‌ನ್ನು ಪಡೆಯಬೇಕೆಂದು ಮಂಡಳಿಯವರು ಸೂಚನಾ ಪತ್ರವನ್ನು ಕಳುಹಿಸಿಕೊಡತಕ್ಕದ್ದು.ಆ ಅವಧಿಯಲ್ಲೂ ಸದಸ್ಯರು ಡಿವಿಡೆಂಡ್‌ನ್ನು ಪಡೆಯದೆ ಇದ್ದಲ್ಲಿ ಆ ಡಿವಿಡೆಂಡ್ ಮೊಬಲಗನ್ನು ಮೀಸಲು ನಿಧಿಗೆ (ರಿಸರ್ವ್ ಫಂಡಿಗೆ) ಜಮಾ ಮಾಡಿಕೊಳ್ಳತಕ್ಕದ್ದು.ಈ ಬೈಲಾ ಉದ್ದೇಶಕ್ಕಾಗಿ ವಾರ್ಷಿಕ ವರದಿಯಲ್ಲಿ ಸೂಚನೆಯನ್ನು ನೀಡಿದರೆ ಸಾಕಾಗುತ್ತದೆ.

## ಅಧ್ಯಾಯ – 16

## ಮೀಸಲು ನಿಧಿ

**102. ಮೀಸಲು ನಿಧಿ :**

ಮೀಸಲು ನಿಧಿಯು ಈ ಕೆಳಗಿನ ಮೊಬಲಗುಗಳನ್ನೊಳಗೊಂಡಿರತಕ್ಕದ್ದು.

(ಅ) ಉಪವಿಧಿ 99.1 ರ ಅನುಸಾರವಾಗಿ ಪ್ರತಿ ವರ್ಷ ನಿವ್ವಳ ಲಾಭದಿಂದ ಜಮಾ ಮಾಡಿದ ಮೊಬಲಗು

(ಆ) ಬ್ಯಾಂಕಿನಿಂದ ಮುಟ್ಟುಗೋಲು ಹಾಕಿದ ಷೇರುಗಳ ಮೊತ್ತವಿದ್ದರೆ, ಅಂತಹ ಮೊಬಲಗು.

(ಇ) ಗತಿಸಿದ ಡಿವಿಡೆಂಡ್ ಮೊಬಲಗು.

(ಈ) ವಿಲೇವಾರಿಯಾಗದ ಲಾಭ.

(ಉ) ದಾನಗಳಿಂದ ಬರುವ ಮೊಬಲಗು.

(ಊ) ನಾಮ ಮಾತ್ರ ಸದಸ್ಯರಿಂದ ಬಂದ ಶುಲ್ಕ.

(ಋ) ಪ್ರವೇಶ ಶುಲ್ಕ

**103. ಮೀಸಲು ನಿಧಿಯ ಹೂಡಿಕೆ :**

ಹಿಂದಿನ ಸಹಕಾರ ವರ್ಷದ ಅಂತ್ಯದಲ್ಲಿದ್ದ ಮೀಸಲು ನಿಧಿಯನ್ನು ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಅಥವಾ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಿ ದೀರ್ಘಾವಧಿ ಠೇವಣಿಯನ್ನಾಗಿ ಅಥವಾ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949(ಎಎಸಿಎಸ್) ರಡಿ ಅನುಮತಿಸಿದ ಭದ್ರತಾ ಪತ್ರಗಳಲ್ಲಿ ಇಡತಕ್ಕದ್ದು. ಸಾಮಾನ್ಯವಾಗಿ ರಿಜಿಸ್ಟ್ರಾರನ ಅನುಮತಿಯಿಲ್ಲದೆ ಈ ಮೊಬಲಗನ್ನು ಹಿಂಪಡೆಯತಕ್ಕದ್ದಲ್ಲ. ಆದಾಗ್ಯೂ ಬ್ಯಾಂಕಿನ ಉದ್ದೇಶಗಳ ಪೂರೈಕೆಗೆ ಅಗತ್ಯವಾದ ಭೂಮಿ ಅಥವಾ ಕಟ್ಟಡಗಳನ್ನು ಖರೀದಿಸಲು ಈ ನಿಧಿಯ ಸ್ವಲ್ಪ ಭಾಗವನ್ನು ರಿಜಿಸ್ಟ್ರಾರನ ಅನುಮತಿಯಿಂದ ಉಪಯೋಗಿಸಿಕೊಳ್ಳಬಹುದು.

**104. ಸದಸ್ಯರ ಮರಣೋತ್ತರ ಸಹಾಯ ನಿಧಿ ಸ್ಥಾಪನೆ :**

ಉಪವಿಧಿ 5(23) ರಲ್ಲಿ ಉದ್ದೇಶಿಸಿದಂತೆ ಬ್ಯಾಂಕಿನ ಸದಸ್ಯರ ಅನುಕೂಲಕ್ಕಾಗಿ ಒಂದು ಮರಣೋತ್ತರ ಸಹಾಯ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಈ ನಿಧಿಗೆ ಬ್ಯಾಂಕಿನ ಪ್ರತಿಯೊಬ್ಬ ಸದಸ್ಯರೂ ನಿಗದಿಪಡಿಸಿದ ಚಂದಾಹಣವನ್ನು ವರ್ಷಕ್ಕೊಂದುಸಾರಿ ಪಾವತಿ ಮಾಡತಕ್ಕದ್ದು.ಈ ನಿಧಿಯು ಸದಸ್ಯರ ಚಂದಾ ಹಣದ ಜೊತೆಗೆ ಬ್ಯಾಂಕಿನ ಪ್ರತಿ ವರ್ಷದ ಲಾಭದ ವಿಂಗಡಣೆಯಿಂದ ತೆಗೆದಿಟ್ಟ ಮೊಬಲಗನ್ನು ಒಳಗೊಂಡಿರುತ್ತದೆ.ಪ್ರತಿಯೊಬ್ಬ ಮೃತ ಸದಸ್ಯರ ಕುಟುಂಬಕ್ಕೆ ಕೊಡಬಹುದಾದ ಪರಿಹಾರದ ಪ್ರಮಾಣ ಮತ್ತು ಸದಸ್ಯರುಗಳ ವಾರ್ಷಿಕ ಚಂದಾ ಕಾಲಕಾಲಕ್ಕೆ ಮಂಡಳಿಯ ಸಭೆಯಲ್ಲಿ ತೀರ್ಮಾನವಾದಂತೆ ಇರತಕ್ಕದ್ದು.

*ಸೂಚನೆ* : ಸದಸ್ಯರಿಂದ ಬರಬೇಕಾದ ಚಂದಾ ಹಣವನ್ನು ಸದಸ್ಯರಿಗೆ ಕೊಡಬಹುದಾದ ಲಾಭಾಂಶದಿಂದ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು. ಒಂದು ವೇಳೆ ಕೊಡತಕ್ಕ ಲಾಭಾಂಶವು ಬ್ಯಾಂಕಿಗೆ ಸಲ್ಲಿಸಬೇಕಾದ ಚಂದಾದರಕ್ಕಿಂತ ಕಡಿಮೆ ಇದ್ದಲ್ಲಿ ಸದಸ್ಯರು ಕಡಿಮೆ ಬೀಳುವ ಚಂದಾ ಹಣವನ್ನು ಕೇಳಿದ ತಕ್ಷಣವೇ ಸಂದಾಯ ಮಾಡತಕ್ಕದ್ದು.

## ಅಧ್ಯಾಯ – 17

## ನೌಕರರ ವಂತಿಕೆ ಭವಿಷ್ಯ ನಿಧಿ, ಬೋನಸ್

**105. ನೌಕರರ ವಂತಿಕೆ ಭವಿಷ್ಯನಿಧಿ :**

ನೌಕರರ ಭವಿಷ್ಯ ನಿಧಿ ಮತ್ತು ಇತರೆ ಅವಕಾಶಗಳನ್ನು ಕಾಯ್ದೆ 1952 ರ ಅನ್ವಯ ಬ್ಯಾಂಕು ತನ್ನ ಸಿಬ್ಬಂದಿಯ ಉಪಯೋಗಕ್ಕಾಗಿ ನೌಕರರ ವಂತಿಗೆ ಭವಿಷ್ಯನಿಧಿ ಸ್ಥಾಪಿಸತಕ್ಕದ್ದು.

**106. ನೌಕರರ ವಂತಿಕೆ ಭವಿಷ್ಯ ನಿಧಿಯ ತೊಡಗಣೆ:**

ಉಪವಿಧಿ 105 ರ ಅಡಿಯಲ್ಲಿ ಪ್ರಾರಂಭಿಸಲಾದ ನೌಕರರ ಭವಿಷ್ಯ ನಿಧಿಯನ್ನು

(ಅ) ಬ್ಯಾಂಕಿನ ವ್ಯವಹಾರದಲ್ಲಿ ಉಪಯೋಗಿಸತಕ್ಕದ್ದಲ್ಲ. ಆದರೆ ಸರ್ಕಾರ ಮತ್ತು ಇತರೆ ವಿಶ್ವಸ್ಥ ಭದ್ರತೆಗಳಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಅಥವಾ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ನಿಶ್ಚಿತ ಠೇವಣಿಗಳಲ್ಲಿ ಅಥವಾ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರವರಲ್ಲಿ ಪ್ರತ್ಯೇಕವಾಗಿ ತೊಡಗಿಸತಕ್ಕದ್ದು.

(ಆ) ಬ್ಯಾಂಕಿನ ಆಸ್ತಿಯ ಭಾಗವಾಗಿ ಪರಿಗಣಿಸತಕ್ಕದ್ದಲ್ಲ.

**107. ಸಿಬ್ಬಂದಿ ಗ್ರಾಚ್ಯುಟಿ ನಿಧಿ :**

ಬ್ಯಾಂಕು ಗ್ರಾಚ್ಯುಟಿ ಕಾಯ್ದೆ ನಿಯಮಗಳಿಗನುಸಾರವಾಗಿ ನೌಕರರ ಉಪದಾನ ನಿಧಿಯನ್ನು (ಗ್ರಾಚ್ಯುಟಿ) ಸ್ಥಾಪಿಸತಕ್ಕದ್ದು ಮತ್ತು ಅವರ ನಿಧಿಗೆ ಪ್ರತಿವರ್ಷ ಗ್ರಾಚ್ಯುಟಿ ಕಾಯ್ದೆ ಮತ್ತು ನಿಯಮಾವಳಿಗಳ ಪ್ರಕಾರ ವಂತಿಕೆ ನೀಡತಕ್ಕದ್ದು.

**108. ನೌಕರರ ಬೋನಸ್ :**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಮು 57 ಉಪ ಕಲಮು 3 ಖಂಡ (ಎಫ್) ರ ಪ್ರಕಾರ ಬ್ಯಾಂಕಿನ ಸಿಬ್ಬಂದಿಗೆ ಬೋನಸ್ ಪಾವತಿಯನ್ನು ನಿರ್ಧರಿಸತಕ್ಕದ್ದು.

ಯಾವುದೇ ಆರ್ಥಿಕ ವರ್ಷದಲ್ಲಿ ಯಾವ ಒಬ್ಬ ನೌಕರನಿಗೆ ಅವನ/ಅವಳ ಎರಡು ತಿಂಗಳ ವೇತನಕ್ಕಿಂತ ಹೆಚ್ಚು ಬೋನಸ್/ಎಕ್ಸ್‌ಗ್ರೇಷಿಯಾ ಪಾವತಿ ಮಾಡುವಂತಿಲ್ಲ.

## ಅಧ್ಯಾಯ – 18

## ಸದಸ್ಯರಿಂದ ದಾಖಲೆಗಳ ಪರಿವೀಕ್ಷಣೆ

**109. ಉಪವಿಧಿಗಳ ಮತ್ತು ಇತರೆ ದಾಖಲೆಗಳ ಪರಿವೀಕ್ಷಣೆ :**

ಬ್ಯಾಂಕಿನ ಉಪವಿಧಿಗಳು ಮತ್ತು ಇತರೆ ದಾಖಲೆಗಳನ್ನು ಬ್ಯಾಂಕಿಗೆ ಮುನ್ಸೂಚನೆ ನೀಡಿ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಯಾವ ಸದಸ್ಯನೇ ಆಗಲಿ ಪರೀಕ್ಷಿಸಲು ಅಧಿಕಾರ ಹೊಂದಿರುತ್ತಾನೆ. ಆ ಸದಸ್ಯನು ಅದರ ಬಗ್ಗೆ ಟಿಪ್ಪಣಿ ಬರೆದಿಟ್ಟುಕೊಳ್ಳಬಹುದು ಮತ್ತು ಅವಶ್ಯಕತೆ ಕಂಡು ಬಂದರೆ ನಿಗದಿತ ಶುಲ್ಕವನ್ನು ಪಾವತಿಸಿ ಅವುಗಳ ನಕಲುಗಳನ್ನು ಕೋರಿಕೆಯ ಮೇಲೆ ಪಡೆಯಬಹುದು. ಮುನ್ಸೂಚನೆ ಕೊಟ್ಟು ಸಾಮಾನ್ಯ ಸಭೆಯ ನಡವಳಿಕೆಗಳನ್ನು ಪರೀಕ್ಷಿಸಲು ಬಯಸುವ ಸದಸ್ಯರಿಗೆ ಬ್ಯಾಂಕಿನವರು ಅವಕಾಶ ಕಲ್ಪಿಸಿಕೊಡಬಹುದು.ಸದಸ್ಯರು ನಿಗದಿತ ಶುಲ್ಕ ನೀಡಿದ ನಂತರ ಸಕಾಲದಲ್ಲಿ ಅವರು ಬಯಸಿದ ಪ್ರತಿಗಳನ್ನು ಬ್ಯಾಂಕಿನವರು ಕೊಡತಕ್ಕದ್ದು.

**110. ಸದಸ್ಯನಿಂದ ತನ್ನ ಸ್ವಂತ ಖಾತೆಯ ಪರಿವೀಕ್ಷಣೆ :**

ಬ್ಯಾಂಕಿಗೆ ಮುನ್ಸೂಚನೆ ಕೊಟ್ಟು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಖಾತೆದಾರ ಸದಸ್ಯರೇ ಆಗಲಿ, ಗ್ರಾಹಕರೇ ಆಗಲಿ ತಾವು ಬ್ಯಾಂಕಿನೊಡನೆ ಮಾಡಿರುವ ವ್ಯವಹಾರಗಳಿಗೆ ಸಂಬಂಧಿಸಿದ ರಿಜಿಸ್ಟರುಗಳನ್ನು, ಖಾತೆ ಪುಸ್ತಕಗಳನ್ನು, ದಾಖಲೆ ಇತ್ಯಾದಿಗಳನ್ನು ಪರೀಕ್ಷಿಸಬಹುದು.ಆ ಸದಸ್ಯರು ಅದರ ಬಗ್ಗೆ ಟಿಪ್ಪಣಿ ಬರೆದಿಟ್ಟುಕೊಳ್ಳವುದು ಮತ್ತು ಬ್ಯಾಂಕಿಗೆ ನಿಗದಿತ ಶುಲ್ಕವನ್ನು ಪಾವತಿಸಿ ಬಯಸಿದ ಪ್ರತಿಗಳನ್ನು ಪಡೆಯಬಹುದು.

**111. ಸದಸ್ಯರ ಪಟ್ಟಿಯ ಪ್ರತಿಯ ಪೂರೈಕೆ (ಓಟರ್ ಲಿಸ್ಟ್) :**

ಬ್ಯಾಂಕ್ ತನ್ನ ಸದಸ್ಯರ ಇತ್ತೀಚಿನ ಪಟ್ಟಿಯನ್ನು ವರ್ಷಕ್ಕೊಮ್ಮೆ ಸದಸ್ಯರ ಹೆಸರು ಮತ್ತು ಪೂರ್ತಿ ವಿಳಾಸದೊಡನೆ ತಯಾರಿಸಿ ಬಯಸಿದ ಸದಸ್ಯರಿಗೆ ಮಂಡಳಿಯವರು ನಿಗದಿಪಡಿಸಿದ ಶುಲ್ಕವನ್ನು ಪಡೆದ ನಂತರ ಪ್ರತಿಗಳನ್ನು ಕೊಡುವ ವ್ಯವಸ್ಥೆ ಮಾಡತಕ್ಕದ್ದು.ಮುಖ್ಯ ಕಾರ್ಯನಿರ್ವಾಹಕರು ಅಂತಹ ಪ್ರತಿಗಳನ್ನು ತಮ್ಮ ಸಹಿ, ಬ್ಯಾಂಕಿನ ಮುದ್ರೆ ಮತ್ತು ಕೊಟ್ಟ ತಾರೀಖನ್ನು ನಮೂದಿಸಿ ನೀಡಬಹುದು.

## ಅಧ್ಯಾಯ – 19

## ಇತರೆ ನಿಯಮಗಳು

**112. ಉಪವಿಧಿಗಳ ತಿದ್ದುಪಡಿಯ ವಿಧಾನ :**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೊಳಪಟ್ಟು ಬ್ಯಾಂಕಿನ ಉಪವಿಧಿಗಳನ್ನು ಸಾಮಾನ್ಯ' ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಸದಸ್ಯರ ಪೈಕಿ ಕನಿಷ್ಠ 2/3 ರಷ್ಟು ಬಹುಮತ ಬಂದಲ್ಲಿ ತಿದ್ದುಪಡಿ ಮಾಡಬಹುದು.ಆದರೆ ಆ ತಿದ್ದುಪಡಿ ಸೂಚನಾ ಪತ್ರವನ್ನು ಸದಸ್ಯರಿಗೆ ಸಭೆಯ ಹದಿನೈದು ದಿನಗಳ ಮುಂಚಿತವಾಗಿ ಕೊಟ್ಟಿರಬೇಕು.ಉಪವಿಧಿಗಳ ಸೇರ್ಪಡೆಗಳು, ರದ್ದತಿಗಳು ಮತ್ತು ತಿದ್ದುಪಡಿಗಳು ನಿಬಂಧಕರಿಂದ ನೋಂದಣಿಯಾದ ದಿನದಿಂದ ಜಾರಿಯಲ್ಲಿ ಬರುವವು.

**113. ರಹಸ್ಯಗಳನ್ನು ಕಾಪಾಡುವುದು :**

ಮಂಡಳಿಯ ಪ್ರತಿಯೊಬ್ಬ ಸದಸ್ಯನೂ ಮತ್ತು ಬ್ಯಾಂಕಿನ ಪ್ರತಿಯೊಬ್ಬ ನೌಕರನೂ ಕರ್ತವ್ಯಕ್ಕೆ ಹಾಜರಾಗುವ ಮೊದಲು ಮಂಡಳಿಯವರು ನಿಗದಿಪಡಿಸಿದ ನಮೂನೆಯಲ್ಲಿ ಸದಸ್ಯರೊಡನೆ ಮತ್ತು ಗ್ರಾಹಕರೊಡನೆ ವ್ಯವಹರಿಸುವುದನ್ನು ಮತ್ತು ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಗೋಪ್ಯವಾಗಿಡುವನೆಂದು ಘೋಷಣಾಪತ್ರವನ್ನು ಕೊಡತಕ್ಕದ್ದು ಮತ್ತು ತನ್ನ ಕರ್ತವ್ಯ ನಿರ್ವಹಣೆ ಸಮಯದಲ್ಲಿ ತಿಳುವಳಿಕೆಗೆ ಬರುವಂತಹ ವಿಷಯಗಳನ್ನು ತಿಳಿಸತಕ್ಕದ್ದಲ್ಲ. ಮಂಡಳಿಯವರು ಅಥವಾ ಇತರೆ ಅಧಿಕಾರವುಳ್ಳವರು ಆಜ್ಞಾಪಿಸಿದಾಗ ಅಥವಾ ಉಪವಿಧಿಗಳಲ್ಲಿ ಅವಕಾಶವಿದ್ದಾಗ ಮಾತ್ರ ಅಂತಹ ಸದಸ್ಯನು ಮತ್ತು ಉದ್ಯೋಗಿಯು ಅಂತಹ ವಿಷಯವನ್ನು ತಿಳಿಸಬಹುದು.

**114. ಸಾಮಾನ್ಯ ಮುದ್ರೆ :**

ಬ್ಯಾಂಕು ಒಂದು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು.ಮುದ್ರೆಯನ್ನು ಹಾಕಿರುವ ಪ್ರತಿ ದಾಖಲೆಗೂ ಅಧ್ಯಕ್ಷರು ಅಥವಾ ಮುಖ್ಯ ಕಾರ್ಯನಿರ್ವಾಹಕರು ಅಥವಾ ಅವರಿಂದ ಸಕ್ರಮವಾಗಿ ಅಧಿಕಾರ ಪಡೆದ ಅಧಿಕಾರಿಯು ರುಜು ಹಾಕಿರತಕ್ಕದ್ದು.ಮುದ್ರೆಯು ಮುಖ್ಯ ಕಾರ್ಯನಿರ್ವಾಹಕರು ಅಥವಾ ಅವರಿಂದ ಸಕ್ರಮವಾಗಿ ಅಧಿಕಾರ ಪಡೆದು ಅಧಿಕಾರಿಯ ವಶದಲ್ಲಿರತಕ್ಕದ್ದು.

**115. ಉಪವಿಧಿಗಳಲ್ಲಿ ನಮೂದಿಸದೆ ಇರುವ ವಿಷಯಗಳು :**

ಉಪವಿಧಿಗಳಲ್ಲಿ ನಮೂದಿಸದೆ ಇರುವ ಯಾವ ವಿಷಯವನ್ನಾದರೂ 1949 ನೇ ಬ್ಯಾಂಕಿಂಗ್ ನಿಯಂತ್ರಣ (ಸಹಕಾರ ಸಂಘಗಳಿಗೆ ಅನ್ವಯಿಸುವ) ಕಾಯ್ದೆ, ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ತೀರ್ಮಾನಿಸತಕ್ಕದ್ದು.

**116. ಇತರೆ ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವ :**

ಬ್ಯಾಂಕು ಈ ಕೆಳಕಂಡ ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆಯಬಹುದು.

(ಅ) ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ.

(ಆ) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ ಬ್ಯಾಂಕ್ ನಿಯಮಿತ, ಬೆಂಗಳೂರು.

(ಇ) ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ನಿಯಮಿತ, ಬೆಂಗಳೂರು.

(ಈ) ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಿ ನಿಯಮಿತ, ಬೆಂಗಳೂರು.

(ಉ) ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ರಾಷ್ಟ್ರೀಯ ಮಹಾಮಂಡಳಿ ನಿಯಮಿತ, ಹೊಸದಿಲ್ಲಿ.

(ಊ) ಜಿಲ್ಲಾ ಸಹಕಾರ ಯೂನಿಯನ್

(ಋ) ಬ್ಯಾಂಕಿಂಗ್ ಮತ್ತು ಸಹಕಾರ ಶಿಕ್ಷಣಕ್ಕೆ ಅನುಕೂಲಕರವಾದ ಉದ್ದೇಶವುಳ್ಳ ಇತರೆ ಸಂಸ್ಥೆಗಳು.

**117. ಉಪವಿಧಿಗಳ ಪ್ರಕಾರ ಮುನ್ಸೂಚನೆ :**

ಷೇರುದಾರರು, ಠೇವಣಿದಾರರು ಮತ್ತು ಇತರ ಗ್ರಾಹಕರು ಬ್ಯಾಂಕಿಗೆ ಕೊಟ್ಟಿರುವ ಅವರ ವಿಳಾಸಕ್ಕೆ ಬ್ಯಾಂಕಿನವರು ಮುನ್ಸೂಚನೆ ಮತ್ತು ಇತರೆ ಎಲ್ಲಾ ಸೂಚನಾಪತ್ರಗಳನ್ನು ಕೊಟ್ಟಿದ್ದರೆ ಅಥವಾ ಅಂಚೆ ಮೂಲಕ ಕಳುಹಿಸಿದ್ದರೆ ಅಂತಹ ಪತ್ರಗಳು ತಲುಪಿದೆ ಎಂದು ಭಾವಿಸತಕ್ಕದ್ದು. ವಿಳಾಸದಲ್ಲಿ ಬದಲಾವಣೆ ಏನಾದರೂ ಇದ್ದಲ್ಲಿ ಅಂತಹವರು ಕೂಡಲೇ ಬ್ಯಾಂಕಿಗೆ ತಿಳಿಸುವುದು ಅವರ ಆದ್ಯ ಕರ್ತವ್ಯ.

**118. ಬ್ಯಾಂಕಿನ ಅಧಿಕಾರಿಗಳು ಸದಸ್ಯರ ಆಸ್ತಿಯನ್ನು ಕೊಳ್ಳಲು ನಿಷೇಧ :**

ಬ್ಯಾಂಕಿಗೆ ಬರಬೇಕಾದ ಬಾಕಿ ವಸೂಲಿಗಾಗಿ ಸುಸ್ತಿ ಸದಸ್ಯರ ಯಾವುದಾದರೂ ಆಸ್ತಿಯನ್ನು ವಿಕ್ರಯಕ್ಕೆ ತಂದಲ್ಲಿ ಬ್ಯಾಂಕಿನ ನಿರ್ದೇಶಕರು, ಯಾವ ಅಧಿಕಾರಿ ಅಥವಾ ಉದ್ಯೋಗಿಯೇ ಆಗಲಿ ಪ್ರತ್ಯೇಕ್ಷವಾಗಿ ಅಥವಾ ಪರೋಕ್ಷವಾಗಿ ಅಂತಹ ಆಸ್ತಿಯನ್ನು ಕೊಳ್ಳತಕ್ಕದ್ದಲ್ಲ.

**119. ಬ್ಯಾಂಕಿನ ಅಮೂಲ್ಯ ದಾಖಲೆಗಳ ಸಂರಕ್ಷಣಾ ವಿಧಾನ :**

ಮಂಡಳಿಯು ನಿರ್ಧರಿಸಿದಂತೆ ತುರ್ತುಪರಿಸ್ಥಿತಿಯಲ್ಲಿ ಬ್ಯಾಂಕಿನ ಅಭಿರಕ್ಷೆಯಲ್ಲಿರುವ ಯಾವುದೇ ಬೀಗದ ಕೈ ಒಳಗೊಂಡ ಸ್ವತ್ತು, ದಸ್ತಾವೇಜುಗಳು, ಆಧಾರ ಪತ್ರಗಳು ಇವುಗಳನ್ನು ಸಹಕಾರದ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಪೂರಕ ಬ್ಯಾಂಕುಗಳು, ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ಅಥವಾ ಯಾವುದೇ ಇತರ ಬ್ಯಾಂಕಿನ ಅಭಿರಕ್ಷೆಯಲ್ಲಿ ಇಡತಕ್ಕದ್ದು.

**120. ನಿಬಂಧಕರ ಅಭಿಪ್ರಾಯ :**

ಸಹಕಾರ ಸಂಘಗಳ ಕಾಯ್ದೆ, ನಿಯಮಗಳು ಮತ್ತು ಈ ಉಪವಿಧಿಗಳ ರಚನಾಕ್ರಮದಲ್ಲಿ ಅಥವಾ ವ್ಯಾಖ್ಯಾನದಲ್ಲಿ ಸಂಶಯ ಉದ್ಭವಿಸಿದಲ್ಲಿ ನಿಬಂಧಕರ ಅಭಿಪ್ರಾಯವೇ ಅಂತಿಮವೆಂದು ಪರಿಗಣಿಸತಕ್ಕದ್ದು.

**121. ಸಿಬ್ಬಂದಿ ಬಲ ಮತ್ತು ನೌಕರರ ವೇತನ ಶ್ರೇಣಿಗಳು :**

ಮಾನವ ಸಂಪನ್ಮೂಲ ಅಭಿವೃದ್ಧಿ ನೀತಿ ಕರ್ನಾಟಕ ಸಹಕಾರ ಸಂಘಗಳ(ತಿದ್ದುಪಡಿ) ನಿಯಮ ಕಲಂ 17ರ ಅಡಿಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯು ಭಾರತೀಯ ರಿಸರ್ವ್ ಬ್ಯಾಂಕು ಅಥವಾ ರಿಜಿಸ್ಟ್ರಾರನು ಅಥವಾ ರಾಜ್ಯ ಸರ್ಕಾರವು ಹೊರಡಿಸುವ ಮಾರ್ಗಸೂಚಿಗಳನ್ನು ಮತ್ತು ತನ್ನ ವ್ಯವಹಾರದ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಪಾರದರ್ಶಕ ಮಾನವ ಸಂಪನ್ಮೂಲ ಅಭಿವೃದ್ಧಿ ನೀತಿಯನ್ನು ರೂಪಿಸತಕ್ಕದ್ದು ಮತ್ತು ಸಾಮಾನ್ಯ ನಿಕಾಯದ ಅನುಮೋದನೆ ಪಡೆಯತಕ್ಕದ್ದು.

**ಸೂಚನೆ:– ಲೋಪ ದೋಷಗಳ ತಿದ್ದುಪಡಿ ಹಾಗೂ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.**